ಜನಶಕ್ತಿ

ಕನ್ನಡ ವಾರಪತ್ರಿಕೆ




Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 46

ನವೆಂಬರ್ 11, 2012

ಪುಟ 16 ರೂ. 5/-




ಕಾರ್ಪೊರೇಟ್ ಕಂಪನಿಗಳ ಹಿತ ಕಾಯಲು ಮಂತ್ರಿಮಂಡಲ ಪುನರ್ರಚನೆ



ರೈತರ ಭೂಮಿ ಬಂಡವಾಳಗಾರರ ಬಾಯಿಗೆ





ಮನೆಗೆ ಮರಳಿದ ಕೃಷ್ಣ

ಏಕೀಕೃತ ಕನ್ನಡ ನಾಡಿಗೆ ಕನ್ನಡಿಗರಿಂದಲೇ ಆಪತ್ತು





ಕನ್ನಡ ಶಾಲೆ ಮುಚ್ಚಬೇಡಿ ಎಂದವರ ಜೈಲಿಗಟ್ಟಿದರು....

ಕಾಡಲಿದೆ ವಿದ್ಯುತ್ ಕ್ಷಾಮ!

ಮಹಿಳಾ ದೌರ್ಜನ್ಯ ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆಗಳು

ಮಹಿಳೆಯರ ಮತ್ತು ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯಗಳ ವಿರುದ್ಧ ರಾಷ್ಟ್ರವ್ಯಾಪ್ತದಲ್ಲಿ ಸಿಪಿಐ(ಎಂ) ಪಕ್ಷವು ಅಕ್ಟೋಬರ್ 30 ರಂದು ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದುದರ ಭಾಗವಾಗಿ ಉಡುಪಿಯಲ್ಲಿ ಮತ್ತು ಮಂಗಳೂರಿನಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದವು:

ಉಡುಪಿ:

ಉಡುಪಿಯಲ್ಲಿ ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಬಾಲಕೃಷ್ಣ ಶೆಟ್ಟಿ ಹಾಗೂ ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್ ಮಾತನಾಡಿದರು.

ಮಾಧ್ಯಮಗಳಲ್ಲಿ ಮಹಿಳೆಯರನ್ನು ಒಂದು ವಸ್ತುವಿನ ರೀತಿಯಲ್ಲಿ ಚಿತ್ರಿಸಲಾಗುತ್ತಿದೆ. ಜಾತಿ, ಧರ್ಮಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಿರಂತರ ದೌರ್ಜನ್ಯ ಎಸಗಲಾಗುತ್ತಿದೆ, ಇವೆಲ್ಲವೂ ನಿಲ್ಲಬೇಕಿದ್ದರೆ ಮಹಿಳೆಯರ ಸಬಲೀಕರಣ ಆಗಬೇಕು. ಬೇರೆ ಬೇರೆ ಧರ್ಮಗಳ ಯುವಕ ಯುವತಿಯರು ಪರಸ್ಪರ ಮಾತನಾಡಿದ ಕಾರಣಕ್ಕೆ ಹಲ್ಲೆ ನಡೆಸುವುದು ಖಂಡನೀಯ. ಸಮಾಜದಲ್ಲಿ ಮಹಿಳೆಯನ್ನು ಕೀಳಾಗಿ ನೋಡುವ ಪ್ರವೃತ್ತಿ ಹೋಗಬೇಕು. ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಸಿಗಬೇಕಾದರೆ ಮೊದಲು ಮಹಿಳೆಯರ ಮೇಲಿನ ದೌರ್ಜನ್ಯ ನಿಲ್ಲಬೇಕು ಎಂಬುದಾಗಿ ಬಾಲಕೃಷ್ಣ ಶೆಟ್ಟಿ ಹೇಳಿದರು.


ಬೆಂಗಳೂರು

ಉಡುಪಿಯ ಬಸ್ ನಿಲ್ದಾಣದ ಬಳಿ ಮಹಾತ್ಮಾ ಗಾಂಧಿ ಪ್ರತಿಮೆಯ ಎದುರು ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಪಕ್ಷದ ಜಿಲ್ಲಾ ಸಮಿತಿ ಮುಖಂಡರಾದ ಪಿ.ವಿಶ್ವನಾಥ ರೈ, ವಿಠಲ ಪೂಜಾರಿ, ದೋಗು ಸುವರ್ಣ, ಮಹಾಬಲ ವಡೇರಹೋಬಳಿ ಅಲ್ಲದೆ ಕಾರ್ಯಕರ್ತರಾದ ಲಕ್ಷ್ಮಣ, ವಿದ್ಯಾರಾಜ್, ಸುರೇಶ್, ಲಕ್ಷ್ಮೀ ನಂದಕುಮಾರ್, ಮಾಲತಿ ನಾಯಕ್, ಸುಜಾತ ಶೆಟ್ಟಿ, ಕೃಷ್ಣಮ್ಮ ಮತ್ತಿತರರು ಪಾಲ್ಗೊಂಡಿದ್ದರು.

ಮಂಗಳೂರು :

ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮ ರೆಡ್ಡಿ ಮಾತನಾಡಿದರು.

ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಅತ್ಯಾಚಾರವನ್ನು ತಡೆಗಟ್ಟುವಲ್ಲಿ ಪರಿಣಾಮಕಾರಿಯಾದ ಕಾನೂನು ಇಲ್ಲವಾಗಿದ್ದು, ಆಳುವ ವರ್ಗಗಳು ಶಿಶುವಿನಿಂದ ಹಿಡಿದು ವಯೋವೃದ್ಧ ಮಹಿಳೆಯರ ಮೇಲೆ ತೀವ್ರಗೊಳ್ಳುತ್ತಿರುವ ಅತ್ಯಾಚಾರ ಪ್ರಕರಣಗಳನ್ನು ತಡೆಗಟ್ಟುವಲ್ಲಿ ವಿಫಲವಾಗಿವೆ ಎಂದು ಶ್ರೀರಾಮರೆಡ್ಡಿ ಆರೋಪಿಸಿದರು.

ಮಹಿಳೆಯರ ಮೇಲಿನ ಮಾನಭಂಗಗಳಿಗೆ ಡ್ರೆಸ್‌ಕೋಡ್ ಕಾರಣವಲ್ಲ, ಪುರುಷರೂ ಮಹಿಳೆಯರು ಜೊತೆ ಜೊತೆಯಲ್ಲಿ ಓಡಾಡುವುದೂ ಕಾರಣವಲ್ಲ, ಮಹಿಳೆಯರ ಬಗೆಗೆ ಇರುವ ಪಾಳೆಯಗಾರಿ ಆಲೋಚನಾ ಕ್ರಮ ಅಥವಾ ಪುರುಷವಾದಿ ದೃಷ್ಟಿಕೋನವೇ ಕಾರಣ ಎಂದು ವಿವರಿಸಿದ ಅವರು ಇದಕ್ಕೆ ಬಾಲ್ಯ ವಿವಾಹ ಪರಿಹಾರವಲ್ಲ ಎಂದೂ ಹೇಳಿದರು.


ಹಾಸನ

ಅತ್ಯಾಚಾರ, ದೌರ್ಜನ್ಯಕ್ಕೊಳಗಾದ ಮಹಿಳೆ ತನಗಾದ ಅನ್ಯಾಯದ ಬಗ್ಗೆ ದೂರು ನೀಡಲು ಹೋದಾಗ, ಪೊಲೀಸ್ ಠಾಣೆಯಲ್ಲಿ ಮುಜುಗರ, ಮಾನಸಿಕ ಹಿಂಸೆ ಅನುಭವಿಸುವ ಪರಿಸ್ಥಿತಿ ಇರುತ್ತದೆ. ಇದರಿಂದಾಗಿ ಬಹುತೇಕ ಪ್ರಕರಣಗಳು ದಾಖಲಾಗುತ್ತಿಲ್ಲ. ಮಹಿಳೆಯರ ದೌರ್ಜನ್ಯ ವಿರುದ್ಧ ರಕ್ಷಣೆ ನೀಡಬೇಕಾದ


ಮಂಗಳೂರು

ಜವಾಬ್ದಾರಿ ರಾಜಕೀಯ ಪಕ್ಷಗಳಿಗಿದ್ದು, ಸಿಪಿಐ(ಎಂ) ಈ ನಿಟ್ಟಿನಲ್ಲಿ ತನ್ನ ಕರ್ತವ್ಯ ನಿರ್ವಹಿಸುತ್ತಿದೆ ಎಂದು ಅವರು ಹೇಳಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಪ್ರಸ್ತಾವನೆ ಮಾಡಿ ಸ್ವಾಗತಿಸಿದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯರು, ಇನ್ನೂರರಷ್ಟು ಮಂದಿ ಪಕ್ಷದ ಹಿತೈಷಿಗಳು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೈಸೂರಿನಲ್ಲಿ ಪ್ರತಿಭಟನೆ

ಸಿಪಿಐ (ಎಂ) ಮೈಸೂರು ಜಿಲ್ಲಾ ಸಮಿತಿವತಿಯಿಂದ ದಿನಾಂಕ 30-10-2012 ರಂದು ಪ್ರತಿಭಟನೆ ನಡೆಯಿತು.


ಮೈಸೂರು

ನಗರದ ಗಾಂಧಿವೃತ್ತದಲ್ಲಿ ಜಮಾವಣೆಗೊಂಡ ಪಕ್ಷದ ಕಾರ್ಯಕರ್ತರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮಹಿಳಾ ವಿರೋಧಿ ನೀತಿಯ ವಿರುದ್ಧ ಘೋಷಣೆ ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಸಿಪಿಐ(ಎಂ)ನ ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾದ ಕಾಂ. ಸುನಂದ ಮಾತನಾಡಿ ದುಡಿಯುವ ಮಹಿಳೆಯರ ಮೇಲೆ ದೌರ್ಜನ್ಯಗಳು ನಿರಂತರವಾಗಿ ಹೆಚ್ಚುತ್ತಿವೆ. ವೇತನ ತಾರತಮ್ಯ ಇದ್ದು ಮಹಿಳೆಯರಿಗೆ ಕನಿಷ್ಠ ಕೂಲಿಯನ್ನು ನೀಡದೆ ದುಡಿಸಿಕೊಳ್ಳಲಾಗುತ್ತಿದೆ ಹಾಗೂ ಉದ್ಯೋಗದಲ್ಲಿ ಶೇ.33 ರಷ್ಟು ಮೀಸಲಾತಿ ಜಾರಿ ಶೀಘ್ರವೇ ಜಾರಿಯಾಗಬೇಕು ಹಾಗೆಯೇ ಇಂದು ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರ ಹಕ್ಕುಗಳನ್ನು ಕಸಿದು ಕೊಳ್ಳಲಾಗುತ್ತಿದೆ ಎಂದರು. ಸಮತಾ ವೇದಿಕೆಯ ಚಂದ್ರಮತಿ ಸೋಂದ CPI (M)ನ ಮಹಿಳಾ ಪರನೀತಿಯನ್ನು ಬೆಂಬಲಿಸಿ ಮಹಿಳೆಯರ ಸಮಸ್ಯೆಗಳ ವಿರುದ್ಧ ಲಿಂಗ ತಾರತಮ್ಯವಿಲ್ಲದೇ ಹೋರಾಟ ನಡೆಸಬೇಕಿದೆ. ಅದಕ್ಕೆ ಮಾನವೀಯ ಮನಸ್ಸಿನ ಅಗತ್ಯವಿದೆ ಎಂದರು. ನಂತರ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿಗಳಾದ ಕಾಂ.ಕೆ. ಬಸವರಾಜು ಮಾತನಾಡಿ ಮರ್ಯಾದ ಹತ್ಯೆಗಳಂತಹ ಅಮಾನವೀಯ ಆಚರಣೆಗಳು ರಾಜ್ಯದಲ್ಲೂ ಸಂಭವಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ಅಂತರ್ಜಾತಿ ಅಂತರ್ ಧರ್ಮಿಯ ವಿವಾಹಿತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ರಾಜ್ಯದಲ್ಲಿ ಸಾಮೂಹಿಕ ಅತ್ಯಾಚಾರಗಳು ನಡೆಯುತ್ತಿದೆ. ವರದಕ್ಷಿಣೆ ದೌರ್ಜನ್ಯಗಳು, ಹೆಣ್ಣು ಭ್ರೂಣ ಹತ್ಯೆಗಳು ಅವ್ಯಾಹಿತವಾಗಿ ನಡೆಯುತ್ತಿದ್ದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವುಗಳನ್ನು ತಡೆಯಲು ವಿಫಲವಾಗಿವೆ. ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಎಲ್. ಜಗನ್ನಾಥ ಕಾಂ. ಜಯರಾಂ, ಕಾಂ ವಿಜಯಕುಮಾರ್ ಕಾಂ. ಹೆಚ್.ಎಸ್. ಜಗದೀಶ್. ಕಾಂ.ವಿ. ಬಸವರಾಜ್ ಅಂಗನವಾಡಿ ನೌಕರರ ಮುಖಂಡರಾದ ಮಂಜುಳ, ವಿಜಯ, ಮೀನ ಮತ್ತು ಕಾಂ ಬಲರಾಂ ಕಾಂ. ಅಣ್ಣಪ್ಪ, ಕಾಂ. ರಾಜೇಂದ್ರ ಸೇರಿದಂತೆ. ಬಿಸಿಯೂಟ, ಅಂಗನವಾಡಿ, ಹಾಸ್ಟೆಲ್ ನೌಕರರ ಸಂಗಾತಿಗಳು ಭಾಗವಹಿಸಿದ್ದರು.

ಹಾಸನ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ

ಅಕ್ಟೋಬರ್ 30 ರಂದು ಹಾಸನದ

ಪುಟ 11 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕಾಡಲಿದೆ ವಿದ್ಯುತ್ ಕ್ಷಾಮ!

ಮುಂದಿನ ಬೇಸಿಗೆಯಲ್ಲಿ ಕರ್ನಾಟಕ ವಿದ್ಯುತ್ ಕ್ಷಾಮಕ್ಕೆ ಒಳಗಾಗುವ ಅಪಾಯವಿದೆ ಎಂದು ಸ್ವತಃ ಇಂಧನ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ. ಜಲಾಶಯಗಳಲ್ಲಿನ ನೀರಿನ ಪ್ರಮಾಣ ಕುಸಿತ, ನಿರೀಕ್ಷಿತ ಪ್ರಮಾಣದಲ್ಲಿ ಸಾಧ್ಯವಾಗದ ವಿದ್ಯುತ್ ಖರೀದಿ ಮತ್ತಿತರ ಕಾರಣಗಳಿಂದ ಒಂದು ಸಾವಿರ ಮೇಗಾ ವ್ಯಾಟ್‌ಗಿಂತಲೂ ಹೆಚ್ಚು ವಿದ್ಯುತ್ ಕೊರತೆ ಎದುರಾಗಲಿದೆ ಎಂದು ಅವರು ತಿಳಿಸಿದ್ದಾರೆ. ಈ ಹೇಳಿಕೆ ಬಿಜೆಪಿ ಸರ್ಕಾರದ ಒಟ್ಟು ವೈಫಲ್ಯತೆಗೆ ಹಿಡಿದ ಕನ್ನಡಿಯಾಗಿದೆ. ಇಡೀ 5ವರ್ಷಗಳ ಅಧಿಕಾರವಧಿಯನ್ನು ಆಂತರಿಕ ಕಚ್ಚಾಟದಲ್ಲೇ ಕಳೆದಿರುವ ಬಿಜೆಪಿ ಸರ್ಕಾರಕ್ಕೆ ವಿದ್ಯುತ್ ಕೊರತೆಯಂತಹ ಅನೇಕ ಪ್ರಮುಖ ಸಮಸ್ಯೆಗಳತ್ತ ಗಮನ ಕೊಡಲಿಕ್ಕೆ ಸಾಧ್ಯವಾಗಲೇ ಇಲ್ಲ.


ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಕುಸಿದಿದೆ ಎನ್ನುವುದು ಗುಟ್ಟಿನ ವಿಷಯವಲ್ಲ. ಮಳೆಗಾಲ ಮುಗಿಯುವ ಮೊದಲೇ ರಾಜ್ಯದ ಬಹುಪಾಲು ಪ್ರದೇಶಗಳಲ್ಲಿ ಕತ್ತಲು ಕವಿದಿದೆ. ಬರಗಾಲದ ಕಾರಣದಿಂದ ವಿದ್ಯುತ್ ಕ್ಷಾಮ ಇನ್ನೂ ಹೆಚ್ಚಾಗಲಿದೆ. ವಿದ್ಯುತ್ ಕ್ಷಾಮದಿಂದಾಗಿ ಬರದ ತೀವ್ರತೆಯೂ ಹೆಚ್ಚಾಗಲಿದೆ. ಕೊಳವೆ ಭಾವಿಗಳಿಂದ ನೀರನ್ನು ಎತ್ತಿ, ಕಷ್ಟಪಟ್ಟು ಬೆಳೆದ ಬೆಳೆಗಳನ್ನು ವಿದ್ಯುತ್ ಸಮಸ್ಯೆಯಿಂದ ಉಳಿಸಿಕೊಳ್ಳಲು ಸಾಧ್ಯವಾಗದೆ ರೈತರು ನಷ್ಟಕ್ಕೊಳಗಾಗುತ್ತಿದ್ದಾರೆ. ವಿದ್ಯುತ್ ಕಣ್ಣು ಮುಚ್ಚಾಲೆಯಿಂದ ನಗರವಾಸಿಗಳು ತೀವ್ರ ಅದ್ವಾನ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿಗಳು ಇನ್ನೊಂದು ರೀತಿಯ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ.

ಇನ್ನೊಂದೆಡೆ ಮುಂದುವರೆದ ವಿದ್ಯುತ್ ಸೋರಿಕೆ, ಬೀದಿ ದೀಪ ನಿರ್ವಹಣೆಯ ಲೋಪ, ಪ್ರಭಾವಿ ಜನ ಪಡೆಯುವ ಅಕ್ರಮ ಸಂಪರ್ಕ, ಇಲಾಖೆಯಲ್ಲಿನ ಭ್ರಷ್ಟಾಚಾರ, ಇತ್ಯಾದಿಗಳನ್ನು ತಡೆಗಟ್ಟುವಲ್ಲಿಯೂ ಶೋಭಾ ಕರಂದ್ಲಾಜೆ ಅವರ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಅನಿಯಮಿತ ಲೋಡ್ ಶೆಡ್ಡಿಂಗ್‌ನಿಂದಾಗಿ ನಗರ ಪ್ರದೇಶಗಳಲ್ಲಿ ಕಳ್ಳಕಾಕರಿಗೆ, ಕೊಲೆಗಡುಕರಿಗೆ ಅನುಕೂಲವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ 6–7ಗಂಟೆಗಳ ಕಡಿತ ಜಾರಿಯಲ್ಲಿದ್ದು. ವಿದ್ಯುತ್ ಕೊರತೆಯಿಂದ. ಕುಡಿಯುವ ನೀರಿಗೂ ಸಮಸ್ಯೆಯಾಗಿದೆ. ಸುಟ್ಟು ಹೋಗುವ ಟ್ರಾನ್ಸ್‌ಫಾರ್ಮರ್‌ಗಳನ್ನು ತಿಂಗಳು ಗಟ್ಟಲೆ ಸರಿಪಡಿಸುವುದಿಲ್ಲ. ಪಕ್ಕದಲ್ಲೇ ವಿದ್ಯುತ್ ಸಂಪರ್ಕ ಇದ್ದರೂ ಶ್ರೀಸಾಮಾನ್ಯನೊಬ್ಬನ ಮನೆಗೆ ವಿದ್ಯುತ್ ಸಂಪರ್ಕ ಪಡೆಯಲು ಆತ ವರ್ಷವಿಡಿ ಒಡಾಡಬೇಕಾಗುತ್ತದೆ. ಕಳೆದ ಬೇಸಿಗೆಯಲ್ಲಿ ವಿದ್ಯತ್ ಬೇಡಿಕೆ 200 ಎಂಯು ದಾಟಿತ್ತು, ಈ ಬಾರಿ ಬೇಡಿಕೆಯ ಪ್ರಮಾಣ ಶೇ. 25 ರಷ್ಟು ಹೆಚ್ಚಿದೆ, ಎಂದು ಶೋಭಾ ಕರಂದ್ಲಾಜೆ ಹೇಳಿದರು. ವಿದ್ಯುತ್ ಬೇಡಿಕೆ ಹೆಚ್ಚಾಗುವುದು ಸಹಜ, ಅಗತ್ಯವಿರುವಷ್ಟು ವಿದ್ಯುತ್ತನ್ನು ಉತ್ಪಾದಿಸುವುದು ಮತ್ತು ಅದನ್ನು ಜನರ ಕೈಗೆಟುಕುವ ದರಗಳಲ್ಲಿ ವಿತರಿಸುವುದು ಒಂದು ಜವಾಬ್ದಾರಿಯುಳ್ಳ ಸರ್ಕಾರದ ಪ್ರಮುಖ ಆದ್ಯತೆಯಾಗಬೇಕು.

ಮಳೆ ಕೊರತೆಯಿಂದ ಪ್ರಮುಖ ಜಲಾಶಯಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 30 ರಷ್ಟು ಕಡಿಮೆ ನೀರಿದೆ. ಮಳೆಯ ಕೊರತೆಯಿಂದ ಪ್ರಮುಖ ಜಲ ವಿದ್ಯುತ್ ಕೇಂದ್ರಗಳಾದ ಲಿಂಗನಮಕ್ಕಿ, ಮಾಣಿ ಮತ್ತು ಸೂಪಾ ಜಲಾಶಯಗಳಲ್ಲಿ ಶೇ.30 ರಷ್ಟು ನೀರು ಸಂಗ್ರಹ ಕಡಿಮೆ ಇದೆ. ಆದರೆ, ಇಂಧನ ಇಲಾಖೆ ಮುಂದಾಲೋಚನೆ ಇಲ್ಲದೆ, ಜಲ ವಿದ್ಯುತ್ ಕೇಂದ್ರಗಳಿಂದ ನಿತ್ಯ 28 ರಿಂದ 30 ದಶಲಕ್ಷ ಎಂಯು ವಿದ್ಯುತ್ ಉತ್ಪಾದಿಸುತ್ತಿದೆ. ಇದರಿಂದ ಜಲಾಶಯಗಳಲ್ಲಿ ನೀರಿನ ಸಂಗ್ರಹ ಶರ ವೇಗದಲ್ಲಿ ಕ್ಷೀಣವಾಗುತ್ತಿದ್ದು ಮೂರ್‍ನಾಲ್ಕು ತಿಂಗಳಲ್ಲಿ ಜಲ ವಿದ್ಯುತ್ತಿಗೆ ಸಂಚಕಾರ ಬರಲಿದೆ. ರಾಜ್ಯದ ಜಲವಿದ್ಯುತ್ ಕೇಂದ್ರಗಳಲ್ಲಿ 5,980 ಎಂಯು ವಿದ್ಯುತ್ ಉತ್ಪಾದಿಸುವಷ್ಟು ನೀರಿನ ಸಂಗ್ರಹ ಇದೆ. ಕಳೆದ ವರ್ಷ ಇದೇ ಅವಧಿಯಲ್ಲಿ 7,300 ಎಂಯು ವಿದ್ಯುತ್ ಉತ್ಪಾದಿಸುವಷ್ಟು ನೀರಿತ್ತು. ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಡಿಮೆ ಇದ್ದರೂ ನಿತ್ಯ 30 ಎಂಯು ವಿದ್ಯುತ್ ಉತ್ಪಾದನೆಗೆ ಸೂಚನೆ ನೀಡಲಾಗಿದೆ. ಇದೇ ಪ್ರಮಾಣದಲ್ಲಿ ಉತ್ಪಾದನೆ ಮುಂದುವರಿಸಿದರೆ, ಬೇಸಿಗೆ ಮಾತು ಹಾಗಿರಲಿ, ಬರುವ ಫೆಬ್ರವರಿ ಆರಂಭಕ್ಕೇ ವಿದ್ಯುತ್ ಕ್ಷಾಮ ರಾಜ್ಯವನ್ನು ಆವರಿಸಿಕೊಳ್ಳಲಿದೆ ಎಂದು ಇಲಾಖೆಯ ಅಧಿಕಾರಿಗಳು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಭಾರತೀಯ ಜನತಾ ಪಕ್ಷದಿಂದ ಕರ್ನಾಟಕ ಜನತಾ ಪಕ್ಷ ಹೊರಹೊಮ್ಮುವುದರೊಂದಿಗೆ ರಾಜ್ಯದ ಜನತೆಗೆ ವಿದ್ಯುತ್ ಕ್ಷಾಮದ ಉಡುಗೊರೆ ಸಿದ್ಧವಾಗುತ್ತಿದೆ!

ಮನೆಗೆ ಮರಳಿದ ಕೃಷ್ಣ

ಸೋಮನಹಳ್ಳಿ ಮುದ್ದಪ್ಪ ಕೃಷ್ಣ ಖಾತೆಯಿಲ್ಲದೇ ಖಾಲಿಯಾಗಿದ್ದಾರೆ. ಕೇಂದ್ರದ ಸಂಪುಟ ಪುನರ್ ರಚನೆಯಾಗುವ ಎರಡು ದಿನಗಳ ಮೊದಲೇ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾದರೂ ಯಾಕೆ? ಅವರೇ ಮಾಧ್ಯಮಗಳ ಮುಂದೆ ಹೇಳಿಕೊಂಡಂತೆ ಹೊಸ ಮುಖಗಳಿಗೆ ಅನುವು ಮಾಡಿಕೊಡಲೆಂದೇ ಈ ಪದ 'ತ್ಯಾಗ'ವೇ?. ಹೇಳಿ ಕೇಳಿ ಕೃಷ್ಣ ಅಧಿಕಾರ ನಿರ್ಮೋಹಿ ಎಂದರೆ ಅವರನ್ನು ಬಲ್ಲವರು ನಂಬುವುದು ಕಷ್ಟ. ಹಿಂದೆ ಇವರ 'ಹೈಟೆಕ್' ಆಡಳಿತದ ಬಳಿಕವೂ ಕಾಂಗ್ರೆಸ್ ಸೋತು ಹೋಯಿತು. ಅಧಿಕಾರ ಕಳೆದುಕೊಂಡಾಗ ಪಕ್ಷದ ಬಲವರ್ಧನೆಗೂ ಶ್ರಮಿಸದೇ, ಸುಮ್ಮನೆಯೂ ಕೂಡದೇ ಕೃಷ್ಣ ಅಧಿಕಾರದ ಕೇಂದ್ರದಲ್ಲೇ ಇರಲು ಬಯಸಿದರು. ಮಹಾರಾಷ್ಟ್ರದ ರಾಜ್ಯಪಾಲರಾದರು. ನಂತರವೂ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳ ಮೈತ್ರಿ ಸರಕಾರದಲ್ಲಿ ಕೈಯಾಡಿಸುವುದನ್ನು ಬಿಡಲಿಲ್ಲ. ಯುಪಿಎ–2 ರಲ್ಲಿ ಅವಕಾಶ ಸಿಕ್ಕ ಕೂಡಲೇ ವಿದೇಶಾಂಗ ಸಚಿವರೂ ಆದರು. ಈಗಲೂ ರಾಜೀನಾಮೆ ಕೊಟ್ಟ ನಂತರ 'ತಮ್ಮ ಪಾರದರ್ಶಕತೆ ಸಹೋದ್ಯೋಗಿಗಳಿಗೆ ಇಷ್ಟವಾಗಲಿಲ್ಲ' ಎಂದಿರುವುದು ಹೊಸಬರಿಗೆ ಅವಕಾಶ ಕಲ್ಪಿಸುವ ಇಚ್ಛೆಯಿಂದ ರಾಜೀನಾಮೆ ಕೊಟ್ಟಿದ್ದೇನಲ್ಲ ಎಂಬುದನ್ನು ಸಾರಿ ಹೇಳುತ್ತದೆ.



ಪರಿಣಾಮ

ಕೃಷ್ಣ ರಾಜೀನಾಮೆ ಕೊಟ್ಟಿರುವುದಕ್ಕೂ ಕೇಂದ್ರದ ಸಂಪುಟ ಪುನರ್ ರಚನೆಯಾಗಿರುವುದಕ್ಕೂ ಸಂಬಂಧವಿರುವುದು ನಿಜ. ಯಾಕೆಂದರೆ ಇದರಲ್ಲಿ ರಾಜ್ಯಸಭಾ ಉಪಾಧ್ಯಕ್ಷ ಸ್ಥಾನದಲ್ಲಿದ್ದ ರಾಜ್ಯದ ರೆಹಮಾನ್ ಖಾನ್‌ರಿಗೆ ಅಲ್ಪ ಸಂಖ್ಯಾತ ಇಲಾಖೆಯ ಸಚಿವರಾಗಿ ಮಾಡಲಾಗಿದೆ. ಬೆಲೆ ಏರಿಕೆ ಯನ್ನು, ಕಾರ್ಪೋರೇಟ್ ಕಂಪನಿಗಳನ್ನು ಸಮರ್ಥಿಸುವ ವೀರಪ್ಪ ಮೊಯ್ಲಿಗೆ ಹೆಚ್ಚುವರಿಯಾಗಿ ಪೆಟ್ರೋಲಿಯಂ ಖಾತೆ ನೀಡಲಾಗಿದೆ. ಗಮನಾರ್ಹ ಸಂಗತಿಯೆಂದರೆ ಭಾರೀ ಹಗರಣದ ಆರೋಪ ಎದುರಿಸುತ್ತಿರುವ ಸಲ್ಮಾನ್ ಖುರ್ಷೀದ್‌ರನ್ನು ವಜಾ ಮಾಡುವ ಬದಲು ಕೃಷ್ಣರವರು ಹೊಂದಿದ್ದ ಪ್ರಮುಖ ವಿದೇಶಾಂಗ ಖಾತೆಯನ್ನೇ ನೀಡಿ ಕಾಂಗ್ರೆಸ್ ಸನ್ಮಾನಿಸಿದೆ!. ಆದ್ದರಿಂದ ಕೃಷ್ಣ ರಾಜೀನಾಮೆ ಸ್ವಯಂ ಪ್ರೇರಿತವೇನಲ್ಲ. ಬದಲಾಗಿ ಪ್ರಧಾನಿಯ ನಿರ್ದೇಶನದಿಂದಲೇ ಎಂಬುದು ಖಾತ್ರಿ.

ಇನ್ನೊಂದಾರು ತಿಂಗಳಲ್ಲಿ ಸಾರ್ವತ್ರಿಕ ಚುನಾವಣೆ ಎದುರಿಸಲಿರುವ ಕರ್ನಾಟಕದ ಮಟ್ಟಿಗೆ ಈ ಪುನರ್ ರಚನೆಗೆ ಮಹತ್ವವಂತೂ ಇದ್ದೇ ಇದೆ. ಚುನಾವಣೆ ಎದುರಿಸಲಿರುವ ಬೇರೆ ರಾಜ್ಯಗಳ ಮಟ್ಟಿಗೂ ಇದು ನಿಜ. ಒಡೆದ ಮನೆಯಾಗಿರುವ ರಾಜ್ಯದ ಕಾಂಗ್ರೆಸ್ ಒಗ್ಗಟ್ಟಿನ ಹಲವು ಕಸರತ್ತುಗಳನ್ನು ನಡೆಸಿದ ಬಳಿಕವೂ ಅದರ ವರ್ಚಸ್ಸು ಅಷ್ಟೇನೂ ಹೆಚ್ಚಿಲ್ಲ, ವಿರೋಧ ಪಕ್ಷವಾಗಿಯೂ ಅದರ ಪಾತ್ರವೂ ಅಷ್ಟಕ್ಕಷ್ಟೇ. ಈ ಹಿನ್ನೆಲೆಯಲ್ಲಿ ಖಾನರಿಗೆ ಖಾತೆ ನೀಡಿದ್ದು ದೂರವಾಗುತ್ತಿರುವ ಅಲ್ಪಸಂಖ್ಯಾತರನ್ನು ಸೆಳೆಯುವ ತಂತ್ರದ ಭಾಗ. ಆದರೆ ಅದು ಎಷ್ಟರ ಮಟ್ಟಿಗೆ ಫಲಿಸೀತು?. ಅಲ್ಲದೇ ಇಲ್ಲಿ ಏಳುವ ಪ್ರಶ್ನೆ ಕಾಂಗ್ರೆಸ್ ಒಳಗಿನ ಎರಡು ಗುಂಪುಗಳನ್ನು ಪ್ರತಿನಿಧಿಸುತ್ತಿರುವ, ಸ್ಪರ್ಧಿಗಳಾದ ಮೊಯ್ಲಿ ಮತ್ತು ಮುನಿಯಪ್ಪನವರ ನಡುವೆ ಮೊಯ್ಲಿಗೆ ಹೆಚ್ಚುವರಿ ನೀಡಿರುವುದು ಏನನ್ನು ಸೂಚಿಸಲಿದೆ? ನಂತರ ಕೃಷ್ಣರಿಗೆ ಮುಂದಿನ ಹೊಣೆ ಏನು? ವಿವಿಧ ಗುಂಪುಗಳು ಹೇಗೆ ಸ್ವಾಗತಿಸುತ್ತವೆ?

ಗುದ್ದಾಟದ ನಡುವೆ

ಕಳೆಗುಂದಿರುವ ಕಾಂಗ್ರೆಸ್ ಪುನಶ್ಚೇತನ ಪಡೆಯಲು ಕೃಷ್ಣ ನಾಯಕತ್ವ ವಹಿಸಬೇಕು ಎಂದು ಹಿಂದೆ ಅವರ ಬೆಂಬಲಿಗರು



ಪ್ರತಿಪಾದಿಸಿದ್ದರಲ್ಲದೇ ಹುಟ್ಟು ಹಬ್ಬದ ನೆಪದಲ್ಲಿ ಭಾರೀ ಕಟೌಟುಗಳನ್ನು ಹಾಕಿ ರಾಜ್ಯಕ್ಕೆ ಬರಬೇಕೆಂದು ಕರೆ ನೀಡಿದ್ದರು. ಇದು ಆ ಪಕ್ಷದ ಹಲವಾರು ಗುಂಪುಗಳಲ್ಲಿ ತೀವ್ರ ವಿರೋಧವನ್ನು ಹುಟ್ಟು ಹಾಕಿತ್ತು. ಈಗಲೂ ಕೃಷ್ಣರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವವರೂ

ಪುಟ 4 ಕ್ಕೆ

ಅಮಾನುಷ ಆಡಳಿತ- ಒಂದು ಅನಿಸಿಕೆ

ವಿಡಂಬಾರಿ

ಪ್ರಾಮುಖ್ಯವಾಗಿ ಕಾನೂನು ರಕ್ಷಣೆ, ತನ್ಮೂಲಕ ಪ್ರಜೆಗಳ ಮಾನ ಕಾದು ಕೊಳ್ಳಬೇಕಾದವರೇ ನೈತಿಕತೆಯನ್ನು ಕಸದಂತೆ ಕಂಡು ಗಾಳಿಗೆ ತೂರುತ್ತಿರುವಾಗ ಮಹಾ ದೇಶ ಭಕ್ತರು ಧರ್ಮ ನಿಷ್ಠರು ತಾವೆಂದು ಹೇಳಿಕೊಳ್ಳುತ್ತಿರುವ ಪಕ್ಷದ ವರಿಷ್ಠರೇ ಬ್ರಹ್ಮಾಂಡ ಭ್ರಷ್ಟಾಚಾರಿಗಳ ರಕ್ಷಣೆಗೆ ಮುಂದಾದುದನ್ನು ಕಂಡಾಗ ಮಹಿಳೆಯರ ಮೇಲೆ ಮತ್ತು ದಲಿತರ ಮೇಲೆ ದೌರ್ಜನ್ಯಗಳು ನಿರಂತರ ನಡೆಯುತ್ತಿದ್ದರೂ ರಾಜಕೀಯ ಲಾಭದ ಲೆಕ್ಕ ಹಾಕುತ್ತಾ ಕರ್ತವ್ಯ ಬಿಟ್ಟು ತೆಪ್ಪಗೆ ಇರುವುದನ್ನು ವೀಕ್ಷಿಸಿದಾಗ, ಆಹಾರ ಧಾನ್ಯದ ಬೆಲೆ ಗಗನಕ್ಕೆ ಹಾರಿದರೂ, ಸರಕಾರಿ ಗೋದಾಮುಗಳಲ್ಲಿ ಲಕ್ಷ ಲಕ್ಷ ಟನ್ ಧಾನ್ಯ ಕೊಳೆಯುತ್ತಾ ಬಿದ್ದಿದ್ದರೂ, ಕಡುಲೋಭಿ-ಧನ ದಾಹಿ-ಕಾಳ ಸಂತೆಕೋರರು ಅಪಾರ ಆಹಾರ ಧಾನ್ಯ ಬಚ್ಚಿಟ್ಟು ಕೃತ್ರಿಮ ಅಭಾವ ಸೃಷ್ಟಿಸಿ ಬೆಲೆ ಏರಿಸುತ್ತಿದ್ದರೂ, ಬಹು ಸಂಖ್ಯಾತ ದುಡಿಯುವ ಮುಗ್ಧ ಜನರು ಹಸಿವೆಯಿಂದ ತತ್ತರಿಸುತ್ತಿದ್ದರೂ, ದುಷ್ಕರ್ಮಿಗಳು ಸಂಸ್ಕೃತಿ ರಕ್ಷಣೆ ಹೆಸರಿನಲ್ಲಿ ಕಾನೂನು ಕೈಗೆತ್ತಿಕೊಂಡು ಮಾನಿನಿಯರ ಮಾನ ಹರಣ ಮಾಡುತ್ತಿದ್ದರೂ, ಕಾರುಣ್ಯ ರಹಿತರಾಗಿ ಕುಳಿತ ಪ್ರಭುಗಳನ್ನು ನೋಡಿದಾಗ, ಕೇವಲ ಬರೆಯುವುದರಿಂದಲೇ (ಯಾರು ಏನು ಬರೆದರೂ) ಹೆಚ್ಚು ಪ್ರಯೋಜನ ಇಲ್ಲವೆಂಬುದನ್ನು ನಾನು ಬಲ್ಲೆ. ಆದರೆ ನನ್ನ ಮನದಾಳದಲ್ಲೊಂದು ಪುಟ್ಟ ಆಸೆ ಅದೇನೆಂದರೆ, ಮನೆಯ ಸದಸ್ಯರುಗಳಲ್ಲಿ ಒಬ್ಬರಾದರೂ ಸುಶಿಕ್ಷಿತರಾದವರು ಇದ್ದರೆ, ಅವರಾದರೂ ಓದಿ ಈ ದೇಶದಲ್ಲಿ ಇಂದು ಏನು ನಡೆಯುತ್ತಿದೆ ಎಂಬುದನ್ನು ಉಳಿದ ಸದಸ್ಯರುಗಳಿಗೆ ತಿಳಿಸಿ ಹೇಳಲಿ. ಈ ಮೂಲಕವಾದರೂ ಬಹು ಸಂಖ್ಯಾತ ಮುಗ್ಧ ಮಂದಿಗಳಲ್ಲಿ ಕೆಲವರಾದರೂ ಎಚ್ಚೆತ್ತು ಅನ್ಯಾಯ, ಅತ್ಯಾಚಾರ, ಧಾರ್ಮಿಕ ಭ್ರಷ್ಟತೆ, ರಾಜಕೀಯ ಭ್ರಷ್ಟಾಚಾರಗಳನ್ನು ಪ್ರಶ್ನಿಸುವಂತಾಗಲಿ ಎಂಬುದೇ ನನ್ನ ಮನದಾಳದ ಅನಿಸಿಕೆ.

ನಾವಿಂದು ಒಕ್ಕೊರಲಿನಿಂದ ಒಂದಾಗಿ ಮೊದಲು ಈ ದೇಶದಲ್ಲಿ ನಡೆಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ದಲಿತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗಳ ವಿರುದ್ಧ ಹೋರಾಟ ನಡೆಸಬೇಕಾಗಿದೆ.

ನೂರು ವೋಟುಕೊಡಿಸುವ ಹಿಕಮತ್ತು ಬಲ್ಲವನು ಇಂದು ಏನು ಮಾಡಿದರೂ ನಡೆಯುತ್ತದೆ ಎಂಬಂತಾಗಿ ಬಿಟ್ಟಿದೆ. ಬಹು ಸಂಖ್ಯಾತ ಹಿಂದುಳಿದ ಮಹಿಳೆಯರ ಮೇಲೆಯೇ ಇಂದು ಹೆಚ್ಚಿನ ಸಂಖ್ಯೆಯಲ್ಲಿ ದೌರ್ಜನ್ಯಗಳು ನಡೆಯುತ್ತಿವೆ. ಬಡವರ ಮನೆಯಲ್ಲಿ ಚೆಂದುಳ್ಳ ಹೆಣ್ಣು ಇದ್ದರೆ ಕೆಲವರಿಗೆ ಅಲ್ಲಿಯೇ ಕಣ್ಣು. ಇಂದು ಇಲ್ಲಿ ಒಬ್ಬಂಟಿ ಹೆಣ್ಣು ಬೀದಿಗಿಳಿದರೆ ಸುರಕ್ಷಿತವಾಗಿ ಮರಳಿ ಬರುತ್ತಾಳೆಂಬುದಕ್ಕೆ ಯಾವ ಭರವಸೆಯೂ ಇಲ್ಲವಾಗಿದೆ. ಮತ್ತೆ ಇಲ್ಲಿ ಮನುವಿನ ಅವತಾರ ಆಗಿದೆಯೇನೋ ಎಂಬ ಭಯ ಮೂಡುತ್ತದೆ.

'ನಾರಿ ದೇವತೆ'ಯೆಂಬ ಈ ಭಾರತದಲ್ಲಿ 'ಎಲ್ಲಿ ನಾರಿಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ವಾಸಿಸುತ್ತಾರೆ' ಎಂದು ಹೇಳಲಾದ ಈ ದೇಶದಲ್ಲಿ ಪ್ರತಿ ಒಂದು ನಿಮಿಷಕ್ಕೊಂದರಂತೆ ನಮ್ಮ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಿವೆ.

ವರದಕ್ಷಿಣೆಗಾಗಿ, ಗಂಡು ಮಗುವನ್ನು ಹೆರಲಿಲ್ಲವೆಂಬ ಕಾರಣಕ್ಕಾಗಿ, ಮಕ್ಕಳು ಆಗಲಿಲ್ಲವೆಂಬ ಅವೈಜ್ಞಾನಿಕ ಅಜ್ಞಾನದಿಂದಾಗಿ, ತಾಳಿಕಟ್ಟಿದ ಹಳೆಯ ಹೆಂಡತಿಯ ಮೇಲೆ ಬೇಸರ ಬಂದ ಕಾರಣಕ್ಕಾಗಿ, ಬೇರೆ ಬೇರೆ ದುರಾಸೆಗಳ ಈಡೇರಿಕೆಗಾಗಿ, ಪ್ರತೀ ಎರಡು ನಿಮಿಷಕ್ಕೊಂದರಂತೆ ನಮ್ಮ ತಾಯಿ, ಅಕ್ಕ, ತಂಗಿಯನ್ನು ನಿರ್ದಯವಾಗಿ ಕೊಲೆ ಮಾಡಲಾಗುತ್ತಿದೆ.

ನೋಡಿ, ಹಣವುಳ್ಳ ದುಷ್ಕರ್ಮಿಗಳು ಯಾವ ರೀತಿಯಲ್ಲಿ ಯಾವ ಭಯವೂ ಇಲ್ಲದೆ ಮೆರೆಯುತ್ತಿದ್ದಾರೆಂದರೆ, ಅಪ್ರಾಪ್ತ ಶಾಲಾ ಬಾಲಕಿಯರನ್ನೂ ಹೊತ್ತೊಯ್ದು ನಡು ಹಗಲೇ ಅತ್ಯಾಚಾರ ಮಾಡಿ ಕೊಲೆ ಮಾಡಿ ಬೀದಿಗೆ ಬೀಸಾಡಲಾಗುತ್ತಿದೆ. ಇನ್ನೂ ಈ ನಮ್ಮ ದಲಿತರ ಗೋಳನ್ನು ಈ ಸವರ್ಣೀರ ಪ್ರಾಬಲ್ಯದಲ್ಲಿ (ಅಧಿಪತ್ಯದಲ್ಲಿ) ಕೇಳುವವರೇ ಇಲ್ಲವಾಗಿದೆ. ಈ ಹೇಯ ಅಮಾನವೀಯ ಕೃತ್ಯದ ಬಗೆಗೆ ಇತ್ತೀಚಿಗೆ ಪತ್ರಿಕೆಯಲ್ಲಿ ಓದಿ ಮನ ಕರಗಿತು.

ದಲಿತರ ಮೇಲೆ'ಬಹಿಷ್ಕಾರ' ಕತ್ತಿ

ನವಲಗುಂದದ ನಾಯಕನೂರಿನ ಇಡಿಯ ಕೇರಿಗೇ ಸವರ್ಣೀಯರು ಬಹಿಷ್ಕಾರ ಹಾಕಿ ಒಂದು ವರ್ಷವೇ ಸಂದಿದೆ. ಸ್ವಂತ ಹೊಲವಿಲ್ಲದ ಈ ಅಮಾಯಕರುಗಳಿಗೆ ಬೇರೆಯವರ ಹೊಲದಲ್ಲಿ ನಿರಂತರ ದುಡಿದರೆ ಮಾತ್ರ ಮನೆ ಮಂದಿಗೆಲ್ಲಾ ಅನ್ನ. ತಪ್ಪಿದರೆ ಉಪವಾಸ. ಅಲ್ಲಿ ಇವರಿಗೆ ಕೆಲಸ ಕೊಡುತ್ತಿಲ್ಲ. ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೂಡ ಕೆಲಸ ಸಿಗದಂತೆ ಮಾಡಲಾಗಿದೆ. ಈ ಯೋಜನೆಯಡಿ ನಾಲ್ಕೈದು ದಿನ ದುಡಿದದ್ದಕ್ಕೂ ವೇತನ ಕೊಡಲಿಲ್ಲ ನೋಡ್ರಿ, ನಮ್ಮ ನಾಡಿನದ್ದು ಎಷ್ಟು ನಿರ್ದಯಿ ವ್ಯವಸ್ಥೆಯೆಂದರೆ, ನಿರ್ಗತಿಕರಾದ ರೇಣವ್ವ ಮಾದರ, ಹನುಮವ್ವ ಮಾದರರಿಗೆ ಕಳೆದ ವರ್ಷದಿಂದ ವಿಧವಾ ವೇತನವನ್ನು ಕೊಡಲಿಲ್ಲ, ದೇವದಾಸಿಯರಾದ ವಯೋವೃದ್ಧ ದುರುಗವ್ವ ಮಾದರ, ಹನುಮವ್ವ ಮಾದರ ಇವರಿಗೆ 'ಬಹಿಷ್ಕಾರ' ಹಾಕಿದಂದಿನಿಂದಲೂ ಮಾಸಾಶನ ಕೊಟ್ಟಿಲ್ಲ. ಇದು ತಾವು ತಮ್ಮವರಷ್ಟೇ ಉಂಡುಟ್ಟು ಬೀಗಿದರೆ ಸಾಕೆಂಬವರ ಆಡಳಿತ.

ಕಳೆದ ವರ್ಷ ಅಗಸ್ಟ್ 14 ರಂದು ಸವರ್ಣೀಯರ ಮನೆಯ ದನದ ಸಗಣಿ ಬಳಿಯಲು ಒಪ್ಪಲಿಲ್ಲವೆಂದು ಕ್ಷುಲ್ಲಕ ಕಾರಣಕ್ಕಾಗಿ ಬಹಿಷ್ಕಾರ ಹಾಕಿದ್ದಾರೆ.

ಇಂತಹ ಅಮಾನುಷ್ಯತನವನ್ನು ಕಂಡಾಗ, ಪತ್ರಿಕೆಗಳಲ್ಲಿ ಓದಿದಾಗ ಕರುಳು ಚುರುಗುಡುತ್ತದೆ. ಮನುಷ್ಯತ್ವ ಉಳ್ಳ, ಹಸಿದವರ ಒಡಲುರಿಯ ಅರಿವುಳ್ಳ ಪ್ರಬಲ ಚಳುವಳಿಗಾಗಿ ಮನ ಹಂಬಲಿಸುತ್ತದೆ.

ಕೇವಲ ಚಾತುರ್ವರ್ಣವನ್ನು ಸಂವಿಧಾನವಾಗಿಸುವುದಕ್ಕಾಗಿ ದೆಹಲಿ ಗದ್ದುಗೆ ಹಿಡಿಯಲು ಧರ್ಮ ದೇವರ ಹೆಸರಿನಲ್ಲಿ, ಪ್ರತ್ಯೇಕತೆಯ ಬೀಜ ಬಿತ್ತಿ ಮನ ಒಡೆದು ಐಕ್ಯತೆ ನಾಶ ಮಾಡುವ ಹುನ್ನಾರಿನ ವ್ಯವಸ್ಥೆ ಅಡಿಯಲ್ಲಿ ಮತ್ತು ಕಳೆದ ಆರು ದಶಕಗಳಿಂದಲೂ ಬಡವನ ಉದ್ಧಾರ ಮಾಡುತ್ತೇವೆಂದು ಹೇಳುತ್ತಲೇ ಮುಗ್ಧರನ್ನು ವಂಚಿಸುತ್ತ ಬಂದಿರುವ ಕಪಟಿಗಳ ಕಾಲದಲ್ಲಿ ಬಹು ಸಂಖ್ಯಾತ ದುಡಿಯುವ ಮುಗ್ಧರು ಸ್ವಂತ ಸೂರಿನಡಿ ಎರಡು ಹೊತ್ತು ಉಂಡು ಮಹತ್ವವಾದ ಶಿಕ್ಷಣ ಪಡೆದು ಉಳಿದವರಂತೆ ಸಮಾಜದೊಂದಿಗೆ ಬೆರೆತು ಮರ್ಯಾದೆಯಿಂದ ತಲೆಯೆತ್ತಿ ಬದುಕಿ ಬಾಳುವುದು ಸಾಧ್ಯವೇ ಇಲ್ಲವೆಂಬುದು ಈಗಾಗಲೇ ದೃಢ ಪಟ್ಟಿದೆ.

ಒಟ್ಟಾರೆ ಪ್ರಮುಖ ವಿರೋಧಿ ಪಕ್ಷದವರು ಪ್ರಶ್ನಿಸುವ ಹಕ್ಕನ್ನು ಕಳಕೊಂಡು ಕುಳಿತಾಗ ಆಗುವುದು ಹೀಗೆಯೇ.

ಸಂಪುಟ ಪುನರ್ ರಚನೆ ಯಾರಿಗೇನು ....

ಪುಟ 3 ರಿಂದ

ಕಡಿಮೆ. ಬದಲಾಗಿ ಒಳ ಜಗಳ ಹೆಚ್ಚಿಸುವ ಸಾಧ್ಯತೆಗಳೇ ಹೆಚ್ಚು. ಅದರೊಟ್ಟಿಗೆ ಕೃಷ್ಣ ವಿದೇಶಾಂಗದಂತಹ ಪ್ರಮುಖ ಖಾತೆ ಹೊಂದಿದ್ದರೂ ಅಂತಹ ಯಾವುದೇ ಗಮನಾರ್ಹ ಸಾಧನೆ, ಛಾಪು ಒತ್ತಿದ ಕೆಲಸ ಮಾಡಲಿಲ್ಲ. ಬದಲಾಗಿ ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಗೊಂದಲಗಳನ್ನು ಹುಟ್ಟಿಸಿದ ಪ್ರಸಂಗಗಳು ನಡೆದವು. ಮೇಲಾಗಿ ಯು.ಪಿ.ಎ. ಸರಕಾರ ಒಂದು ಸ್ವತಂತ್ರವಾದ ವಿದೇಶಾಂಗ ನೀತಿಯನ್ನೇ ಬಿಟ್ಟು ಅಮೇರಿಕಾದ ಬಾಲಂಗೋಚಿಯಾಗಿ ಕಾರ್ಯ ನಿರ್ವಹಿಸತೊಡಗಿರುವಾಗ ಅವಕಾಶಗಳಾದರೂ ಅದಕ್ಕೆ ಎಲ್ಲಿರುತ್ತವೆ?

ಪಟ್ಟಾಭಿಷೇಕದ ಕನಸು

ರಾಜ್ಯದ ರಾಜಕಾರಣದಲ್ಲಿಯೂ ಅವರು ಅಷ್ಟಕ್ಕಷ್ಟೇ. ಅದರಲ್ಲೂ ರಾಜ್ಯದ ಬಿಜೆಪಿ ಸರಕಾರ ಇಷ್ಟೊಂದು ದುರಾಡಳಿತ ನಡೆಸಿದಾಗಲೂ ಚ ಕಾರವೆತ್ತದ ಕೃಷ್ಣನ ಬಗ್ಗೆ ಜನರಲ್ಲಿ ವಿಶ್ವಾಸ ಹುಟ್ಟೀತೆ? ಅದೂ ಅವರು ಅಧಿಕಾರದಲ್ಲಿರುವಾಗ ನಡೆಸಿದ್ದು ಜಾರಿಗೆ ತಂದಿದ್ದು ಉದಾರೀಕರಣ, ಜಾಗತೀಕರಣದ ಮಾರಕ ನೀತಿಗಳನ್ನೇ. ಆಂಧ್ರದ ಚಂದ್ರಬಾಬುನಾಯ್ಡುವಿನೊಂದಿಗೆ ಸ್ಪರ್ಧೆಗಿಳಿದು ಹೂಡಿಕೆದಾರರು ಇಲ್ಲಿಗೇ ಬನ್ನಿರೆಂದು ರತ್ನಗಂಬಳಿ ಹಾಸಿ ಕರ್ನಾಟಕವನ್ನು ಜಗತ್ತಿನ, ದೇಶದ ಬಂಡವಾಳಗಾರರಿಗೆ ಹರಾಜು ಹಾಕಿದ್ದು ಭಾರೀ ಭೂ ಮಾಫಿಯಾ, ಗಣಿ ಮಾಫಿಯಾಗಳು ಹುಲುಸಾಗಿ ಬೆಳೆಯತೊಡಗಿದ್ದು ಇವರ ಕಾಲಾವಧಿಯಲ್ಲೇ. ಕರ್ನಾಟಕದಲ್ಲಿ ಕುಖ್ಯಾತಿ ಪಡೆದಿರುವ ಗಣಿ ಹಗರಣ, ನೈಸ್ ಕಂಪನಿಗೆ ಅಕ್ರಮವಾಗಿ ಭೂಮಿ ನೀಡಿದ ಹಗರಣಗಳು ಕೃಷ್ಣರ ಕುಖ್ಯಾತ ಕೊಡುಗೆಗಳಾಗಿವೆ. ಈ ಬಗ್ಗೆ ಇತ್ತೀಚೆಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪುರಸ್ಕರಿಸಿರುವ ಲೋಕಾಯುಕ್ತ ನ್ಯಾಯಾಲಯ ಪ್ರಕರಣವನ್ನು ಕೈಗೆತ್ತಿಕೊಂಡಿದೆ. ನೈಸ್ ವಿಚಾರಣೆ ಕೃಷ್ಣರನ್ನೂ ಆರೋಪಿ ಸ್ಥಾನದಲ್ಲಿರಿಸಿದೆ. ಕೃಷ್ಣ ರಾಜೀನಾಮೆ ನೀಡುವಲ್ಲಿ ಇದರ ಅಂಶ ಇಲ್ಲದಿಲ್ಲ. ಇಂತಹ ಕೃಷ್ಣ ಪಟ್ಟಾಭಿಷೇಕದ ಕನಸಿನೊಂದಿಗೆ ರಾಜ್ಯದ ಸಾರಥ್ಯ ವಹಿಸುವುದೆಂದರೆ ಏನರ್ಥ?

ದಿವಾಳಿತನ

ಒಟ್ಟಾರೆ ಕಾಂಗ್ರೆಸ್‌ನ ಇಂತಹ ತೋರಿಕೆಯ ಕಸರತ್ತುಗಳಿಂದ ಜನತೆ ಮೋಸ ಹೋಗುವುದು ಏನೂ ಆಗದು. ಸಂಪುಟ ಪುನರ್ ರಚನೆ, ಖಾತೆ ಹಂಚಿಕೆಯ ಗಿಮಿಕ್ಸ್ ಮೂಲಕ ತನ್ನ ತಪ್ಪು, ವಂಚನೆಗಳನ್ನು ಮರೆ ಮಾಚಲು ನೋಡುತ್ತಿದೆ. ಮುಖ್ಯವಾಗಿ ಪುನರ್ ರಚನೆ ಮಾಡುವಾಗಲಾದರೂ ತನ್ನ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಕಿಂಚಿತ್ತು ಇಚ್ಛೆಯನ್ನು ತೋರಿಲ್ಲ. ಸಚಿವ ಸಂಪುಟ ಸ್ಥಾನ ಮತ್ತು ಖಾತೆ ನೀಡಿಕೆಯಲ್ಲಿ ರಾಹುಲಗಾಂಧಿಯ ನಿಕಟವರ್ತಿಗಳಿಗೆ ಮಣೆ ಹಾಕಲಾಗಿದೆಯೆಂಬ ಆರೋಪವೂ ಇದೆ. ತೀವ್ರ ಭ್ರಷ್ಟಾಚಾರದ ಆರೋಪವಿರುವ ಸಲ್ಮಾನ್ ಖುರ್ಶೀದ್‌ರಂತಹವರಿಗೆ ಹೆಚ್ಚುಗಾರಿಕೆ ನೀಡಿರುವುದು ಕಾಂಗ್ರೆಸ್ ತಲುಪಿರುವ ನೈತಿಕ ದಿವಾಳಿತನ ಮತ್ತು ಭಂಡತನಕ್ಕೆ ನಿದರ್ಶನವಾಗಿದೆ. ಇದು ರಾಜ್ಯದ ಮಟ್ಟಿಗೂ ನಿಜ.

ಜನಶಕ್ತಿ
ಕನ್ನಡ ವಾರಪತ್ರಿಕೆ

ರೈತರ ಭೂಮಿಗೆ ಬಂಡವಾಳಿಗರ ಬಾಯಿ

ಭೂಮಿ ಪ್ರಶ್ನೆ ಮೇಲೆ ಕರ್ನಾಟಕ ಪ್ರಾಂತ ರೈತ ಸಂಘ ಹಾಗು ಕರ್ನಾಟಕ ಪ್ರಾಂತೆ ಕೃಷಿ ಕೂಲಿಕಾರರ ಜಂಟಿಯಾಗಿ ನವೆಂಬರ್ 05 ರಂದು ರಾಜ್ಯದಾದ್ಯಂತ ನೂರಾರು ತಾಲೂಕ ಜಿಲ್ಲೆ ಕಛೇರಿಗಳನ್ನು ಮುತ್ತಿಗೆ ಹಾಕಿ ಪಿಕೆಟಿಂಗ್ ನಡೆಸಲು, ಸಾವಿರಾರು ಜನರಿಂದ ಜೈಲು ತುಂಬಲು ಕರೆ ನೀಡಿವೆ. ಈ ಹಿನ್ನಲೆಯಲ್ಲಿ ರೈತ-ಕೃಷಿಗೆ, ರೈತರ ಬದುಕಿಗೆ ಬರುತ್ತಿರುವ ಗಂಭೀರ ಅಪಾಯದ ಬಗ್ಗೆ ಒಂದು ಲೇಖನ

ಯು. ಬಸವರಾಜು

ಕರ್ನಾಟಕ ಪ್ರಾಂತ ರೈತ ಸಂಘ ಹಾಗು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಜಂಟಿಯಾಗಿ ನವೆಂಬರ್ 05 ರಂದು ರಾಜ್ಯದಾದ್ಯಂತ ನೂರಾರು ತಾಲೂಕ "ಜಿಲ್ಲೆ ಕಛೇರಿಗಳನ್ನು ಮುತ್ತಿಗೆ ಹಾಕಿ ಪಿಕೆಟಿಂಗ್ ನಡೆಸಲು, ಸಾವಿರಾರು ಜನರಿಂದ ಜೈಲು ತುಂಬಲು ಕರೆ ನೀಡಿವೆ. ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘವು ತಾನು ಕೂಡ ಇದೇ ಪ್ರಶ್ನೆಗಳು ಮತ್ತು ತನ್ನ ಕೆಲ ಪ್ರಶ್ನೆಗಳಿಗಾಗಿ ಈ ಚಳುವಳಿಯ ಜೊತೆ ಕೈ ಜೋಡಿಸಿದೆ. ಎಲ್ಲಾ ಬಡವರ ಅಕ್ರಮ ಮನೆ ಹಾಗು ನಿವೇಶನಗಳ ಸಕ್ರಮಗೊಳಿಸಬೇಕು, ಹಕ್ಕು ಪತ್ರ ಅದೇ ರೀತಿ ರಾಜ್ಯದಾದ್ಯಂತ 12 ಲಕ್ಷಕ್ಕೂ ಅಧಿಕವಾಗಿರುವ ವಸತಿ ಹಾಗೂ ನಿವೇಶನ ರಹಿತರಿಗೆ ವಸತಿ ನಿರ್ಮಾಣ ಮಾಡಿಕೊಡಲು ಅಗತ್ಯ ಕ್ರಮ ವಹಿಸಬೇಕು. 25 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿರುವ ತಿರಸ್ಕರಿಸಲ್ಪಟ್ಟ ಫಾರಂ 50 ಹಾಗು ಫಾರಂ 53 ಹಾಕಿ ತಿರಸ್ಕರಿಸಲ್ಪಟ್ಟ ಮತ್ತು ಫಾರಂ ಹಾಕಲಾಗದಿರುವ ಬಡಸಾಗುವಳಿ ದಾರರಿಗೆ ಹಾಗೂ ಅರಣ್ಯ ಭೂಮಿಯ ಸಾಗುದಾರ ಬಡವರಿಗೆ ಹಕ್ಕು ಪತ್ರ ಒದಗಿಸುವಂತಾಗಬೇಕು. ಇದಕ್ಕಾಗಿ ಹಲವಾರು ಕಾಯ್ದೆಗಳ ತಿದ್ದುಪಡಿಗಾಗಿ ಒತ್ತಾಯಿಸಿ ಮತ್ತು ಇದೆಲ್ಲಕ್ಕಿಂತ ಮುಖ್ಯವಾಗಿ, ಕೃಷಿಯನ್ನು ಹಾಗೂ ಭೂಮಿಯನ್ನು ಬಹುರಾಷ್ಟೀಯ ಕಂಪನಿಗಳಿಗೆ ವರ್ಗಾಯಿಸಿ ಹಾಲಿ ಕೃಷಿಕರನ್ನು ಬೀದಿಗೆ ತಳ್ಳುವ ಕೇಂದ್ರ ಹಾಗು ರಾಜ್ಯ ಸರಕಾರಗಳ ಕುತಂತ್ರವನ್ನು ವಿರೋಧಿಸಲು ಮತ್ತು ಬಲವಂತದ ಭೂ ಸ್ವಾಧೀನವನ್ನು ಎದುರಿಸಲು ಈ ಚಳುವಳಿ ನಡೆಯುತ್ತಿದೆ. ಅಂದಾಜಿನಂತೆ ಈ ಚಳುವಳಿಯಲ್ಲಿ 50,000 ರೈತ ಕೂಲಿಕಾರರು, ಬಡವರು ಪಾಲ್ಗೊಳ್ಳಲಿದ್ದಾರೆ. ಎಲ್ಲೆಲ್ಲೂ ರೈತ ಸಂಘ ಹಾಗೂ ಕೂಲಿಕಾರರ ಸಂಘದ ಘಟಕಗಳು ನಿವೇಶನ ರಹಿತರ ಮತ್ತು ಬಹುಕ್ ಹುಕುಂ ಸಾಗುವಳಿದಾರರ ಘಟಕಗಳು ಚಳುವಳಿಯ ಸಿದ್ದತೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಕಳೆದೆರೆಡು ವರ್ಷಗಳಿಂದ ಇದೇ ಪ್ರಶ್ನೆಗಳಿಗಾಗಿ ಎರಡುವರೆ ಲಕ್ಷಕ್ಕೂ ಅಧಿಕ ಬಡ ಫಲಾನುಭವಿಗಳ ನಿವೇಶನಕ್ಕಾಗಿ ಭೂಮಿಯ ಹಕ್ಕಿಗಾಗಿ ಅರ್ಜಿಗಳನ್ನು ಹಾಕಿದ್ದಾರೆ. ತಾಲೂಕು/ಜಿಲ್ಲಾ ಕೇಂದ್ರಗಳಲ್ಲಿ ಭೂಮಿಯ ಹಕ್ಕಿಗಾಗಿ ಸತತ ಆಹೋರಾತ್ರಿ ಧರಣಿ ಸತ್ಯಾಗ್ರಹಗಳನ್ನು ನಡೆಸಿದ್ದಾರೆ. ಅದೇ ರೀತಿ ಕಳೆದ ಮೇ 20ರಂದು ಬೆಂಗಳೂರಿನಲ್ಲಿ 20,000ಕ್ಕೂ ಅಧಿಕ ರೈತ ಕೂಲಿಕಾರರ ಅಣಿನೆರೆದು ಬೃಹತ್ ಅನಿರ್ಧಿಷ್ಠ ಧರಣಿಗೆ ಮುಂದಾಗಿದ್ದರು. ರಾಜ್ಯ ಸರ್ಕಾರ ಮಾತುಕತೆಗೆ ಮುಂದಾಗಿದ್ದರಿಂದ ಧರಣಿಯ ಮುಂದುವರಿಕೆಯನ್ನು ಕೈ ಬಿಟ್ಟು ಮುಖ್ಯಮಂತ್ರಿಗಳಾದ ಸದಾನಂದಗೌಡರ ಜೊತೆ ನಂತರ ಈಗ ಜಗದೀಶ ಶೆಟ್ಟರ್ ಜೊತೆ ಮಾತುಕತೆಗಳನ್ನು ಎರಡು ಸಂಘಗಳ ಮುಖಂಡರು ನಡೆಸಿದ್ದಾರೆ. ಅಲ್ಲಿ ಕೆಲ ಅಂಶಿಕ ಬೇಡಿಕೆಗಳ ಕುರಿತು ಒಪ್ಪಂದಕ್ಕೆ ಬರಲಾಗಿದ್ದರೂ ಮುಖ್ಯವಾದ ಸರಿಸುಮಾರು 25 ಲಕ್ಷಕ್ಕೂ ಅಧಿಕ ಕುಟುಂಬಗಳ ಭೂಮಿಯ ಪ್ರಶ್ನೆ ಅದೇ ರೀತಿ ಕೃಷಿಯನ್ನು ಬಹುರಾಷ್ಟಿಯ ಬಂಡವಾಳದಾರರಿಗೆ ವರ್ಗಾಯಿಸುವ ಹುನ್ನಾರದಲ್ಲಿ ತರುತ್ತಿರುವ ಕೃಷಿ ನೀತಿಯಲ್ಲಿನ ಬದಲಾವಣೆಯ ಪ್ರಶ್ನೆಗಳು ಹಾಗೇ ಉಳಿದುದರಿಂದ ಈ ಹೋರಾಟವನ್ನು ರೈತ ಕೂಲಿಕಾರರು ನಡೆಸಬೇಕಾಗಿ ಬಂದಿದೆ.



ರೈತ ಕೂಲಿಕಾರರ ಮಾರಣ ಹೋಮ ಮಾಡುವ ಕಂಪನಿ ಕೃಷಿ

ಕೇಂದ್ರ ಮತ್ತು ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರಗಳು ಇನ್ನು ಮುಂದೆ ವ್ಯವಸಾಯವನ್ನು ಬಹುರಾಷ್ಟ್ರೀಯ ಕಂಪನಿಗಳ ಮೂಲಕ ನಡೆಸಲು ನಿರ್ಧರಿಸಿ, ಈ ದಿಶೆಯಲ್ಲಿ ಕಾರ್ಯ ಪ್ರವೃತ್ತವಾಗಿವೆ. "ದೇಶದ ಹಾಗೂ ರಾಜ್ಯದ ಅತ್ಯಂತ ಸಂಕಷ್ಟದಲ್ಲಿರುವ ರೈತರು ಕೂಲಿಕಾರರಿಗೆ ಇನ್ನಷ್ಟು ತೊಂದರೆಗಳನ್ನು ಮಾರಣಾಂತಿಕ ಪೆಟ್ಟನ್ನು ನೀಡುತ್ತದೆ". ಒಂದೆಡೆ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಗಾಗಿ ಹಾಗೂ ಕೈಗಾರಿಕೆಗಳ ನಿರ್ಮಾಣ ಮತ್ತಿತರೇ ಹೆಸರಿನಲ್ಲಿ ರೈತರ ಒಪ್ಪಿಗೆ ಇಲ್ಲದಿದ್ದರೂ ಬಲವಂತವಾಗಿ ಲಕ್ಷಾಂತರ ಎಕರೆ ಭೂಸ್ವಾಧೀನ ಮಾಡಿ ಬೇಕಾಬಿಟ್ಟಿ ಬೆಲೆ ನೀಡಿ ಒಕ್ಕಲೆಬ್ಬಿಸುತ್ತಿವೆ. ಉದಾಹರಣೆಗೆ ಬಳ್ಳಾರಿ ತಾಲೂಕಿನ ಕುಡತಿನಿ ಪ್ರದೇಶದಲ್ಲಿ ಈಗಾಗಲೆ 15 ಸಾವಿರ ಎಕರೆ ಜಮೀನನ್ನು ಬಲವಂತವಾಗಿ ಸ್ವಾಧೀನ ಪಡಿಸಿ ವಿದ್ಯುತ್ ಹಾಗೂ ಬ್ರಾಹ್ಮಿಣಿ-ಜಿಂದಾಲ್ ಕಂಪನಿಗಳಿಗೆ ನೀಡಲಾಗಿದೆ. ಮಾರ್ಗ ಸೂಚಿ ಬೆಲೆಯೇ 12 ಲಕ್ಷವಿದ್ದರೂ ಈ ಪ್ರದೇಶದಲ್ಲಿ ತಲಾ ಎಕರೆಗೆ 03-05-06 ಲಕ್ಷಗಳೆಂದು ಇನ್ನೊಂದೆಡೆ ನೇರವಾಗಿಯೇ ಹತ್ತಾರು ಸಾವಿರ ಎಕರೆ ಭೂಮಿ ಪ್ರದೇಶದಲ್ಲಿ ಬಹುರಾಷ್ಟೀಯ ಕಂಪನಿಗಳು ಕೃಷಿಯಲ್ಲಿ ತೊಡಗಲು ಮತ್ತು ಇನ್ನೂ ಹತ್ತಾರು ಸಾವಿರ ಎಕರೆ ಪ್ರದೇಶವನ್ನು ಗುತ್ತಿಗೆ ಆಧಾರಿತ ಕೃಷಿಗೆ ಒಳಪಡಿಸಲು ಅವಕಾಶ ಮಾಡುತ್ತಿವೆ. ಮಾತ್ರವಲ್ಲ ಲಕ್ಷಾಂತರ ಎಕರೆ ಪ್ರದೇಶದಲ್ಲಿ ಮುಂಗಡ ವ್ಯಾಪಾರಿ ಕೃಷಿ ನಡೆಸಲು ಕ್ರಮ ವಹಿಸಿವೆ. ಕಂಪನಿಗಳೇ ಹತ್ತಾರು ಸಾವಿರ ಎಕರೆ ಪ್ರದೇಶದಲ್ಲಿ ನೇರವಾಗಿ ಕೃಷಿಯಲ್ಲಿ ತೊಡಗುವುದೇ ಕಂಪನಿ ಕೃಷಿ. ಅದೇ ರೀತಿ ರೈತರ ಲಕ್ಷಾಂತರ ಎಕರೆ ಜಮೀನನ್ನು ಕಂಪನಿಗಳು ಗುತ್ತಿಗೆಗೆ ಪಡೆದು ಕಂಪನಿ ವ್ಯವಸಾಯ ಮಾಡುವುದು ಗುತ್ತಿಗೆ ಕೃಷಿಯಾಗಿದೆ. ಅದೇ ರೀತಿ ಲಕ್ಷಾಂತರ ಎಕರೆ ಜಮೀನಿನ ರೈತರಿಗೆ ಬೆಳೆ ಪೂರ್ವದಲ್ಲಿ ಬೀಜ-ಗೊಬ್ಬರ-ಸಾಲ-ತರಬೇತಿ ನೀಡಿ ಒಪ್ಪಂದದ. ಬೆಲೆ ನಿಗದಿಸಿ, ರೈತರಿಂದ ಬೆಳೆಸಿ ಒಪ್ಪಂದದ ಬೆಲೆಗೆ ಖರೀದಿಸುವುದೇ ಮುಂಗಡ ವ್ಯಾಪಾರಿ ಕೃಷಿಯಾಗಿದೆ. ಅತ್ಯಂತ ಆಧುನಿಕ ತಂತ್ರಜ್ಞಾನದ ಬೀಜ ಗೊಬ್ಬರ ಕ್ರಿಮಿನಾಶಕಗಳನ್ನು ಬಳಸುವುದೇ ಅಲ್ಲದೆ ವ್ಯಾಪಕವಾಗಿ ಬಾರೀ ಯಂತ್ರಗಳ ಮೂಲಕ ಕೃಷಿಯಲ್ಲಿ ತೊಡಗಲಿದ್ದಾರೆ! ಇಲ್ಲಿ ಕೆಲಸಗಾರರು ಕೃಷಿ ವಿಜ್ಞಾನಿಗಳು ಯಂತ್ರ ನಡೆಸುವವರು, ರಿಪೇರಿ ಮಾಡುವವರೇ ಆಗಿರುತ್ತಾರೆ. ಕೂಲಿಕಾರರು ಬಡ ರೈತರು ಹಲವರಿಗೆ ಇಲ್ಲಿ ಕೆಲಸವೇ ಇಲ್ಲವಾಗಿರುತ್ತದೆ. ದೊಡ್ಡ ಸಂಖ್ಯೆಯಲ್ಲಿ ಈ ಜನರು ರೈತರೊಂದಿಗೆ ನಿರುದ್ಯೋಗ ಪಡೆಯನ್ನು ಸೃಷ್ಠಿಸಲಿದ್ದಾರೆ. ಭಾರೀ ಲಾಭ ಮತ್ತು ಆಹಾರ ಧಾನ್ಯ ಮಾರುಕಟ್ಟೆಯ ಮೇಲಿನ ಹಿಡಿತ, ಕೃಷಿಯಮೇಲೆ ಪ್ರಾಬಲ್ಯ ಬಹುರಾಷ್ಟಿಯ ಸಂಸ್ಥೆಗಳು ಸ್ಥಾಪಿಸಿಲಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರ ಇದನ್ನು ಜಾರಿಗೆ ತರಲು ತುದಿಗಾಲ ಮೇಲೆ ನಿಂತಿದೆ. ಮಾತ್ರವಲ್ಲ ಬಹುರಾಷ್ಟ್ರೀಯ ಕಂಪನಿಗಳು ಎಷ್ಟು ಸಾವಿರ ಎಕರೆ ಬೇಕಾದರೂ ನೇರವಾಗಿ ಹಾಗೂ ಅಪ್ರತ್ಯಕ್ಷ ಭೂಮಿಯನ್ನೂ ಹೊಂದಲು ಹಾಗೂ ಅವುಗಳನ್ನು ಕೃಷಿಕರೆಂದು ಸೇರ್ಪಡೆ ಮಾಡಲು ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿಯನ್ನು ತರಲು ವಿಧಾಸಭೆಯಲ್ಲಿ ಮಂಡಿಸಿತು. ಎರಡು ಸಂಘಟನೆಗಳ ತೀವ್ರ ಪ್ರತಿರೋಧದಿಂದ ಇತರರ ಒತ್ತಡದಿಂದ ತಾತ್ಕಾಲಿಕವಾಗಿ ಹಿಂಪಡಿಯ ಬೇಕಾಗಿದೆ ಬಂದಿದೆ. ಬಹುಶಃ ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ ಧಕ್ಕೆಯಾದೀತೆಂಬ ಭಯದಿಂದ ವಾಪಾಸು ಪಡೆದಿದೆ. ಆದಾಗಲೂ ಯಾವಾಗ ಬೇಕಾದರೂ ಬಹುರಾಷ್ಟ್ರೀಯ ಕಂಪನಿಗಳ ಒತ್ತಾಯದ ಮೇಲೆ ಮತ್ತೆ ಮಂಡಿಸುವ ಸಾಧ್ಯತೆ ಇದ್ದೇ ಇದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈಗಾಗಲೇ ಇರುವ ಮಾರುಕಟ್ಟೆ ಕಾಯ್ದೆಯಾಗಿ ಬದಲಿಸಿ ಅಲ್ಪ ಸ್ವಲ್ಪವಾದರೂ ರೈತರಿಗೆ ನೆರವಾಗುತ್ತಿದ್ದ ಮಾರುಕಟ್ಟೆಯನ್ನು ಕಳಚಿ ಹಾಕಿ ಬಹುರಾಷ್ಟ್ರೀಯ ಕಂಪನಿಗಳನ್ನೂ ರೈತನೆದುರು ಮುಖಾ ಮುಖಿ ಮಾಡಲು ಮುಂದಾಗುತ್ತಿವೆ. ಸ್ಥಳೀಯ ಖಾಸಗಿ ವ್ಯಾಪಾರಿಗಳನ್ನು ಎದರಿಸಲಾಗದ ರೈತರು ದೈತ್ಯ ಕಂಪನಿಗಳನ್ನು ಮನೆ ಬಾಗಿಲಲ್ಲೇ ಎದರಿಸಲಾದರೂ ಹೇಗೆ ಸಾಧ್ಯವಾದಿತು? ಖರೀದಿ ಕೇಂದ್ರಗಳನ್ನು ಮಾರುಕಟ್ಟೆಗಳಲ್ಲಿ ಸರ್ಕಾರವೇ ತೆರೆದು ಬೆಂಬಲ ಬೆಲೆಗೆ ರೈತರಿಂದ ಖರೀದಿಸಿ ಕುಸಿದ ಬೆಲೆಗಳಿಂದ ರೈತರ ರಕ್ಷಿಸುವ ಕೇಂದ್ರ ರಾಜ್ಯ ಸರ್ಕಾರಗಳ ಪ್ರಕ್ರಿಯೆ ವಾಪಾಸು ತಡೆಯಲು ನಿರ್ಧರಿಸಲಾಗಿದೆ. ಅದೇ ಸಂದರ್ಭದಲ್ಲಿ ಬಡವರಿಗೆ ಬೆಂಬಲ ಬೆಲೆಗೆ ರೈತರಿಂದ ಆ ರೀತಿ ಖರೀದಿಸಿದ ಆಹಾರ ಧಾನ್ಯವನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ಸಬ್ಸಿಡಿ ದರದಲ್ಲಿ ವಿತರಿಸುವ ಪದ್ಧತಿಯನ್ನು ಕೈಬಿಟ್ಟು ಅತ್ಯಂತ ಕಡು ಬಡವರಿಗೆ 'ಆಧಾರ್' ಯೋಜನೆಯಂತೆ ಹಣದ ರೂಪದ ಸಹಾಯವನ್ನು ಪಲಾನುಭವಿಯ ಖಾತೆಗೆ ಜಮಾ ಮಾಡಲು ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಉದ್ದೇಶಿವೆ ಮತ್ತು ಆ ಮೂಲಕ ಕಾಳಸಂತೆಕೋರ ವ್ಯಾಪಾರಿಗಳು ಕೃತಕವಾಗಿ ಆಹಾರ ಮತ್ತಿತರೆ ಅಗತ್ಯ ವಸ್ತುಗಳ ಅಭಾವ ಸೃಷ್ಠಿಸಿ ವ್ಯಾಪಕವಾಗಿ ಬೆಲೆ ಏರಿಕೆ ಲಾಭ ಪಡೆಯಲು ಗ್ರಾಹಕರನ್ನು ಕೊಳ್ಳೆ ಹೊಡೆಯಲು ಅಡ್ಡಿಯಾಗಿದ್ದ ಪಡಿತರ

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

"ಕರಾವಳಿಯು ಹಿಂದುತ್ವದ ಪ್ರಯೋಗ ಶಾಲೆಯಾಗಿದೆ"

– ಜಿ.ವಿ. ಶ್ರೀರಾಮರೆಡ್ಡಿ

ಕರಾವಳಿಯನ್ನು ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಘ ಪರಿವಾರವು ತನ್ನ ಕೋಮುವಾದಿ ಹಿಂದುತ್ವದ ಪ್ರಯೋಗ ಶಾಲೆಯಾಗಿ ಮಾಡಿರುತ್ತದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು. ಅವರು ಮಂಗಳೂರಿನಲ್ಲಿ ದ.ಕ.ಜಿಲ್ಲೆಯ ಸಿಪಿಐ(ಎಂ) ಪಕ್ಷದ ಸದಸ್ಯರಿಗಾಗಿ ಪಕ್ಷದ ಜಿಲ್ಲಾ ಸಮಿತಿಯಿಂದ ಅಕ್ಟೋಬರ್ 30 ರಂದು ಏರ್ಪಡಿಸಲಾಗಿದ್ದ "ಕೋಮುವಾದದ ಅಪಾಯಗಳ ಕುರಿತು ಕಾರ್ಯಾಗಾರ"ವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.




ಬಹುಸಂಖ್ಯಾತ ಹಿಂದುತ್ವ ಕೋಮುವಾದ ಹಾಗೂ ಅಲ್ಪಸಂಖ್ಯಾತ ಕೋಮುವಾದ– ಇವೆರಡೂ ಏಕರೀತಿಯ ಅಪಾಯಗಳು. ಅಲ್ಪಸಂಖ್ಯಾತರಲ್ಲಿ ಇರುವ ಮೂಲಭೂತವಾದಿ ಗುಂಪುಗಳು ಬಹುಸಂಖ್ಯಾತರ ಕೋಮುವಾದದ ಕಾರಣದಿಂದಾಗಿ ಕೋಮುವಾದಿಗಳಾಗಿ ಪರಿವರ್ತಿತವಾಗಿವೆ. ಆದುದರಿಂದ ಅಲ್ಪಸಂಖ್ಯಾತ ಕೋಮುವಾದವನ್ನು ಎದುರಿಸುವ ಜೊತೆಗೇನೇ, ಅದಕ್ಕೆ ಪ್ರಚೋದನೆ ನೀಡುವ ಬಹುಸಂಖ್ಯಾತ ಕೋಮುವಾದವನ್ನು ಅತ್ಯಂತ ಹೆಚ್ಚಿನ ತೀವ್ರತೆಯಿಂದ ಎದುರಿಸಬೇಕಾಗಿದೆ.

1977 ರಲ್ಲಿ ಜನತಾ ಪಕ್ಷವು ದೇಶದ ಆಡಳಿತವನ್ನು ವಹಿಸಿಕೊಂಡಾಗ ಜನತಾಪಕ್ಷದಲ್ಲಿ ಆರೆಸ್ಸೆಸ್ ಹಿನ್ನೆಲೆಯವರು ಅವಕಾಶ ಪಡೆದಂದಿನಿಂದ, ದೇಶದ ಆಡಳಿತದಲ್ಲೂ ಕೇಸರೀಕರಣ ಆರಂಭಗೊಂಡಿತು. ಮುಂದೆ ರಾಮಜನ್ಮ ಭೂಮಿ ಚಳುವಳಿ ಹಾಗೂ ಬಾಬ್ರಿ ಮಸೀದಿ ನಾಶಕ್ಕೂ ಕಾರಣವಾಯಿತು. ಇವತ್ತು ಕರ್ನಾಟಕದಲ್ಲಿ ಆಡಳಿತದಲ್ಲಿರುವ ಬಿಜೆಪಿಗೆ ಅಧಿಕಾರಿ ವರ್ಗವೂ, ಪೋಲೀಸ್ ಇಲಾಖೆಯೂ ಶರಣಾಗಿ ನಡೆದುಕೊಳ್ಳುತ್ತಿದೆ. ಸಿಪಿಐ(ಎಂ) ಪಕ್ಷವು 1977 ರಲ್ಲೇ, ಜನತಾ ಪಕ್ಷದಲ್ಲಿ ಆರೆಸ್ಸೆಸ್ಸಿಗರನ್ನು ಸೇರಿಸಿಕೊಳ್ಳುವಾಗಲೇ ಅಪಾಯದ ಎಚ್ಚರಿಕೆ ನೀಡಿತ್ತು. ಅದರ ಬಳಿಕ ಪಕ್ಷವು ಬಿಜೆಪಿಯು ಕೇಂದ್ರದಲ್ಲಾಗಲೀ ರಾಜ್ಯದಲ್ಲಾಗಲೀ ಅಧಿಕಾರ ಗಳಿಸದಂತೆ ಪ್ರಯತ್ನಿಸುತ್ತಲೇ ಬಂದಿದೆ. ಬಿಜೆಪಿ ಅಧಿಕಾರ ಪಡೆಯಬಾರದೆಂಬ ಕಾರಣಕ್ಕಾಗಿ ಕಾಂಗ್ರೆಸ್ಸನ್ನು ಬೆಂಬಲಿಸಿದ್ದೂ ಉಂಟು ಎಂದು ಶ್ರೀರಾಮರೆಡ್ಡಿಯವರು ವಿವರಿಸಿದರು.

ದ.ಕ.ಜಿಲ್ಲೆಯಲ್ಲಿ ಹಿಂದಿನ ಆದಿ ಉಡುಪಿ ಪ್ರಕರಣದಿಂದ ತೊಡಗಿ ಇತ್ತೀಚೆಗಿನ ಹೋಂ ಸ್ಟೇ ದಾಳಿ ಪ್ರಕರಣದವರೆಗೂ ಹಿಂದುತ್ವ ಕೋಮುವಾದಿಗಳು ಅಲ್ಪಸಂಖ್ಯಾತರ ಮೇಲೆ ನೂರಾರು ದಾಳಿಗಳನ್ನು ನಡೆಸಿದ್ದಾರೆ. ಇಲ್ಲಿ ಯಾವ ಪ್ರಕರಣಗಳಲ್ಲೂ ಅಪರಾಧಿ ಕೋಮುವಾದಿಗಳು ಶಿಕ್ಷೆಗೊಳಗಾಗಿಲ್ಲ. ಹೆಚ್ಚಿನ ದಾಳಿಗಳ ಸೂತ್ರಧಾರ ಕಲ್ಲಡ್ಕ ಪ್ರಭಾಕರ ಭಟ್ಟರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಲ್ಲ. ಆದರೆ ಆದಿವಾಸಿ ವಿಠಲ ಮಲೆಕುಡಿಯನನ್ನು ಯಾವ ಆರೋಪ ಪಟ್ಟಿ ಹೊರಿಸದೆ ಪೋಲೀಸರು ಹಲವು ತಿಂಗಳು ಕಾರಾಗೃಹದಲ್ಲಿರಿಸಿದ್ದರು. ಇಂಥ ಪರಿಸ್ಥಿತಿಯಲ್ಲೂ ಸಿಪಿಐ(ಎಂ) ಪಕ್ಷ ತಾನು ಸಣ್ಣ ಪಕ್ಷವಾಗಿದ್ದರೂ ತನ್ನ ಪ್ರತಿರೋಧ ವ್ಯಕ್ತಪಡಿಸಿದೆ. ಜಾತ್ಯಾತೀತ ಪಕ್ಷಗಳೆನಿಸಿದ ಬಲಿಷ್ಟ ಕಾಂಗ್ರೆಸ್, ಜನತಾದಳಗಳು ಯಾವುದೇ ದನಿ ಎತ್ತಿಲ್ಲ.

ಧಾರ್ಮಿಕ ಮೂಲಭೂತವಾದ, ಕೋಮುವಾದ ಮತ್ತು ಜಾತಿವಾದದ ವಿರುದ್ಧ ರಾಜಿಯಿಲ್ಲದ ಹೋರಾಟವನ್ನು ಸಿಪಿಐ(ಎಂ) ಪಕ್ಷ ಮಾಡುತ್ತಿದೆ. ಸಾಮಾಜಿಕ ಅನಿಷ್ಟಗಳಾದ ಉಡುಪಿ ದೇವಾಲಯದ ಪಂಕ್ತಿಭೇದ ಮತ್ತು ಸುಬ್ರಹ್ಮಣ್ಯದ ಮಡೆಸ್ನಾನದ ವಿರುದ್ಧ ಸಿಪಿಐ(ಎಂ) ಪಕ್ಷ ಕಳೆದ ವರ್ಷ ಪ್ರತಿಭಟನೆ ಮಾಡಿದ್ದು, ಬರುವ ಡಿಸೆಂಬರ್ ತಿಂಗಳಲ್ಲಿಯೂ ಪ್ರತಿಭಟನಾ ಜಾಥಾ ಹಮ್ಮಿಕೊಂಡಿದೆ ಎಂದು ಅವರು ಹೇಳಿದರು.



ವರದಿ : ವಾ.ಉ.

ಕೋಮುವಾದಿಗಳು ಹುಟ್ಟುತ್ತಲೇ ಭ್ರಷ್ಟರು ಎನ್ನುವುದಕ್ಕೆ ಕರ್ನಾಟಕದಲ್ಲಿ ಹೇರಳ ಉದಾಹರಣೆಗಳಿವೆ. ರಾಜ್ಯದ ಆಡಳಿತ ಕೋಮದಲ್ಲಿದೆ ಎಂದು ಹೇಳುತ್ತಾರೆ. ಆದರೆ ಅದು ಕೇವಲ ಕೋಮದಲ್ಲಿಲ್ಲ; ವೆಂಟಿಲೇಟರ್‌ನಲ್ಲಿದೆ. ಯಡಿಯೂರಪ್ಪ ವೆಂಟಿಲೇಟರ್ ಕಿತ್ತುಕೊಡಲೇ ಸರಕಾರದ ಉಸಿರು ನಿಂತು ಹೋಗುತ್ತದೆ ಎಂದು ಶ್ರೀರಾಮ ರೆಡ್ಡಿ ವ್ಯಂಗ್ಯವಾಡಿದರು. ರಾಜ್ಯ ಬಿಜೆಪಿಯ ಭ್ರಷ್ಟಾಚಾರ, ಕೋಮುವಾದ, ಸಾಮಾಜಿಕ ದಮನದ ವಿರುದ್ಧ ನವಂಬರ್ 20 ರಿಂದ ಸಿಪಿಐ(ಎಂ) ಪಕ್ಷ ರಾಜ್ಯದಲ್ಲಿ ಎರಡು ರಾಜಕೀಯ ಜಾಥಾ ನಡೆಸಲಿದೆ ಎಂದೂ ಅವರು ಹೇಳಿದರು.

ಮಂಗಳೂರು ಪುರಭವನದಲ್ಲಿ ನಡೆದ ಈ ಕಾರ್ಯಾಗಾರದ ಅಧ್ಯಕ್ಷತೆಯನ್ನು ಪಕ್ಷದ ಹಿರಿಯ ಮುಖಂಡರಾದ ಕೆ.ಆರ್.ಶ್ರೀಯಾನ್ ವಹಿಸಿದ್ದರು. ಚರ್ಚೆಗೆ ಪ್ರೇರಕವಾದ ಒಂದು ಸಮಗ್ರ ಟಿಪ್ಪಣಿಯನ್ನು ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅವರು ಮಂಡಿಸಿದರು. ಹಲವಾರು ಪಕ್ಷ ಸಂಗಾತಿಗಳು ಚರ್ಚೆಯಲ್ಲಿ ಭಾಗವಹಿಸಿ, ದ.ಕ.ಜಿಲ್ಲೆಯಲ್ಲಿ ಕೋಮುವಾದವನ್ನು ಎದುರಿಸುವಲ್ಲಿ ತಾವು ಮುಂದೆ ಮಾಡಬೇಕಾದುದರ ಬಗ್ಗೆ ಉಪಯುಕ್ತ ವಿಚಾರಗಳನ್ನು ಮಂಡಿಸಿದರು.

ಕಾವ್ರಾಡಿ : ಮನೆ ನಿವೇಶನ ರಹಿತರ ಬೃಹತ್ ಪ್ರತಿಭಟನೆ

ಸ್ವಾತಂತ್ರ್ಯ ಬಂದು 65 ವರ್ಷ ಕಳೆದರೂ ಈವರೆಗೆ ಎಲ್ಲರಿಗೂ ಸೂರು ಕಲ್ಪಿಸಲು ಸಾಧ್ಯವಾಗಿಲ್ಲ, ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲು ಆಗಿಲ್ಲ, ಆಸ್ಪತ್ರೆಗಳ ಅವ್ಯವಸ್ಥೆ ಹೇಳುವುದೇ ಬೇಡ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಹೇಳಿದರು.

ಕಾವ್ರಾಡಿ ಗ್ರಾಮ ಪಂಚಾಯತ್ ಕಚೇರಿ ಬಳಿ ಕಾವ್ರಾಡಿ, ಕಂಡ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರ ಬೃಹತ್ ಪ್ರತಿಭಟನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ ವರದಿಯಂತೆ ಗರ್ಭಿಣಿಯರಿಗೆ ಪೌಷ್ಠಿಕ ಆಹಾರ ಕೊಡಲು ಸಾಧ್ಯವಾಗದೆ 1/2 ದಷ್ಟು ಗರ್ಭಿಣಿಯರು ರಕ್ತಹೀನತೆಯಿಂದ ನರಳುತ್ತಿದ್ದಾರೆ. ಭಾರತದ 3 ವರ್ಷದ ಒಳಗಿನ 1/2 ದಷ್ಟು ಮಕ್ಕಳು ಹಸಿವಿನಿಂದ ನರಳುತ್ತಿದ್ದಾರೆ. ಅತ್ಯಂತ ಹೀನಾಯ ಸ್ಥಿತಿಯಲ್ಲಿ ದೇಶ ಬಡತನದಿಂದ ನರಳುತ್ತಿದೆ ಎಂದು ಯಾದವ ಶೆಟ್ಟಿ ಸರಕಾರದ ಆಡಳಿತ ವೈಫಲ್ಯತೆಯನ್ನು ಟೀಕಿಸಿದರು.



ಕಾವ್ರಾಡಿ ಕಂಡ್ಲೂರು ಹಾಗೂ ಹಳ್ನಾಡು ಗ್ರಾಮಗಳ ಬಡ ನಿವೇಶನ ರಹಿತರಿಂದ ನಿವೇಶನ ಹಕ್ಕುಪತ್ರಕ್ಕಾಗಿ ಒತ್ತಾಯಿಸುವ 272 ಅರ್ಜಿಗಳನ್ನು ಸಾಮೂಹಿಕವಾಗಿ ಗ್ರಾಮ ಪಂಚಾಯತ್ ಅಧ್ಯಕ್ಷ ಅಶ್ರಫ್‌ಮುನೀಸ್ ರವರಿಗೆ ಹಸ್ತಾಂತರಿಸಲಾಯಿತು. ಕೃಷಿಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ, ಕಾರ್ಯದರ್ಶಿ ವೆಂಕಟೇಶ ಕೋಣಿ – ನಿವೇಶನ ರಹಿತರ ಬೃಹತ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಗ್ರಾಮಾಂತರ ಪ್ರದೇಶದ ಬಡ ನಿವೇಶನ ರಹಿತರು ಸಹಸ್ರಾರು ಸಂಖ್ಯೆಯಲ್ಲಿ ನವೆಂಬರ್ 5 ರಂದು ಕುಂದಾಪುರ ತಾಲೂಕು ಪಂಚಾಯತ್ ಕಚೇರಿ ಮುತ್ತಿಗೆ ಹಾಕುವುದರ ಮೂಲಕ ಸರಕಾರಿ ನಿವೇಶನ ಹಕ್ಕುಪತ್ರ ಮಂಜೂರು ಮಾಡುವುದಕ್ಕೆ ಸರಕಾರವನ್ನು ಒತ್ತಾಯಿಸಲಾಗುವುದು. ಈ ಹೋರಾಟದಲ್ಲಿ ನಿವೇಶನ ರಹಿತರು ಸಕ್ರಿಯವಾಗಿ ಭಾಗವಹಿಸಲು ಕರೆ ಕೊಡಲಾಯಿತು.

ಸಿಐಟಿಯು ತಾಲೂಕು ಅಧ್ಯಕ್ಷ ಕಾರ್ಮಿಕ ಮುಖಂಡ ಎಚ್. ನರಸಿಂಹ ಹಾಗೂ ಹೋರಾಟ ಸಮಿತಿಯ ಸಂಚಾಲಕ ಸುರೇಶ ಮರಾಸಿ, ಉದಯ ಕಂಡ್ಲೂರು, ವಸಂತ್, ಜಾನ್ ಡಿ'ಸೋಜ, ಮರಾಸಿ ಕರುಣಾಕರ ಮೊಗವೀರ ಮರಾಸಿ, ಪಿಯುಸ್ ಡಿ'ಸೋಜ ಕಾವ್ರಾಡಿ ಗ್ರಾಮ ಪಂಚಾಯತ್ ಕಚೇರಿ ಮುತ್ತಿಗೆ ಹೋರಾಟದ ನೇತೃತ್ವ ವಹಿಸಿದ್ದರು. ಸಂಚಾಲಕ ಜಯಂತ್ ಕಾರ್ಯಕ್ರಮ ನಿರೂಪಿಸಿದರು.

ವರದಿ : ವೆಂಕಟೇಶ್ ಕೋಣಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಇತ್ತೀಚಿನ ಕೇಂದ್ರ ಸಂಪುಟ ಪುನರ್ರಚನೆಯೊಂದಿಗೆ ಪ್ರಧಾನ ಮಂತ್ರಿಗಳು ಅನುಸರಿಸಲು ಕಟಿಬದ್ಧರಾಗಿರುವ ನವ-ಉದಾರವಾದಿ ಧೋರಣೆಗಳಿಗೆ ಮತ್ತು ಕಾರ್ಪೊರೇಟ್ ಹಿತಾಸಕ್ತಿಗಳಿಗೆ ಬದ್ಧರಾಗಿರುವ ವ್ಯಕ್ತಿಗಳನ್ನು ಪ್ರಮುಖ ಆರ್ಥಿಕ ಇಲಾಖೆಗಳಲ್ಲಿ ಕೂರಿಸುವ ಪ್ರಕ್ರಿಯೆ ಪೂರ್ಣಗೊಂಡಿದೆ. ಜೊತೆಗೆ ಮನಮೋಹನ್ ಸಿಂಗ್‌ರವರ ಆಡಳಿತದಲ್ಲಿ ಸಮೃದ್ಧಗೊಂಡಿರುವ ಬಂಡವಾಳಿಗರು-ರಾಜಕಾರಣಿಗಳು-ಅಧಿಕಾರಶಾಹಿಗಳ ದುಷ್ಟಕೂಟಕ್ಕೆ ಕಾಂಗ್ರೆಸಿನ ಅಂಗೀಕಾರ ಮುದ್ರೆ ದೊರೆತಂತಾಗಿದೆ. ಇದರ ಫಲವಾಗಿ ದೊಡ್ಡ ಕಾರ್ಪೊರೇಟ್‌ಗಳಿಗೆ ಮತ್ತು ವಿದೇಶಿ ಬಂಡವಾಳಕ್ಕೆ ಹೆಚ್ಚೆಚ್ಚು ರಿಯಾಯ್ತಿಗಳು, ಜನತೆಯ ಬದುಕಿನ ಮೇಲೆ ಹೆಚ್ಚೆಚ್ಚು ಪ್ರಹಾರಗಳು ಮತ್ತು ಹೆಚ್ಚೆಚ್ಚು ಭ್ರಷ್ಟ ವ್ಯವಹಾರಗಳನ್ನು ಮುಂದಿನ ದಿನಗಳಲ್ಲಿ ಕಾಣಲಿದ್ದೇವೆ.

ಕೇಂದ್ರ ಸಂಪುಟ ಪುನರ್ರಚನೆ ಮತ್ತೆ ಅದೇ ಜಾಡಿನಲ್ಲಿ

ಸೀತಾರಾಂ ಯೆಚೂರಿ


ಕಳೆದ ವಾರ 17 ಹೊಸ ವ್ಯಕ್ತಿಗಳನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಂಡ ಸಂಪುಟ ಪುನರ್ರಚನೆ ನಡೆದಿದೆ. ಇದು ಪ್ರಧಾನ ಮಂತ್ರಿಗಳು ಮತ್ತು ಸೋನಿಯಾ ಗಾಂಧಿ ಮುಳುಗುತ್ತಿರುವ ಯುಪಿಎ ಪ್ರತಿಷ್ಠೆಯನ್ನು ಹೇಗಾದರೂ ಬೆಳಗಿಸಲು ಮಾಡಿರುವ ಅಂತಿಮ ಪ್ರಯತ್ನ ಎಂದೇ ಎಲ್ಲೆಡೆ ಕಾಣಲಾಗುತ್ತಿದೆ. ಇದು ನಿಜವಿರಬಹುದಾದರೂ, ಈ ಕಸರತ್ತಿನ ನಿಜ ಉದ್ದೇಶ ಈ ಸರಕಾರಕ್ಕೆ ಈಗ ಉಳಿದಿರುವ ಅವಧಿಯಲ್ಲಿ ಪ್ರಧಾನ ಮಂತ್ರಿಗಳ ಪ್ರಿಯ ನವ-ಉದಾರವಾದಿ ಅಜೆಂಡಾವನ್ನು ಜಾರಿಗೆ ತರುವಂತೆ ಅನುವು ಮಾಡಿ ಕೊಡುವುದೇ ಆಗಿದೆ.

ಜೈಪಾಲ ರೆಡ್ಡಿಯವರನ್ನು ಪೆಟ್ರೋಲಿಯಂ ಇಲಾಖೆಯಿಂದ ತೆಗೆದು ಹಾಕಿರುವುದು ಈ ಅಜೆಂಡಾದ ಅತ್ಯಂತ ಗಮನಾರ್ಹ ಸಂಕೇತ. ರಿಲಯನ್ಸ್ ಇಂಡಸ್ಟ್ರೀಸ್‌ಗೆ ವಹಿಸಿಕೊಟ್ಟ ಕೆ.ಜಿ.ಅನಿಲ ನಿಕ್ಷೇಪದ ಕಾಂಟ್ರಾಕ್ಟ್‌ನದ್ದು ಒಂದು ದೀರ್ಘವಾದ ಕೊಳಕು ದಾಖಲೆ. ರಿಲಯನ್ಸ್ ತನ್ನ ಖರ್ಚುಗಳಿಗೆ 'ಚಿನ್ನದ ಲೇಪನ' ಮಾಡುತ್ತಾ ಬಂದಿಡೆ, ಅಂದರೆ ಖರ್ಚುಗಳನ್ನು ಅತಿರಂಜಿಸಿ ಹೇಳುತ್ತಾಬಂದಿದೆ, ಆಮೂಲಕ ಸರಕಾರದ ಶಾಮೀಲಿನೊಂದಿಗೆ ಹೆಚ್ಚಿನ ಬೆಲೆಗಳನ್ನು ಕಿತ್ತುಕೊಳ್ಳುತ್ತ ಲಾಭದ ಸುರಿಮಳೆ ಗಿಟ್ಟಿಸುತ್ತಿದೆ. ಅದರೊಂದಿಗಿನ ಕಾಂಟ್ರಾಕ್ಟ್ ಪ್ರಕಾರ ಎಪ್ರಿಲ್ 2014ರಲ್ಲಷ್ಟೇ ಅನಿಲ ದರಗಳಲ್ಲಿ ಪರಿಷ್ಕರಣೆ ಮಾಡಬೇಕು. ಆದರೆ ರಿಲಯನ್ಸ್ ಇದನ್ನು ತಕ್ಷಣವೇ ಮಾಡಬೇಕೆಂದು ಕಳೆದ ಕೆಲವು ತಿಂಗಳಿಂದ ಆಗ್ರಹಿಸುತ್ತಿದೆ. ಪ್ರಧಾನ ಮಂತ್ರಿಗಳ ಕಚೇರಿಯೂ ಈ ಬಗ್ಗೆ ಒತ್ತಡ ಹಾಕುತ್ತಿದ್ದರೂ, ಪೆಟ್ರೋಲಿಯಂ ಮಂತ್ರಿಗಳು ಈ ಬೇಡಿಕೆಗೆ ಜಗ್ಗಲು ನಿರಾಕರಿಸುತ್ತಿದ್ದರು. ಕೆ.ಜಿ. ಅನಿಲ ಕ್ಷೇತ್ರದಲ್ಲಿ ಅನಿಲ ಉತ್ಪಾದನೆ ಕ್ರಮೇಣ ಇಳಿಮುಖವಾಗುತ್ತಿದೆ, ಇದರಿಂದ ಸರಕಾರದ ಆದಾಯ ಇಳಿಮುಖವಾಗುತ್ತಿದೆ. ಹೀಗಾಗಲು ಕಾರಣವೇನು ಎಂದು ಈ ಮಂತ್ರಿಗಳು ಪ್ರಶ್ನಿಸುವ ದಾರ್ಷ್ಟ್ಯವನ್ನು ಕೂಡ ತೋರಿದ್ದಾರೆ.

ದುಷ್ಟವೃತ್ತ ಪೂರ್ಣಗೊಂಡಿದೆ

ಕೃಷ್ಣ-ಗೋದಾವರಿ ಕಣಿವೆಯ ಅನಿಲದ ಪ್ರಶ್ನೆಯನ್ನು ಸಿಪಿಐ(ಎಂ) ಸಂಸತ್ ಸದಸ್ಯರು ಕಳೆದ ಐದು ವರ್ಷಗಳಲ್ಲಿ ಸತತವಾಗಿ ಎತ್ತುತ್ತಾ ಬಂದಿದ್ದಾರೆ. ಪೆಟ್ರೋಲಿಯಂ ಮಂತ್ರಿಗಳಿಗೆ ಮತ್ತು ಪ್ರಧಾನ ಮಂತ್ರಿಗಳಿಗೆ ಪತ್ರವನ್ನೂ ಬರೆದಿದ್ದಾರೆ. ಖರ್ಚುಗಳ ಕೃತಕ ಹೆಚ್ಚಳ, ರಿಲಯನ್ಸ್‌ಗೆ ಅನುಕೂಲ ಮಾಡಿಕೊಡಲು ಅನಿಲದ ಬೆಲೆಯಲ್ಲಿ ಯುನಿಟಿಗೆ 4.12 ಡಾಲರುಗಳ ಏರಿಕೆ ಮತ್ತು ಹೈಡ್ರೋಕಾರ್ಬನ್‌ಗಳ ಮಹಾನಿರ್ದೇಶಕರ ಕುಖ್ಯಾತ ಪಾತ್ರ ಇವನ್ನೆಲ್ಲವನ್ನೂ ಎತ್ತಲಾಗಿತ್ತು. ಕೆ.ಜಿ.ಕಣಿವೆಯ ಉತ್ಪಾದನಾ ಪಾಲುದಾರಿಕೆಯ ಕಾಂಟ್ರಾಕ್ಟ್‌ನ ಲೆಕ್ಕಪರಿಶೋಧನೆಯ ಕುರಿತಾದ ಸಿಎಜಿ ವರದಿ ಯುಪಿಎ ಸರಕಾರ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ನಡುವಣ ದುಷ್ಟಕೂಟವನ್ನು ಬಯಲಿಗೆಳೆಯಿತು, ಹಾಗೂ 2006ರಿಂದ ಸಿಪಿಐ(ಎಂ) ಈ ವಿಷಯದಲ್ಲಿ ತಳೆದ ನಿಲುವನ್ನು ಸಮರ್ಥಿಸಿತು.

ಜೈಪಾಲ್ ರೆಡ್ಡಿಯವರು ದೇಶದ ಅತ್ಯಂತ ದೊಡ್ಡ ಕಾರ್ಪೊರೇಟ್ ಗುಂಪನ್ನು ಎದುರು ಹಾಕಿಕೊಂಡು ಈಗ ಅದಕ್ಕೆ ಬೆಲೆ ತೆತ್ತಿದ್ದಾರೆ.



ಕೃಪೆ : ದಿ ಹಿಂದು

ಮಂತ್ರಿಗಳ ನೇಮಕದಲ್ಲಿ ದೊಡ್ಡ ಬಂಡವಾಳಿಗರ ಕಬಂಧ ಬಾಹುಗಳ ಪಾತ್ರವನ್ನು ಸ್ಪಷ್ಟವಾಗಿ ಪ್ರದರ್ಶಿಸಿರುವ ಪ್ರಕರಣ ಇದು. ಈ ಸಂಪುಟ ಪುನರ್ರಚನೆಯೊಂದಿಗೆ ಪ್ರಧಾನ ಮಂತ್ರಿಗಳು ಅನುಸರಿಸಲು ಕಟಿಬದ್ಧರಾಗಿರುವ ನವ-ಉದಾರವಾದಿ ಧೋರಣೆಗಳಿಗೆ ಮತ್ತು ಕಾರ್ಪೊರೇಟ್ ಹಿತಾಸಕ್ತಿಗಳಿಗೆ ಬದ್ಧರಾಗಿರುವ ವ್ಯಕ್ತಿಗಳನ್ನು ಪ್ರಮುಖ ಆರ್ಥಿಕ ಇಲಾಖೆಗಳಲ್ಲಿ ಕೂರಿಸುವ ಪ್ರಕ್ರಿಯೆ ಪೂರ್ಣಗೊಂಡಿದೆ. ಪ್ರಣಬ್ ಮುಖರ್ಜಿಯವರು ರಾಷ್ಟ್ರಪತಿಗಳಾದ್ದರಿಂದ ತೆರವಾದ ಹಣಕಾಸು ಮಂತ್ರಿಯ ಹುದ್ದೆಗೆ ಪಿ.ಚಿದಂಬರಂ ಅವರ ನೇಮಕದೊಂದಿಗೆ ಮನಮೋಹನ್ ಸಿಂಗ್‌ರವರು ಹರಿಯಬಿಡಬೇಕೆಂದಿದ್ದ 'ಪ್ರಾಣಿ ಚೈತನ್ಯ'ಕ್ಕೆ ಒಂದು ಹೊಸ ಕುಮ್ಮಕ್ಕು ದೊರೆತಿತ್ತು. ಈಗ ಆನಂದ ಶರ್ಮಾರವರನ್ನು ವಾಣಿಜ್ಯ ಮಂತ್ರಾಲಯದಲ್ಲಿ, ಕಪಿಲ್ ಸಿಬಲ್‌ರನ್ನು ದೂರಸಂಪರ್ಕ ಮಂತ್ರಾಲಯದಲ್ಲಿ, ಪ್ರಫುಲ್ ಪಟೇಲರನ್ನು ಭಾರೀ ಉದ್ದಿಮೆ ಮಂತ್ರಾಲಯದಲ್ಲಿ ಕೂರಿಸುವುದರೊಂದಿಗೆ ಮತ್ತು ಹೊಸದಾಗಿ ನೇಮಕಗೊಂಡಿರುವ ಮಾನವ ಸಂಪನ್ಮೂಲ ಮಂತ್ರಿ ಪಲ್ಲಂ ರಾಜು ಹಾಗೂ ಇಂಧನ ಇಲಾಖೆಯ ಸ್ವತಂತ್ರ ಜವಾಬ್ದಾರಿ ಹೊರಲು ಜ್ಯೋತಿರಾದಿತ್ಯ ಸಿಂಧ್ಯಾರನ್ನು ರಾಜ್ಯ ಮಂತ್ರಿಯಾಗಿ ನೇಮಕ ಮಾಡುವುದರೊಂದಿಗೆ ಈ ವೃತ್ತ ಪೂರ್ಣಗೊಂಡಿದೆ. ಇವರೆಲ್ಲಾ ಕಾರ್ಪೊರೇಟ್ ಹಿತಾಸಕ್ತಿಗಳನ್ನು ಪ್ರತಿನಿಧಿಸುವವರು.

ಈಗುಳಿದಿರುವ ಏಕೈಕ ಆಯ್ಕೆ

ಈ ಸಂಪುಟ ಪುನರ್ರಚನೆಯ ಎರಡನೇ ಗಮನಾರ್ಹ ಲಕ್ಷಣವೆಂದರೆ, ಕಾಂಗ್ರೆಸ್ ತನ್ನ ಮಂತ್ರಿಗಳ ಮೇಲಿನ ಭ್ರಷ್ಟಾಚಾರದ ಮತ್ತು ಮೋಸದ ವ್ಯವಹಾರಗಳ ಆಪಾದನೆಗಳ ಬಗ್ಗೆ ತೋರಿರುವ ತಿರಸ್ಕಾರ. ಸಲ್ಮಾನ್ ಖುರ್ಶಿದ್‌ರವರು ಮುಖ್ಯಸ್ಥರಾಗಿರುವ ಒಂದು ಟ್ರಸ್ಟಿನ ದುರ್ವ್ಯವಹಾರಗಳ ಬಗ್ಗೆ ಉತ್ತರ ಪ್ರದೇಶ ಸರಕಾರ ತನಿಖೆ ನಡೆಸುತ್ತಿರುವಾಗಲೇ ಅವರಿಗೆ ವಿದೇಶ ಮಂತ್ರಿಯ ಮಹತ್ವದ ಹುದ್ದೆಯನ್ನು ಕೊಡಲಾಗಿದೆ. ಶಶಿ ತರೂರ್ 2010ರಲ್ಲಿ ಐಪಿಎಲ್ ಕೊಚ್ಚಿ ತಂಡಕ್ಕಾಗಿ ನಡೆದ ವ್ಯಾಪಾರ ವ್ಯವಹಾರದಲ್ಲಿ ತಲೆಹಾಕಿ, ಆಗಿನ್ನೂ ತನ್ನ ಗೆಳತಿಯಾಗಿದ್ದವರ ಪರವಾಗಿ ಒಂದು 'ಸ್ವೆಟ್ ಇಕ್ವಿಟಿ' ('ಬೆವರಿಗೆ' ಪ್ರತಿಯಾಗಿ ಶೇರು ಗಳಿಕೆ, ಅಂದರೆ ಹೊಸ ಕಂಪನಿಯ ಆರಂಭಕ್ಕೆ ಹಣಕಾಸು ತೊಡಗಿಸದಿದ್ದರೂ ಬೇರೆ ರೀತಿಯಲ್ಲಿ ನೆರವಾದುದಕ್ಕೆ ಪ್ರತಿಯಾಗಿ ಪಾಲು ಪಡೆಯುವ-ಅನು) ವ್ಯವಹಾರವನ್ನು ಕುದುರಿಸಿದ್ದರಿಂದಾಗಿ ರಾಜೀನಾಮೆ ಕೊಟ್ಟವರು. ಎರಡು ವರ್ಷಗಳ ನಂತರ ಪ್ರಧಾನ ಮಂತ್ರಿಗಳು ಮತ್ತು ಸೋನಿಯಾ ಗಾಂಧಿಯವರು ಇದೊಂದು ಸಣ್ಣ ದುರ್ವರ್ತನೆಯಷ್ಟೇ ಎಂಬ ತೀರ್ಮಾನಕ್ಕೆ ಬಂದು ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿದ್ದಾರೆ.

ಈ ಸಂಪುಟ ಪುರ್ರಚನೆಗೆ ಮತ್ತೊಂದು ಕಾರಣ ಭ್ರಷ್ಟಾಚಾರದ ಆಪಾದನೆಗಳನ್ನು ಎದುರಿಸುತ್ತಿರುವ ಇಬ್ಬರು ಡಿಎಂಕೆ ಮಂತ್ರಿಗಳ ರಾಜೀನಾಮೆ ಮತ್ತು ತೃಣಮೂಲ ಕಾಂಗ್ರೆಸಿನ ಮಂತ್ರಿಗಳು ಸಂಪುಟವನ್ನು ಬಿಟ್ಟು ಹೋದುದರಿಂದ ತೆರವಾದ ಸ್ಥಾನಗಳನ್ನು ತುಂಬುವುದು. ಒಬ್ಬನೇ ಒಬ್ಬ ಎನ್‌ಸಿಪಿ ಮಂತ್ರಿಯನ್ನು ಬಿಟ್ಟರೆ ಹೊಸದಾಗಿ ಮಂತ್ರಿ ಪದವಿಯ ಪ್ರತಿಜ್ಞಾಸ್ವೀಕಾರ ಮಾಡಿದವರೆಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು. ಈ ಸಂಪುಟ ಪುನರ್ರಚನೆಯೊಂದಿಗೆ ಈಗ ಯುಪಿಎ ಮಂತ್ರಿಮಂಡಲ ಬಹುಮಟ್ಟಿಗೆ ಒಂದು ಕಾಂಗ್ರೆಸ್ ಮಂತ್ರಿಮಂಡಲವೇ ಆಗಿಬಿಟ್ಟಿದೆ. ಇದು ಮನಮೋಹನ್ ಸಿಂಗ್‌ರವರ ಆಡಳಿತದಲ್ಲಿ ಸಮೃದ್ಧಗೊಂಡಿರುವ ಬಂಡವಾಳಿಗರು-ರಾಜಕಾರಣಿಗಳು-ಅಧಿಕಾರಶಾಹಿಗಳ ದುಷ್ಟಕೂಟಕ್ಕೆ ಕಾಂಗ್ರೆಸಿನ ಅಂಗೀಕಾರ ಮುದ್ರೆಯನ್ನು ಒತ್ತಿದೆ. ದೊಡ್ಡ ಕಾರ್ಪೊರೇಟ್‌ಗಳಿಗೆ ಮತ್ತು ವಿದೇಶಿ ಬಂಡವಾಳಕ್ಕೆ ಹೆಚ್ಚೆಚ್ಚು ರಿಯಾಯ್ತಿಗಳು, ಜನತೆಯ ಬದುಕಿನ ಮೇಲೆ ಹೆಚ್ಚೆಚ್ಚು ಪ್ರಹಾರಗಳು ಮತ್ತು ಹೆಚ್ಚೆಚ್ಚು ಭ್ರಷ್ಟ ವ್ಯವಹಾರಗಳು ಮುಂದೆ ಬರಲಿವೆ. ಕಾರ್ಮಿಕ ವರ್ಗ ಮತ್ತು ಎಲ್ಲ ದುಡಿಯುವ ಜನವಿಭಾಗಗಳು ಇದರ ವಿರುದ್ಧ ಇನ್ನಷ್ಟು ತೀವ್ರವಾದ ಪ್ರತಿರೋಧಗಳನ್ನು ಒಡ್ಡಲು ಸನ್ನದ್ಧರಾಗಬೇಕಾಗಿದೆ. ಮುಂದಿನ ಲೋಕಸಭಾ ಚುನಾವಣೆಗಳು ನಡೆದಾಗ ಈ ಸರಕಾರ ಅಧಿಕಾರದಿಂದ ಹೊರಗೆ ಹೋಗುವಂತೆ ಮಾಡುವುದಲ್ಲದೆ ದೇಶದ ಜನತೆಯ ಮುಂದೆ ಬೇರೆ ಆಯ್ಕೆಯೇ ಉಳಿದಿಲ್ಲ.

ಏಕೀಕೃತ ಕನ್ನಡ ನಾಡಿಗೆ ಕನ್ನಡಿಗರಿಂದಲೇ ಆಪತ್ತು

ನಿತ್ಯಾನಂದಸ್ವಾಮಿ

57ನೇ ರಾಜ್ಯೋತ್ಸವದ ಸಂಭ್ರಮದಲ್ಲಿದ್ದೇವೆ. ನವೆಂಬರ್ ತಿಂಗಳಾದ್ಯಂತ ಈ ಸಡಗರ ಇರುತ್ತದೆ. ನಮಗೆ ದಿನಾಚರಣೆಗಳು ಬೇಕು ಹೆಚ್ಚೆಚ್ಚು ಯಾಂತ್ರಿಕಗೊಳ್ಳುತ್ತಿರುವ ನಮ್ಮ ಇಂದಿನ ಬದುಕಿಗೆ ಇಂತಹ ಸಾಂಸ್ಕೃತಿಕ ಆಯಾಮದ ಕಂಪು ತಂಪು ಅತ್ಯಗತ್ಯವಾಗಿದೆ. ಸಾಂಸ್ಕೃತಿಕ ಆಚರಣೆಗಳು ಸಹ ಯಾಂತ್ರಿಕಗೊಳ್ಳುವ ಅಪಾಯ ಇರುತ್ತದೆ. ಆಗಾಗದಂತೆ ನೋಡಿಕೊಳ್ಳಬೇಕು ರಾಜ್ಯೋತ್ಸವದ ವಿಷಯಕ್ಕೆ ಹೇಳುವುದಾದರೆ. ಅದು ಕೇಲವು ಹಳದಿ-ಕೆಂಪು ಬಾವುಟಗಳ ಹಾರಾಟದ ದಿನಾಚರಣೆಯಾಗಿದೆ ಕನ್ನಡ ಭಾಷೆ ಆಧಾರಿತ ರಾಜ್ಯ ರಚನೆ ಆಗಿದ್ದು ಏಕೆ? ಅದರ ಉದ್ದೇಶ ಈಡೇರಿದೆಯೊ? ಮುಂದೆ ನಾವೇನು ಮಾಡಬೇಕಾಗಿದೆ? ಮೊದಲಾದ ಪ್ರಶ್ನೆಗಳಿಗೆ ಖಚಿತವಾದ ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸುವುದು ರಾಜ್ಯೋತ್ಸವ ಆಚರಣೆಯ ಮುಖ್ಯಭಾಗವಾಗಬೇಕು. ಆಚರಣೆ ಕೇಲವು ಬಾಹ್ಯ ಆಡಂಬರಕ್ಕೆ ಸೀಮಿತಗೊಳ್ಳದೆ ಗಂಭೀರ ಚಿಂತನ ಮಂಥನದ ಮೂಲಕ ಅರ್ಥಪೂರ್ಣಗೊಳಿಸಬೇಕಾಗಿದೆ.

ಭಾಷಾವಾರು ರಾಜ್ಯ ರಚನೆಯ ಉದ್ದೇಶ:

ಹರಿದ ಹಂಚಿ ಹೋಗಿದ್ದ ಕನ್ನಡ ನಾಡನ್ನು ಒಂದು ಗೂಡಿಸಬೇಕೆಂಬುದು ಕನ್ನಡಿಗರ ಬಹುದಿನಗಳ ಕನಸಾಗಿತ್ತು ಒಂದೆಡೆ ನವಾಬರು, ಇನ್ನೊಂದೆಡೆ ಸಂಸ್ಥಾನಿಕರು, ಮತ್ತೊಂದೆಡೆ ಬ್ರಿಟಿಷರು ಕನ್ನಡದ ನೆಲವನ್ನು ಹಂಚಿಕೊಂಡಿದ್ದಾಗ ಕನ್ನಡಿಗರ ರಾಷ್ಟ್ರೀಯತೆ ಛಿದ್ರವಾಗಿತ್ತು. ಆಳರಸರ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು ಇಂತಹ ಪರಿಸ್ಥಿತಿಯಲ್ಲಿ ಕನ್ನಡ ಭಾಷಿಕರು ತಾವೆಲ್ಲ ಒಂದಾಗಬೇಕು ಎಂಬ ಕನಸು ಕಾಣುತ್ತಿದ್ದರು. "ಉದಯವಾಗಲಿ ನಮ್ಮ ಚಲುವ ಕನ್ನಡನಾಡು" ಎಂದು ಕನವರಿಸುತ್ತಿದ್ದರು. ಇದೇ ರೀತಿಯಲ್ಲಿ ತೆಲುಗು ಭಾಷಿಕರು, ಮರಾಠಿ ಭಾಷಿಕರು, ಮಲೆಯಾಳಿ ಭಾಷಿಕರು, ಗುಜರಾತಿ ಭಾಷಿಕರು, ರಾಜಸ್ತಾನಿ ಹಾಗೂ ಪಂಜಾಬಿ ಭಾಷಿಕರು ಭಾಷಾವಾರು ಪ್ರಾಂತ್ಯ ರಚನೆಯ ಕನಸು ಕಾಣುತ್ತಿದ್ದರು.

ಭಾಷಾವಾರು ಪ್ರಾಂತ್ಯ ರಚನೆಯ ಕನಸು ಕೇವಲ ಭಾವನಾತ್ಮಕ ಆಶಯವಾಗಿರಲಿಲ್ಲ, ಭಾಷಾ ಆಧಾರಿತವಾದ ರಾಷ್ಟ್ರೀಯತೆಯನ್ನು ಜಾಗೃತಗೊಳಿದುವುದು ಬ್ರಿಟಿಷ್ ಸಾಮ್ರಾಜ್ಯಶಹಿಯ ವಿರುದ್ಧದ ವಿಶಾಲ ಪ್ರಜಾಪ್ರಭುತ್ವ ಚಳುವಳಿಯನ್ನು ಬಲಪಡಿಸುವುದಕ್ಕು ಅಗತ್ಯವಾಗಿತ್ತು. ಭಾಷಾ ರಾಷ್ಟ್ರೀಯತೆಯನ್ನು ಜಾಗೃತಗೊಳಿಸುವ ಮೂಲಕ ರಾಷ್ಟ್ರೀಯ ಚಳುವಳಿಗೆ ವಿವಿಧ ಜನಸಮೂಹಗಳನ್ನು ಸೆಳೆಯುವ ಸಾಧ್ಯವಾಯಿತು. ಈ ವಿಚಾರವನ್ನು ಸರಿಯಾಗಿ ಮನಗಂಡ ಗಾಂಧೀಜೀಯವರು ಕಾಂಗ್ರೆಸ್ ಸಂಘಟನೆಯನ್ನು ಭಾಷಾವಾರು ಪ್ರಾಂತ್ಯಗಳ ಆಧಾರದಲ್ಲಿ ಪುನರ್ ರಚಿಸಿದರು 1920ರ ನಾಗಪುರ ಕಾಂಗ್ರೆಸ್ ಅಧಿವೇಶನವು ಈ ಕುರಿತು ನಿರ್ಣಯವನ್ನು ಅಂಗೀಕರಿಸಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಜೊತೆಯಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ)ಗಳನ್ನು ರಚಿಸಲು ಆರಂಭಸಲಾಯಿತು. ಹೀಗೆ ಕರ್ನಾಟಕವೂ ಸೇರಿದಂತೆ ಕೇಲವು ರಾಜ್ಯಗಳಲ್ಲಿ ಸ್ವಾತಂತ್ರ ಹೋರಾಟದ ಜೊತೆಜೊತೆಗೆ ಏಕೀಕರಣ ಚಳುವಳಿಯೂ ನಡೆಯಿತು.

ಏಕೀಕರಣಕ್ಕಾಗಿ ನಡೆದ ಚಳುವಳಿ ಸಹಜವಾಗಿ ಪ್ರಜಾಪ್ರಭುತ್ವಕ್ಕಾಗಿ ನಡೆದ ಚಳುವಳಿಯ ಭಾಗವಾಗಿತ್ತು, ಒಂದು



ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯ ಅರ್ಥಪೂರ್ಣ ಅನುಷ್ಠಾನಕ್ಕೆ ಜನತೆಯ ಪಾಲ್ಗೊಳ್ಳುವಿಕೆ ಬಹಳ ಮುಖ್ಯ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಉದ್ದೇಶವೇ ಅಧಿಕಾರ ವಿಕೇಂದ್ರೀಕರಣ ಜನರಿಂದ ಜನರಿಗಾಗಿ ಆಡಳಿತ ಎನ್ನುವುದೇ ಅದರ ಪ್ರಮುಖ ಗುಣಲಕ್ಷಣ, ಅಂದರೆ ಆಡಳಿತ ಜನರಿಗೆ ಹತ್ತಿರವಾಗಿರಬೇಕು, ಅವರನ್ನು ಒಳಗೊಳ್ಳಬೇಕು, ಇದು ಸಾಧ್ಯವಾಗಬೇಕಾದರೆ ಆಡಳತ ಜನರಾಡುವ ನುಡಿಯಲ್ಲೇ ನಡೆಯಬೇಕು. ಆ ಕಾರಣದಿಂದಾಗಿ ಒಂದು ಭಾಷೆ ಮಾತನಾಡುವ ಜನಸಮೂಹಗಳು ನೆಲೆಸಿರುವ ಪ್ರದೇಶಗಳನ್ನು ಒಂದು ಪ್ರಾಂತ್ಯದ ವ್ಯಾಪ್ತಿಗೆ ಸೇರಿಸಬೇಕು, ಈ ತಿಳುವಳಿಕೆಯೊಂದಿಗೆ ಭಾಷಾವಾರು ಪ್ರಾಂತ್ಯ ರಚನೆಯ ಚಳುವಳಿಯು ಸ್ವಾತಂತ್ರ್ಯ ಹೋರಾಟದ ಭಾಗವಾಗಿಯೇ ಬೆಳೆದು ಬರುವಂತಾಯಿತು

ಕಾಂಗ್ರೆಸಿನ ವಚನಭ್ರಷ್ಟತೆ.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಕಾಂಗ್ರೆಸ್ ಭಾಷಾವಾರು ಪ್ರಾಂತ್ಯಗಳ ರಚನೆಗೆ ಬದ್ಧವಾಗಿತ್ತು, ಆದರೆ ಸ್ವಾತಂತ್ರ್ಯ ನಂತರ ಕಾಂಗ್ರೆಸ್ ತನ್ನ ನಿಲುವು ಬದಲಿಸಿತು ನೆಹರುರವರ ಭಾಷಾವಾರು ಪ್ರಾಂತ್ಯ ರಚನೆ ಭಾರತದ ವಿಘಟನೆಗೆ ಕಾರಣವಾಗುತ್ತದೆ ಎಂಬ ನಿಲುಮೆಯನ್ನು ಹೊಂದಿದ್ದರು. ಭಾಷಾ ರಾಷ್ಟ್ರೀಯತೆಗಳು ಭಾರತದ ಸಮಗ್ರ ರಾಷ್ಟ್ರೀಯತೆಯ ಭಾಗಗಳಾಗಿಯೇ ಸಮಾನಾಂತರವಾಗಿ ಬೆಳೆದು ಬರಲು ಸಾಧ್ಯವಿದೆ ಎಂಬುದನ್ನು ಅವರು ಮನಗಾಣಲಾರರಾದರು. ಕರ್ನಾಟಕದಲ್ಲಿ ಏಕೀಕರಣಕ್ಕಾಗಿ ಶ್ರಮಿಸುತ್ತಿದ್ದ ಎಸ್.ನಿಜಲಿಂಗಪ್ಪ ಆರ್.ಆರ್.ದೀವಾಕರ್ ಮೊದಲಾದ ಕಾಂಗ್ರೆಸ್ ನಾಯಕರಿಗೂ ನೆಹರು ಮನವೊಲಿಸಲು ಸಾಧ್ಯವಾಗಲಿಲ್ಲ.

ಆದರೆ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಲು ಅಷ್ಟರಲ್ಲೇ ಅನೇಕ ಸಂಘಟನೆಗಳು ಹುಟ್ಟಿಕೊಂಡಿದ್ದವು. 1890 ರಲ್ಲಿ ಧಾರವಾಡದಲ್ಲಿ ಸ್ಥಾಪನೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಅಂತಹ ಸಂಘಟನೆಗಳಲ್ಲಿ ಪ್ರಮುಖವಾದುದು. 1915 ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾದ ಕರ್ನಾಟಕ ಸಾಹಿತ್ಯ ಪರಿಷತ್ತು ತನ್ನ ಎಲ್ಲಾ ಸಮ್ಮೇಳನಗಳಲ್ಲಿ ಕರ್ನಾಟಕದ ಏಕೀಕರಣವನ್ನು ಆಗ್ರಹಿಸಿ ಗೊತ್ತುವಳಿಗಳನ್ನು ಸ್ವೀಕರಿಸುತ್ತಲೇ ಬಂದಿತ್ತು.

ಕಮ್ಯೂನಿಸ್ಟ್ ಪಕ್ಷದ ಪಾತ್ರ:

ಖ್ಯಾತ ನ್ಯಾಯಮೂರ್ತಿ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರ ಮಾತುಗಳಲ್ಲಿ ಹೇಳುವುದಾದರೆ. "ಕಮ್ಯೂನಿಸ್ಟ್ ಪಕ್ಷದ ವಿನಹ ಮತ್ತಾರಿಗೂ ಕರ್ನಾಟಕದ ಏಕೀಕರಣದ ಬಗೆಗೆ ಪ್ರಬಲವಾದ ನಂಬಿಕೆ ಇರಲಿಲ್ಲ. ಕಮ್ಯೂನಿಸ್ಟ್ ಪಕ್ಷವು ಬ್ರಿಟಿಷ್ ಕರ್ನಾಟಕ, ಬೊಂಬಾಯಿ ಕರ್ನಾಟಕ ಮತ್ತು ಮದ್ರಾಸ್ ಪ್ರಾಂತ್ಯಗಳು ಸೇರಿ ಹಾಗೂ ಮೈಸೂರು ಸಂಸ್ಥಾನಗಳು ಸೇರಿದ ಕರ್ನಾಟಕದ ರಚನೆಗೆ ಆಸಕ್ತಿ ವಹಿಸಿತ್ತು."

ರೈತರನ್ನು ಕಾರ್ಮಿಕರನ್ನು ಸಂಘಟಿಸುತ್ತಾ ಅವರು ನಡುವೆ ಬಲಗೊಳ್ಳತೊಡಗಿದ್ದ ಕಮ್ಯೂನಿಸ್ಟ್ ಪಕ್ಷಕ್ಕೆ ಒಂದು ಪ್ರಶ್ನೆ ಎದುರಾಯಿತು. ಮೈಸೂರು ಸಂಸ್ಥಾನದಲ್ಲಿ ಮುಂಬೈ, ಮದ್ರಾಸ್, ಹೈದರಾಬಾದ್ ಕರ್ನಾಟಕಗಳಲ್ಲಿ ಬೇರೆ ಬೇರೆ ರೀತಿಯ ಒಕ್ಕಲುತನ ಕಾನೂನುಗಳು ಜಾರಿಯಲ್ಲಿದ್ದವು. ಗೇಣಿ ದರ ಸಹ ಬೇರೆ ಬೇರೆಯಾಗಿತ್ತು. ಹೀಗಿರುವಾಗ ಕನ್ನಡ ಭಾಷೆ ಮಾತನಾಡುವ ರೈತರ ಐಕ್ಯ ಚಳುವಳಿ ನಡೆಸುವುದು ಕಷ್ಟಕರವಾಗಿತ್ತು. ಕನ್ನಡ ಪ್ರದೇಶಗಳ ಏಕೀಕರಣದಿಂದ ಮಾತ್ರ ಇದು ಸಾಧ್ಯ ಎಂಬ ತೀರ್ಮಾನಕ್ಕೆ ಬರುವಂತಾಯಿತು. ಆಗ ಒಂದೇ ತರಹದ ಒಕ್ಕಲುತನ ಕಾನೂನಿಗೆ ಪ್ರಬಲ ಒತ್ತಾಯ ತರಬಹುದು ಎಂದು ಸ್ಪಷ್ಟವಾಯಿತು. ಕಾರ್ಮಿಕರಿಗೆಸಂಬಂಧಪಟ್ಟ ಕಾನೂನು ಗಳಲ್ಲಿಯೂ ಇದೇ ರೀತಿಯ ವ್ಯತ್ಯಾಸಗಳಿದ್ದವು. ದುಡಿಯುವ ಜನರ ಹಿತಾಸಕ್ತಿಗಳ ರಕ್ಷಣೆಗಾಗಿ ಬಲವಾದ ಸಂಘಟನೆಗಳನ್ನು ಕಟ್ಟಲು ಕರ್ನಾಟಕದ ಏಕೀಕರಣ ಅಗತ್ಯವೆಂದು ಮನಗಂಡ ಕಮ್ಯೂನಿಸ್ಟ್ ಪಕ್ಷ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಲು ನಿರ್ಣಯಿಸಿತು. ಕಮ್ಯೂನಿಸ್ಟ್ ಚಳುವಳಿಯ ಅಂದಿನ ಮುಖಂಡರಾಗಿದ್ದ ಎನ್.ಎಲ್. ಮುಧೋಳ್ ಏಕೀಕರಣ ಚಳುವಳಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು.

ಸ್ವಾತಂತ್ರ ಭಾರತದ ಪ್ರಥಮ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿಯೇ ವಿಶಾಲಾಂಧ್ರದ ಪ್ರಶ್ನೆ ಎದ್ದು ಬಂತು. ಅಲ್ಲಿಯೂ ಕಮ್ಯೂನಿಸ್ಟರು ಚಳುವಳಿಯಲ್ಲಿ ನೇತೃತ್ವದ ಪಾತ್ರ ವಹಿಸಿದ್ದರು. ಕಾಂಗ್ರೆಸ್ ಮುಖಂಡ ಪೊಟ್ಟಿ ಶ್ರೀರಾಮುಲು ಮದ್ರಾಸ್ ಪ್ರಾಂತ್ಯದಿಂದ ತೆಲುಗು ಪ್ರದೇಶಗಳನ್ನು ಪ್ರತ್ಯೇಕ ವಿಶಾಲ ಆಂಧ್ರ ರಚನೆಗೆ ಒತ್ತಾಯಿಸಿ ಆಮರಣಾಂತ ಉಪವಾಸ ಕೈಗೊಂಡರು. 58 ದಿನ ಉಪವಾಸ ಮಾಡಿ 59ನೇ ದಿನ ಮರಣ ಹೊಂದಿದರು. ಇದರಿಂದ ಕಾಂಗ್ರೆಸ್ ಪಕ್ಷದ ಮೇಲೆ ಒತ್ತಡ ಹೆಚ್ಚಾಯಿತು. ಈ ಹಿನ್ನೆಲೆಯಲ್ಲಿ ರಚನೆಯಾದ ರಾಜ್ಯಗಳ ಪುನರ್ ರಚನಾ ಆಯೋಗವು ಸ್ಥೂಲವಾಗಿ ಭಾಷಾವಾರು ಪ್ರಾಂತ್ಯ ರಚನೆಗೆ ಶಿಫಾರಸು ಮಾಡಿತು. ಇದೇ ಸಮಯದಲ್ಲಿ ಕಾಮ್ರೆಡ್ ಪಿ.ಸುಂದರಯ್ಯ ಅವರು ತೆಲುಗು ಭಾಷಿಕ ಪ್ರದೇಶಗಳನ್ನೇ ಒಂದುಗೂಡಿಸಿ ವಿಶಾಲ ಆಂಧ್ರ ಏಕಾಗಬೇಕು ಎಂದು ವಿವರಿಸುವ ಪುಸ್ತಕವನ್ನು ಬರೆದರು. ಆಗ ಕೇರಳದ ತಿರುವಾಂಕೂರು ಮತ್ತು ಕೊಚ್ಚಿನ್ ಸಂಸ್ಥಾನಗಳ ಅಡಿ ಮತ್ತು ಬ್ರಿಟಿಷ್ ಆಳ್ವಿಕೆಯ ಮದ್ರಾಸ್ ಪ್ರಾಂತ್ಯದಲ್ಲಿ ಹಂಚಿಹೋಗಿತ್ತು.

1953 ಏಪ್ರಿಲ್ 1 ರಂದು ಕಾಂಗ್ರೆಸ್ ಮುಖಂಡ ಅದರಗುಂಚಿ ಶಂಕರಗೌಡರು ಏಕೀಕರಣಕ್ಕಾಗಿ ಒತ್ತಾಯಿಸಿ ಹುಬ್ಬಳ್ಳಿಯಲ್ಲಿ ಆಮರಣಾಂತ ಉಪವಾಸ ಆರಂಭಿಸಿದರು. ಅವರ ಬದಲಾನವನ್ನು ತಪ್ಪಿಸಲು ಏಪ್ರಿಲ್ 19ರಂದು ಹುಬ್ಬಳ್ಳಿಯಲ್ಲಿಯೇ ಪ್ರದೇಶ್ ಕಾಂಗ್ರೆಸ್ ಸಮಿತಿ ಸಭೆ ಸೇರಿತು. ಸಭೆ ನಡೆದಲ್ಲಿಗೆ ಬಂದ ಕಮ್ಯೂನಿಸ್ಟ್ ನಾಯಕರು

ಕನ್ನಡ ವಾರಪತ್ರಿಕೆ

ಕಾಂಗ್ರೆಸ್ ವೈಫಲ್ಯತೆಯನ್ನು ವಿರೋಧಿಸಿದರು. ಲಾಠಿ ಚಾರ್ಜ್ ಮತ್ತು ಗೋಲಿಬಾರ್ ನಡೆಯಿತು. ಬಳ್ಳಾರಿಯ ರಂಜಾನ್ ಸಾಬ್ ಹುತಾತ್ಮರಾದರು. ಕಮ್ಯೂನಿಸ್ಟ್ ಮುಖಂಡರ ಬಂಧನವಾಯಿತು. ಬಂಧಿತರ ಪರವಾಗಿ ಎಸ್.ಆರ್.ಬೊಮ್ಮಾಯಿ ವಾದಿಸಿದರು ಮುಂದೆ ದಾವಣಗೆರೆಯಲ್ಲಿ ಸಭೆ ಸೇರಿದ ಕರ್ನಾಟಕ ಏಕೀಕರಣ ಚಳುವಳಿಗಾರರು ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್‌ನ್ನು (ಅಕರಾನಿ) ಸ್ಥಾಪಿಸಿದರು. ಕೆ.ಆರ್.ಕಾರಂತ ಅಧ್ಯಕ್ಷರಾಗಿಯೂ ಬಿ.ವಿ. ಕಕ್ಕಿಲ್ಲಾಯರು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. 1954 ಅಕರಾನಿ ಪರಿಷತ್‌ನ ಸಭೆ ಹಂಪಿಯಲ್ಲಿ ನಡೆದಾಗ ಅಳವಂಡಿ ಶಿವಮೂರ್ತಿ ಸ್ವಾಮಿ ಅಧ್ಯಕ್ಷರಾದರು. ಬಿ.ವಿ.ಕಕ್ಕಿಲ್ಲಾಯರೇ ಪ್ರಧಾನ ಕಾರ್ಯದರ್ಶಿಯಾಗಿ ಮುಂದುವರೆದರು. ಅಕರಾನಿ ಪರಿಷತ್ತಿನ ನೇತೃತ್ವದಲ್ಲಿ ನಡೆದ ಪ್ರಬಲವಾದ ಚಳುವಳಿಯ ಫಲವಾಗಿ ರಾಜ್ಯ ಪುನರ್ವಿಂಗಡಣಾ ಉನ್ನತ ಮಟ್ಟದ ಆಯೋಗ ರಚನೆಯಾಯಿತು. ಆಯೋಗದ ಶಿಫಾರಸಿನಂತೆ 1956 ನವೆಂಬರ್ 1ರಂದು ಕನ್ನಡ ಮಾತನಾಡುವ ಪ್ರದೇಶಗಳೆಲ್ಲ ಸೇರಿ ವಿಶಾಲ ಮೈಸೂರು ರಾಜ್ಯ ರಚನೆಯಾಯಿತು. ಮುಂದೆ 1973ರ ನವೆಂಬರ್ 1ರಂದು ಕರ್ನಾಟಕ ಎಂದು ಪುನರ್ ನಾಮಕರಣಗೊಳ್ಳುವುದರೊಂದಿಗೆ ಕರ್ನಾಟಕ ರಾಜ್ಯ ಉದಯವಾಯಿತು.

ಬಿಜೆಪಿಯ ಅಸಂಭದ್ಧ ನಿಲುವು

ಬಿಜೆಪಿಗೆ ಭಾಷಾವಾರು ರಾಜ್ಯಗಳ ನಿರ್ಮಾಣದಲ್ಲಿ ನಂಬಿಕೆ ಇಲ್ಲ. ಬಿಜೆಪಿಗೆ ಸೈದ್ಧಾಂತಿಕ ಮಾರ್ಗದರ್ಶನ ನೀಡುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರೆಸ್ಸೆಸ್)ಹಿಂದುತ್ವ ಆಧಾರಿತ ರಾಷ್ಟ್ರೀಯತೆಯನ್ನು ಪ್ರತಿಪಾದಿಸುತ್ತಾ ಬಂದಿದೆ. ಅದು ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗವಹಿಸಲಿಲ್ಲ. ಭಾಷಾವಾರು ರಾಜ್ಯ ನಿರ್ಮಾಣಕ್ಕಾಗಿ ನಡೆದ ಚಳುವಳಿಯಲ್ಲೂ ಭಾಗವಹಿಸಲಿಲ್ಲ. ಮತಧರ್ಮಗಳೇ ರಾಷ್ಟ್ರೀಯತೆಯನ್ನು ನಿರ್ಧರಿಸುತ್ತದೆ ಎಂಬುದು ಅದರ ಪ್ರತಿಪಾದನೆಯಾಗಿದೆ. ಬಿಜೆಪಿಯು ಇದೇ ವಾದವನ್ನು ಅನುಸರಿಸುತ್ತಿದ್ದು, ಮತ ಧರ್ಮವೇ ರಾಷ್ಟ್ರೀಯತೆಯ ಆಧಾರ ಎಂದು ಪ್ರತಿಪಾದಿಸುತ್ತದೆ. ಈ ವಾದ ಸರಿಯಾದಲ್ಲಿ ಮತ ಮತ್ತು ಭಾಷೆ ಎರಡರೊಳಗೆ ಭಾಷೆ ಹೆಚ್ಚು ಶಾಶ್ವತವಾದದ್ದು. ಮತವನ್ನು ವ್ಯಕ್ತಿ ತನ್ನ ಇಚ್ಛೆಗೆ ಅನುಗುಣವಾಗಿ ಬದಲಾಯಿಸಬಹುದು. ಆದರೆ ಮಾತ್ರ ಭಾಷೆಯನ್ನು ಬದಲಾಯಿಸಲಾಗುವುದಿಲ್ಲ. "ನಾವೆಲ್ಲ ಒಂದು ಎಂಬ ಭಾವನೆಯೇ ರಾಷ್ಟ್ರೀಯತೆಯ ಮೂಲಾಧಾರವಾಗಿದೆ. ಒಂದೇ ಭಾಷೆ ಮಾತನಾಡುವವರಲ್ಲಿ ತಾವು ಒಂದು ಎಂಬ ಭಾವನೆ ಸಹಜವಾಗಿರುತ್ತದೆ. ಮತಗಳು ಬೇರೆ ಬೇರೆಯಾಗಿದ್ದರೂ ಅವರು ಆಡುವ ಭಾಷೆ ಒಂದೇ ಆಗಿದ್ದರೆ ಅವರಲ್ಲಿ "ನಾವೆಲ್ಲರು ಒಂದೇ" ಎಂಬ ಭಾವನೆ ಇರುವದನ್ನು ಕಾಣಬಹುದು. ಉದಾಹರಣೆಗೆ ಮಲೆಯಾಳಿ ಭಾಷೆ ಮಾತನಾಡುವ ಹಿಂದುಗಳು, ಮುಸಲ್ಮಾನರು ಮತ್ತು ಕ್ರೈಸ್ತರೆಲ್ಲರೂ ಒಂದೇ ರಾಷ್ಟ್ರೀಯತೆಯನ್ನು ಹಂಚಿಕೊಂಡು ಬದುಕುತ್ತಿರುವುದನ್ನು ಕೇರಳದಲ್ಲಿ




ಎನ್.ಎಲ್. ಉಪಾಧ್ಯಾಯ ಎನ್.ಕೆ.ಉಪಾಧ್ಯಾಯ ಬಿ.ವಿ. ಕಕ್ಕಿಲ್ಲಾಯ

ಏಕೀಕರಣ ಚಳುವಳಿಯಲ್ಲಿ ನೇತೃತ್ವ ವಹಿಸಿದ ಪ್ರಮುಖ ಕಮ್ಯುನಿಸ್ಟ್ ಮುಖಂಡರು

ಕಾಣಬಹುದು. ಹಾಗೆಯೇ ಆಂಧ್ರದ ತೆಲುಗು ಭಾಷಿಕರು, ತಮಿಳುನಾಡಿನ ತಮಿಳು ಭಾಷಿಕರು, ಹಿಂದಿ ಭಾಷೆ ಮಾತನಾಡುವವರ ರಾಜ್ಯಗಳಲ್ಲಿ ಇರುವ ಬೇರೆ ಬೇರೆ ಮತಧರ್ಮಗಳಿಗೆ ಸೇರಿದವರು ಒಂದೇ ರಾಷ್ಟ್ರೀಯತೆಯ ಅಡಿಯಲ್ಲಿ ಬದುಕುತ್ತಿರುವುದನ್ನು ಕಾಣುತ್ತೇವೆ.

ಬಿಜೆಪಿ ಸಣ್ಣ ರಾಜ್ಯಗಳ ಪರವಾಗಿದೆ. ಸಣ್ಣ ರಾಜ್ಯಗಳ ನಿರ್ಮಾಣ ಆಡಳಿತಾತ್ಮಕವಾಗಿ ಭಾರಿ ಅನುಕೂಲ ಎಂದು ಅದು ಹೇಳುತ್ತದೆ. ಈ ವಾದವು ಸಹ ಅಸಂಬದ್ಧವಾಗಿದೆ. ಸಣ್ಣ ರಾಜ್ಯಗಳು ಹೆಚ್ಚಾಗಿ ಕೇಂದ್ರವನ್ನು ಅವಲಂಬಿಸಬೇಕಾಗುತ್ತದೆ. ಅವು ಸ್ವತಂತ್ರವಾಗಿ ಬಲಿಷ್ಠವಾಗಿ ಬೆಳೆಯಲಾರವು. ಪ್ರಸಕ್ತ ಭಾರತದಲ್ಲಿ ರಾಜ್ಯಗಳಿಗೆ ಹೆಚ್ಚು ಅಧಿಕಾರವಿಲ್ಲ. ಎಲ್ಲ ಅಧಿಕಾರ ಕೇಂದ್ರ ಸರ್ಕಾರದಲ್ಲಿದೆ. ಕೇಂದ್ರವು



ಏಕೀಕರಣ ಚಳುವಳಿಯ ಹುತಾತ್ಮ ಸಂಗಾತಿ ಬಳ್ಳಾರಿಯ ರಂಜಾನ್ ಸಾಬ್

ಹೆಚ್ಚು ಬಲಿಷ್ಠವಾಗಿ ರಾಜ್ಯಗಳು ಬಲಹೀನವಾಗಿರುವುದು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ. ಸರ್ವಾಧಿಕಾರಕ್ಕೆ ಎಡೆ ಮಾಡಿಕೊಡುತ್ತದೆ. ಸಣ್ಣ ರಾಜ್ಯಗಳು ಬೇಗ ಅಥವಾ ಚೆನ್ನಾಗಿ ಅಭಿವೃದ್ಧಿ ಹೊಂದುತ್ತವೆ ಎಂದು ಹೇಳಲು ಆಧಾರಗಳೇನೂ ಇಲ್ಲ. ಒಂದು ಸಣ್ಣ ರಾಜ್ಯ, ಒಂದು ಸಣ್ಣ ಜಿಲ್ಲೆ, ಒಂದು ಸಣ್ಣ ತಾಲೂಕಿನಲ್ಲಿಯೂ ಅಭಿವೃದ್ಧಿ ಕಾಣದಿರುವ ಪ್ರದೇಶಗಳು ಇರುವುದನ್ನು ನಾವು ಕಾಣುತ್ತೇವೆ.

ಪ್ರತ್ಯೇಕತೆಯ ಕೂಗು ಏಕೆ?

ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬ ಕೂಗು ಎಬ್ಬಿಸಿ ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿ ಘೋಷಿಸಲು ಒತ್ತಾಯಿಸಿ ಕಳೆದ ಕೆಲವು ವರ್ಷಗಳಿಂದ ನಡೆಸಲಾಗುತ್ತಿದ್ದ ಛಿದ್ರಕಾರಿ ಚಳುವಳಿಯು ಸಂವಿಧಾನದ 371ನೇ ವಿಧಿ ತಿದ್ದಿಪಡಿ ಅಡಿಯಲ್ಲಿ ಪ್ರತ್ಯೇಕ ಸ್ಥಾನಮಾನ ನೀಡುವ ಭರವಸೆ ಸಿಕ್ಕಿರುವುದರಿಂದ ತಣ್ಣಗಾಗಿದೆ. ಸಂವಿಧಾನದ 371 ನೇ ವಿಧಿಯನ್ನು ಅನ್ವಯಿಸುವ ಒಂದೇ ಕ್ರಮದಿಂದ ಉತ್ತರ ಕರ್ನಾಟಕದ ಹಿಂದುಳಿಯುವಿಕೆ ಹೋಗಿ ಬಿಡುತ್ತದೆ ಎಂದು ತಿಳಿಯುವುದು ಒಂದು ಭ್ರಮೆ. ಆಳುವ ಸರ್ಕಾರಗಳ ಧೋರಣೆಗಳು ಬದಲಾಗದೆ, ಅದಕ್ಕಾಗಿ ಜನರ ಚಳುವಳಿ ನಡೆಯದೆ ಪ್ರಾದೇಶಿಕ ಅಸಮಾನತೆ/ ಹಿಂದುಳಿಯುವಿಕೆಯನ್ನು ತೊಡೆದುಹಾಕಲು ಸಾಧ್ಯವಿಲ್ಲ.

ಉತ್ತರ ಕರ್ನಾಟಕದ ಹಿಂದುಳಿಯುವಿಕೆಗೆ ದಕ್ಷಿಣ ಕರ್ನಾಟಕದವರು ಕಾರಣ ಎಂದು ಆರೋಪಿಸುವುದು ಸಹ ದೊಡ್ಡ ತಪ್ಪು. ದಕ್ಷಿಣ ಕರ್ನಾಟಕದ ಜನ ಉತ್ತರ ಕರ್ನಾಟಕದವರ ಶೋಷಣೆ ಮಾಡುತ್ತಾರೆ ಎಂದಂತಾಗುತ್ತದೆ. ಅದು ನಿಜ ಅಲ್ಲವೇ ಅಲ್ಲ. ನಮ್ಮ ರಾಜ್ಯವನ್ನು ಆಳಿದ ಮತ್ತು ಆಳುತ್ತಿರುವ ಸರ್ಕಾರಗಳು ಬಂಡವಾಳಶಾಹಿ-ಭೂಮಾಲಕ ವರ್ಗಗಳ ರಾಜಕೀಯ ಪಕ್ಷಗಳ ಸರ್ಕಾರಗಳು. ಬಂಡವಾಳಶಾಹಿ- ಭೂಮಾಲಿಕ ವರ್ಗಗಳಿಗೆ ತಮ್ಮ ವರ್ಗಹಿತ ಒಂದೇ ಮುಖ್ಯ. ಇಡೀ ರಾಜ್ಯವನ್ನು, ರಾಜ್ಯದ ಎಲ್ಲಾ ಪ್ರದೇಶಗಳನ್ನು ಸಮಾನವಾಗಿ ಅಭಿವೃದ್ಧಿ ಪಡಿಸುವ ಆಸಕ್ತಿ ಅವರಲ್ಲಿ ಇರುವುದು ಸಾಧ್ಯವೇ ಇಲ್ಲ. ಅದನ್ನು ಅವರಲ್ಲಿ ನಿರೀಕ್ಷೆ ಮಾಡುವುದರಲ್ಲಿ ಅರ್ಥವಿಲ್ಲ. ಜನರ ಪ್ರಬಲವಾದ ಚಳುವಳಿಯಿಂದ ಮಾತ್ರ ಪ್ರಾದೇಶಿಕ ಹಿಂದುಳಿಯುವಿಕೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಿಕೊಳ್ಳಬಹುದು.

ಹೈದರಾಬಾದ್ ಕರ್ನಾಟಕದ ಪ್ರತ್ಯೇಕತೆಯ ಕೂಗು ತಣ್ಣಗಾಗುತ್ತಿದ್ದಂತೆ ಬಿಜೆಪಿ ಸರ್ಕಾರದಲ್ಲಿ ಕೃಷಿ ಮಂತ್ರಿ ಆಗಿರುವ ಉಮೇಶ ಕತ್ತಿ ಕರ್ನಾಟಕವನ್ನು ಒಡೆಯುವ ಇನ್ನೊಂದು ಬಾಂಬ್ ಸ್ಫೋಟ ಮಾಡಿದ್ದಾರೆ. ಬೆಳಗಾವಿಯಲ್ಲಿ ಕಟ್ಟಲಾದ ಸುವರ್ಣ ವಿಧಾನಸೌಧದ ಉದ್ಘಾಟನೆಯಾದ ನಂತರ ಅವರ ತಲೆಗೆ ಬಂದ ದುರಾಲೋಚನೆ ಇದು, ಅವರ ಹೇಳಿಕೆ ರಾಜ್ಯವ್ಯಾಪ್ತಿಯಾಗಿ ಖಂಡನೆಗೆ ಗುರಿಯಾಗಿದ್ದರೂ ಅವರು ತಮ್ಮ ನಿಲುಮೆಯನ್ನು ಸಮರ್ಥಿಸುತ್ತಿದ್ದಾರೆ. ಜೊತೆಯಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದವರ ಕುಟುಂಬದಿಂದ ಬಂದವರು ತಾವೆಂದು ಹೇಳುತ್ತಾರೆ. ಅವರು ಕರ್ನಾಟಕದ ಏಕೀಕರಣಕ್ಕಾಗಿ ದುಡಿದವರ ಕುಟುಂಬದಿಂದ ಬಂದವರು ಎನ್ನುವ ಕಾರಣಕ್ಕಾಗಿ ಕರ್ನಾಟಕವನ್ನು ಮತ್ತೆ ಒಡೆಯುವ ಅಧಿಕಾರ ತನಗಿದೆ ಎಂದು ತಿಳಿಯಬಾರದು. ಇಷ್ಟೊಂದು ತ್ಯಾಗ ಬಲಿದಾನದಿಂದ ಸಾಧಿಸಿದ್ದನ್ನು ನಾಶಮಾಡುವ ಕೆಟ್ಟ ವಿಚಾರ ಅವರಿಗೆ ಹೊಳೆದಿದ್ದರೆ, ಅದನ್ನು ಪ್ರಕಟಿಸುವ ಮೊದಲು ನೂರುಸಲ ಯೋಚನೆ ಮಾಡಬೇಕಾಗಿತ್ತು. 20/20ರ ವೇಳೆಗೆ ದೇಶದಲ್ಲಿ ಸಣ್ಣ ಸಣ್ಣ ರಾಜ್ಯಗಳು ನಿರ್ಮಾಣ ಆಗುತ್ತವೆ ಎಂದು ಡೋಂಗಿ ಜ್ಯೋತಿಷಿ ಹೇಳುವಂತೆ ಹೇಳಿದ್ದಾರೆ. ಇದು ಆರೆಸ್ಸೆಸ್ ಮೆದುಳಿನಿಂದ ಹೊರಬಂದಿರುವ ಯೋಚನೆಯಾಗಿದೆ " ಸಣ್ಣ ಪುಟ್ಟ ರಾಜ್ಯಗಳಾದರೆ ಅಭಿವೃದ್ಧಿಯಾಗುತ್ತದೆ ಎಂದರೆ ಅದು ಹುಚ್ಚುತನದ ಮಾತು" ಎಂದು ಪಾಟೀಲ್ ಪುಟ್ಟಪ್ಪನವರು ಸರಿಯಾಗಿಯೇ ಜಾಡಿಸಿದ್ದಾರೆ. ಹಾಗಾದರೆ, ಕರ್ನಾಟಕಕ್ಕೆ ಅಪಾಯ ಇರುವುದು ಕನ್ನಡಿಗರಿಂದಲ್ಲವೆ? ಕಾವೇರಿ ನೀರಿಗಾಗಿ ತಮಿಳುನಾಡಿನೊಂದಿಗೆ ತಮ್ಮ ಸಂಘರ್ಷ ಕೊನೆಗೊಳ್ಳುತ್ತಿಲ್ಲ. ನಾಳೆ ಕರ್ನಾಟಕ ಮೂರು ಭಾಗಗಳಾಗಿ ಒಡೆದರೆ ನದಿ ನೀರಿನಂತಹ ವಿಷಯ ನಾವು ಕನ್ನಡಿಗರೇ ಪರಸ್ಪರ ಪ್ರತಿದಿನ ಹೊಡೆದಾಡುವ ಪರಿಸ್ಥಿತಿ ನಿರ್ಮಾಣ ಆಗಲಿಕ್ಕಿಲ್ಲವೆ?

ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವ ಕರ್ನಾಟಕದ ಬಿಜೆಪಿ ಸರ್ಕಾರ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿಕೊಂಡು 12,740 ಶಾಲೆಗಳನ್ನು ಮುಚ್ಚಲು ಮುಂದಾಗಿದೆ ಇಂತಹ ಸರ್ಕಾರದಿಂದ ನಮ್ಮ ನಾಡು ನುಡಿಯ ರಕ್ಷಣೆ ಸಾಧ್ಯವೆ? ಬಿಜೆಪಿಯ ಒಬ್ಬ ಮಂತ್ರಿ ಕರ್ನಾಟಕವನ್ನು ಒಡೆಯುವ ಮಾತು ಮಾತನಾಡುತ್ತಾನೆ. ಮತ್ತೊಬ್ಬ ಮಂತ್ರಿ ಶಾಲೆಗಳನ್ನು ಮುಚ್ಚುವ/ವಿಲೀನಗೊಳಿಸುವ ಪ್ರಸ್ತಾವವನ್ನು (ಪ್ರೊ, ಗೋವಿಂದ ಸಮಿತಿ ವರದಿ ಆಧಾರದಲ್ಲಿ) ಸಮರ್ಥಿಸುತ್ತಾನೆ. ಆದ್ದರಿಂದ ಏಕೀಕೃತಗೊಂಡ ಕನ್ನಡ ನಾಡಿಗೆ ಆಪತ್ತು ಇರುವುದು ಕನ್ನಡಿಗರಿಂದಲೇ ಹೊರತು ಮರಾಠಿಗರಿಂದಲ್ಲ; ತಮಿಳರಿಂದಲ್ಲ, ತೆಲುಗುನವರಿಂದಲ್ಲ.

ರೈತರ ಭೂಮಿ ಬಂಡವಾಳಿಗರ ಬಾಯಿಗೆ

ಪುಟ 5 ರಿಂದ

ವ್ಯವಸ್ಥೆಯನ್ನು ನಾಶಪಡಿಸಿ ಕಾಳ ಸಂತೆಯಲ್ಲಿ ನಿರಂತರವಾಗಿ ಬೆಲೆ ಏರಿಕೆ ಮಾಡಿ ಲೂಟಿ ಮಾಡುವ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಆಹಾರ ಧಾನ್ಯ ಪಡೆಯುವ ಗ್ರಾಹಕ ಮಾರುಕಟ್ಟೆಯನ್ನು ಒದಗಿಸಿಕೊಡಲಾಗುತ್ತಿದೆ. ಅದಕ್ಕಾಗಿಯೆ ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಬಂಡವಾಳ ತೊಡಗಿಸಲು ಕ್ರಮ ವಹಿಸಲಾಗಿದ್ದರೆ, ಇನ್ನೊಂದೆಡೆ ರೈತರನ್ನು ಕೊಳ್ಳೆ ಹೊಡೆಯಲು ಮುಂಗಡ ವ್ಯಾಪರದಲ್ಲಿ ತೊಡಗಲು ದೈತ್ಯ ಕಂಪನಿಗಳಿಗೆ ಅವಕಾಶ ನೀಡಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರ ಈಗಾಗಲೇ ಕೃಷಿಯಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶವೂ ಸೇರಿದಂತೆ ಮೂರು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ನಡೆಸಿದೆ. 3 ಲಕ್ಷ ಕೋಟಿಗೂ ಅಧಿಕ ಮೊತ್ತದ ಬಂಡವಾಳವನ್ನು ಸಾರ್ವಜನಿಕ ಬ್ಯಾಂಕ್ ಮೂಲಕ 5 ವರ್ಷಗಳ ಕಾಲ ಬಡ್ಡಿರಹಿತ ಸಾಲ ಒದಗಿಸುವುದಾಗಿ ಘೋಷಿಸಿದೆ ಶೇ.1 ರಷ್ಟು ವಾರ್ಷಿಕ ಬಡ್ಡಿದರವೆಂದರೆ 15,000 ಕೋಟಿಯಷ್ಟು ಬಡ್ಡಿ ರಿಯಾಯಿತಿ ಕೊಡಲಾಗಿದೆ. ಹತ್ತಾರು ವರ್ಷಗಳ ತೆರಿಗೆ ವಿನಾಯಿತಿಯನ್ನು ಪ್ರತಿ ದಿನ ಹತ್ತಾರು ಕೋಟಿ ನೀಡುವ ನೂರಾರು ಎಕರೆ ಪ್ರದೇಶದ ಗಣಿಗಳನ್ನು ಪುಕ್ಕಟೆಯಾಗಿ ಒದಗಿಸುವ ಭರವಸೆಯನ್ನೂ ನೀಡಿವೆ. ಅದೇ ರೀತಿ ರಾಜ್ಯದಾದ್ಯಂತ ಇರುವ ಕೋಟ್ಯಾಂತರ ಎಕರೆ ಸರ್ಕಾರಿ ಜಮೀನನ್ನು ಭೂ ಬ್ಯಾಂಕ್‌ನಲ್ಲಿ ಕ್ರೋಢೀಕರಿಸಿ ಅಲ್ಲಿ ಸಾಗು ನಿರತ ಬಡರೈತ-ಕೂಲಿಕಾರರ-ದಲಿತರನ್ನು ಬಲವಂತವಾಗಿ ಒಕ್ಕಲೆಬ್ಬಿಸಿ ಈ ಕಂಪನಿಗಳಿಗೆ ಪ್ರತಿ ಎಕರೆಗೆ ಕೇವಲ ಒಂದು ರೂ ಅಥವಾ ಎರಡು ರೂಪಾಯಿ ದರದಲ್ಲಿ 99 ವರ್ಷಗಳ ಕಾಲ ಗುತ್ತಿಗೆ ನೀಡಲು ಹುನ್ನಾರ ನಡೆಸಿದೆ. ಈಗಾಗಲೇ ಹಲವು ಸಾವಿರ ಎಕರೆ ಸರ್ಕಾರಿ ಜಮೀನನ್ನು ನೈಸ್ ಕಂಪನಿಯು ಎಸ್.ಎಂ. ಕೃಷ್ಣ ಸರ್ಕಾರದಿಂದ ಪ್ರತಿ ಎಕರೆಗೆ 2ರೂ ಗುತ್ತಿಗೆಯಂತೆ 99ವರ್ಷಗಳ ಕಾಲ ಪಡೆದಿರುವುದನ್ನು ಇಲ್ಲಿ ನೆನೆಯಬಹುದು. ಈಗಾಗಲೇ ಪರಂಪರೆಯಿಂದ ರೈತರು ಬಳಸುತ್ತಾ ಬಂದಿರುವ ಬೀಜಗಳನ್ನು ಮುಂದೆ ಬಳಸಲು ಸಾಧ್ಯವಾಗದಂತೆ ಬೀಜ ಕಾಯ್ದೆಗೆ ತಿದ್ದುಪಡಿ ಮಾಡಲಾಗುತ್ತದೆ. ಸಾವಿರಾರು ವರ್ಷಗಳಿಂದ ಬೀಜವನ್ನೂ ರಕ್ಷಿಸಿ ಬಳಸುವ ಅಭಿವೃದ್ಧಿ ಪಡಿಸುವ ಅವರ ಬೀಜ ಸ್ವಾತಂತ್ರಕ್ಕೆ ಧಕ್ಕೆ ತರಲಾಗುತ್ತಿದೆ. ಲಕ್ಷಾಂತರ ಎಕರೆ ಜಮೀನನ್ನೂ ಕಂಪನಿ ಕೃಷಿ-ಗುತ್ತಿಗೆ ಕೃಷಿ-ಮುಂಗಡ ವ್ಯಾಪಾರದ ಕೃಷಿಯಲ್ಲಿ ತೊಡಗಿಸಿಕೊಳ್ಳುವ ಮಾನ್‌ಸಾಂಟೋ, ಕಾರ್ಗಿಲ್-ಮುಂತಾದ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಕೆಲವೇ ವರ್ಷಗಳಲ್ಲಿ ಆಧುನಿಕ ಬೀಜ-ರಾಸಾಯನಿಕ-ಗೊಬ್ಬರ-ಕ್ರಿಮಿನಾಶಕಗಳ ಮಾರುಕಟ್ಟೆಯನ್ನು ಅದೇ ರೀತಿ ಪೂರ್ಣವಾಗಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲಿವೆ. ಕಂಪನಿ ಕೃಷಿ, ಗುತ್ತಿಗೆ ಕೃಷಿ-ಮುಂಗಡ ವ್ಯಾಪಾರದ ಕೃಷಿಯ ಆಧಾರದಲ್ಲಿ ಲಕ್ಷಾಂತರ ಎಕರೆ ಪ್ರದೇಶದಲ್ಲಿ ಆವರಿಸಿಕೊಳ್ಳುವ ಈ ದೈತ್ಯ ಕಂಪನಿಗಳು ನೀರಾವರಿಯ ಬಹುತೇಕ ಪ್ರದೇಶವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲಿವೆ. ಜಲಾಶಯಗಳು ತಮ್ಮ ಸುಪರ್ದಿಗೆ ತೆಗೆದುಕೊಳ್ಳಲಿವೆ. ರೈತರೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಉದ್ದೇಶ ಪೂರ್ವಕವಾಗಿಯೇ ಮುರಿಯಲಿವೆ.

ಬೆಳೆಯ ಗುಣಮಟ್ಟದ ಕುರಿತು ತಕರಾರು ತೆಗೆದು ರೈತರಿಗೆ ನೀಡುವ ಒಪ್ಪಂದದ ಬೆಲೆಗಳನ್ನು ಮುರಿದು ರೈತರನ್ನು ತೊಂದರೆಗೀಡು ಮಾಡಿದುದು ನಮ್ಮೆಲ್ಲಾ ಜಿಲ್ಲೆಗಳ ರೈತರ ಅನುಭವದಲ್ಲಿದೆ. ಈ ಕಂಪನಿಗಳಿಂದ ನೊಂದ ರೈತರು ತಮಗಾದ ಅನ್ಯಾಯವನ್ನು ಅತ್ತ ಕೋರ್ಟುಗಳ ಸರಮಾಲೆಯಲ್ಲಿ ಪ್ರಶ್ನಿಸಲು ಆಗದೇ, ಸ್ವತಂತ್ರವಾಗಿ ವ್ಯವಸಾಯದಲ್ಲಿ ತೊಡಗಲು ಬೇಕಾದ ಬೀಜ-ರಸಗೊಬ್ಬರ-ಕ್ರಿಮಿನಾಶಕ-ನೀರು-ಸಾಲ ದೊರೆಯದೇ ಇತ್ತ ಬೇಸಾಯ ಮಾಡಲು ಆಗದೇ ಅತ್ತ ಕಂಪನಿಗಳನ್ನು ಎದುರಿಸಲು ಆಗದೇ ಸಾಲಬಾಧಿತವಾಗಿ ವ್ಯಾಪಕವಾಗಿ ಆತ್ಮಹತ್ಯೆಗೆ ಇಳಿಯುವ ಒತ್ತಡವನ್ನು ಅನುಭವಿಸುತ್ತಾನೆ. ಇಂತಹದೊಂದು ತೀವ್ರ ಮಾನಸಿಕ-ದೈಹಿಕ ಒತ್ತಡವನ್ನು ಹೇರಿ ಕೃಷಿಯಿಂದ, ತಲೆ-ತಲಾಂತರದಿಂದ ಬೇಸಾಯದಲ್ಲಿ ತೊಡಗಿರುವ ಸಣ್ಣ-ಮಧ್ಯಮ-ಹಿಡುವಳಿದಾರರನ್ನು ಈಗಾಗಲೇ ಅತ್ಯಂತ ಬಿಕಟ್ಟಿನಲ್ಲಿರುವ, ಸಂಕಷ್ಟದಲ್ಲಿರುವ ರೈತನ ಗಾಯದ ಮೇಲೆ ಬರೆ ಎಳೆದು, ಬಾಣಲೆಯಿಂದ ಬೆಂಕಿಗೆ ದೂಡುವುದೇ ಅಲ್ಲದೇ ಬೇಸಾಯದಿಂದ ಓಡಿಸುವುದೇ ಕೇಂದ್ರದ ಕಾಂಗ್ರೆಸ್ ಸರ್ಕಾರದ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ಕುತಂತ್ರವಾಗಿದೆ.

ಈಗಾಗಲೇ ರಾಜ್ಯ ಬಿಜೆಪಿ ಸರ್ಕಾರ ತನ್ನ 'ದೂರದೃಷ್ಟಿ-2020' ರ ಯೋಜನೆಯಂತೆ ಕೃಷಿಯಲ್ಲಿ ತೊಡಗಿರುವ ಶೇ. 61 ಜನರನ್ನು ಶೇ. 30-35 ಕ್ಕೆ ಇಳಿಸುವುದಾಗಿ ಸ್ಪಷ್ಟಪಡಿಸಿ ಬೇಸಾಯದಲ್ಲಿ ತೊಡಗಿರುವ ಜನರನ್ನು ಅಂದರೇ 72 ಲಕ್ಷ ಹಿಡುವಳಿದಾರರಲ್ಲಿ 30 ಲಕ್ಷ ಹಿಡುವಳಿದಾರರನ್ನು ಹಾಗೂ 65 ಲಕ್ಷ ಕೂಲಿಕಾರರಲ್ಲಿ 35 ಲಕ್ಷದಷ್ಟು ಕೂಲಿಕಾರ ರನ್ನು ಭೂಮಿ ಮತ್ತು ಬೇಸಾಯದಿಂದ ಬಲವಂತವಾಗಿ ಹೊರದೂಡುವ ಯೋಜನೆಯನ್ನು ತೆರೆದಿಟ್ಟಿದೆ! .

ಪರಿಣಾಮವಾಗಿ;

ವ್ಯವಸಾಯವನ್ನೇ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ವಹಿಸಲು ಮುಂದಾಗುವಾಗ, 50 ಲಕ್ಷಕ್ಕೂ ಅಧಿಕ-ಬಡರೈತಕೂಲಿಕಾರರು ಸಾಗುವಳಿ ಮಾಡುತ್ತಿರುವ ಸರ್ಕಾರಿ ಹಾಗೂ ಅರಣ್ಯ ಭೂಮಿ ಹಕ್ಕು ಪತ್ರ ನೀಡಲು ಸ್ವಾಭಾವಿಕವಾಗಿಯೇ ಇವರಿಗೆ ಮನಸ್ಸಿಲ್ಲವಾಗಿದೆ. ಮತ್ತು ಅವರ ನವಉದಾರೀಕರಣದ ನೀತಿಗೆ ವಿರುದ್ಧವಾಗಿದೆ.

ಸರ್ಕಾರದ ನೀತಿಗಳು ತಮಗೆ ಪೂರಕವಾಗಿಲ್ಲವೆಂದು, ಅವುಗಳನ್ನೇ ನಂಬಿಕೂತರೇ ಜೀವನ ನಿರ್ವಹಣೆ ಮತ್ತಷ್ಟು ಕಣ್ಣೀರುಮಯವಾಗಲಿದೆಯೆಂದು ಭಾವಿಸಿದ ದಲಿತರು, ಕೂಲಿಕಾರ ಬಡರೈತರು ತಮ್ಮ ತಮ್ಮ ಪ್ರದೇಶದ ಗುಡ್ಡಗಳ ಬದಿಯ, ಹಳ್ಳ-ನದಿಗಳ ಬದಿಯ ಬಯಲು, ಬೀಳಾಗಿದ್ದ ಹುಲ್ಲುಬನ್ನಿ ಮತ್ತಿತ್ತರೇ ಸರ್ಕಾರಿ ಜಮೀನು ಮತ್ತು ಅರಣ್ಯ ಭೂಮಿಯನ್ನು ಇಡೀ ಕುಟುಂಬದ ಶ್ರಮಹಾಕಿ ಅಭಿವೃದ್ಧಿ ಪಡಿಸಿ ಸಾಗುವಳಿಗೆ ಯೋಗ್ಯಗೊಳಿಸಿದ್ದಾರೆ. ಈ ರೀತಿ ಸರ್ಕಾರದ ಯಾವುದೇ ಸಹಾಯವಿಲ್ಲದೇ ಕೋಟ್ಯಾಂತರ ಎಕರೆ ಜಮೀನನ್ನು ಅಭಿವೃದ್ಧಿ ಪಡಿಸಿದ್ದಾರೆ. ಈ ಹಂತದಲ್ಲಿ ಸರ್ಕಾರ ಇನ್ನಷ್ಟು ಅಭಿವೃದ್ಧಿ ಪಡಿಸಲು ಸಹಾಯ ಹಸ್ತ ನೀಡಿ ಬೆಂಬಲಿಸಬೇಕಾಗಿತ್ತು! ಅವರು ಅಭಿವೃದ್ಧಿ ಪಡಿಸಿದ ಕೆಲಸವನ್ನು ಶ್ಲಾಘನೆ ಮಾಡಿ ಬೆನ್ನು ಚಪ್ಪರಿಸಬೇಕಿತ್ತು.

ಆದರೆ ನವ ಉದಾರೀಕರಣದ ನೀತಿಯ ಭಾಗವಾಗಿ ಅಭಿವೃದ್ಧಿ ಪಡಿಸಿದ ಈ ಜ... ವಿಭಾಗಗಳಿಗೆ ತಹಸಿಲ್ದಾರರ ಮೂಲ... ನೋಟೀಸ್ ನೀಡಿ ಒಕ್ಕಲೆಬ್ಬಿಸಿ, ಆ ಜಮೀನನ್ನು ಭೂ ಬ್ಯಾಂಕ್‌ಗೆ ಪಡೆಯಲು ರಾಜ್ಯ ಸರ್ಕಾ... ಮುಂದಾಗುತ್ತಿದೆ. ಸುಮಾರು 4.5 ಲ... ಬಗರ್‌ಹುಕುಂ, ಸರ್ಕಾರಿ ಹಾಗೂ ಹೈರಾಣ... ಭೂಮಿಗಾಗಿ 1985 ರ ನಂತರ ಹಾಕಲಾದ ಅರ್ಜಿಗಳನ್ನು, ಅರ್ಜಿ ಹಾಕಿ 25 ವರ್ಷಗ... ನಂತರವೂ ವಿಲೇ ಮಾಡದೇ ಹಾಗೇಯೆ... ಪೆಂಡಿಂಗ್ ಇಡಲಾಗಿದೆ. 12 ಲಕ್ಷದಷ್ಟು ಅರ್ಜಿಗಳನ್ನು, ಸಾಗುವಳಿ ಮಾಡುತ್ತಿರುವ ಜಮೀನು ಪಹಣಿಗಳಲ್ಲಿ ಹಳ್ಳಾ, ಕೆರೆ, ಹುಲ್ಲುಬನ್ನಿ ಗೋಮಾಳ, ಈಚಲು ವನ, ಅಮೃತ ಮಹಲ್ ಎಂದಿರುವುದರಿಂದ ಭ್ರಷ್ಟತೆ ಮತ್ತು ರಾಜಕೀಯ ಕಾರಣಗಳಿಂದ ಬಹುತೇಕ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಆದರೇ ವಾಸ್ತವದಲ್ಲಿ ಆ ಜಮೀನುಗಳಲ್ಲಿ ಈಗ ಹಳ್ಳಾ ಇರುವುದಿಲ್ಲ ಕೆರೆಯೂ ಇರುವುದಿಲ್ಲ, ಅದೇ ರೀತಿ ಈಚಲು ವನ ಮತ್ತಿತರೇ ಏನು ಇಲ್ಲ? ಇರುವುದೊಂದು ಅಭಿವೃದ್ಧಿ ಪಡಿಸಲಾದ ಜಮೀನು. ಇದನ್ನು ವಾಸ್ತವಿಕವಾಗಿ ಸರ್ವೇ ಮಾಡಿ ಪಹಣಿ ಪತ್ರಿಕೆಗಳನ್ನು ತಿದ್ದುಪಡಿ ಮಾಡಬೇಕಾಗಿದೆ 'ಕಂದಾಯ ಜಮೀನುಗಳನ್ನು ಅರಣ್ಯ ಇಲಾಖೆ... ವರ್ಗಾವಣೆ ಮಾಡಲಾದ ಪ್ರಕರಣಗಳು ಇಲ್ಲಿವೆ...

ಓಬೀರಾಯನ ಕಾಲದ ಪಹಣಿಗಳನ್ನೇ ಆಧರಿಸಿ ರೈತರನ್ನೂ ವಂಚಿಸುವುದನ್ನು ಬಿಡಬೇಕು. ವಾಸ್ತವಿಕ ಸರ್ವೇ ನಡೆಸಿ ಪಹಣಿ ಪತ್ರಿಕೆಗಳಲ್ಲಿನ ಅಂಶಗಳನ್ನು ಸಮಕಾಲೀನಗೊಳಿಸಬೇಕಾಗಿದೆ. ಮತ್ತು ಇತರೆ ಕೆಲ ಸಮಸ್ಯೆಗಳಿಗೆ ಭೂಕಂದಾಯ ಕಾಯ್ದೆಗೆ ಮತ್ತಿತರೇ ಅರಣ್ಯ ಕಾಯ್ದೆಗೆ ಸೂಕ್ತ ತಿದ್ದುಪಡಿಗಳನ್ನು ಮಾಡಬೇಕಾಗಿದೆ.

ಆದರೆ ಸರ್ಕಾರ ಈ ದಿಕ್ಕಿನಲ್ಲಿ ದಲಿತರ-ಬಡರೈತ-ಕೂಲಿಕಾರರ ಪರ ನಿಲ್ಲದೆ ಬಹುರಾಷ್ಟ್ರೀಯ ಸಂಸ್ಥೆಗಳ ಕೃಷಿಗೆ ಅವಕಾಶ ನೀಡುತ್ತಿರುವುದರಿಂದ, ಕೃಷಿಯನ್ನೂ-ರೈತ-ಕೂಲಿಕಾರರನ್ನು ಸಂರಕ್ಷಿಸುವುದು? ಉಳುವವನಿಗೆ ಸರ್ಕಾರಿ ಜಮೀನಿಗೆ ಹಕ್ಕು ಪತ್ರ ನೀಡಬೇಕೆಂದು ಬಲವಾಗಿ ಹೋರಾಟ ನಡೆಸುವ ಅಗತ್ಯ ಬಂದಿದೆ. ಈ ಹಿನ್ನೆಲೆಯಲ್ಲಿ ನವೆಂಬರ್-0... ರ ಹೋರಾಟ ಚಾರಿತ್ರಿಕ ಮಹತ್ವ ಉಳ್ಳದ್ದಾಗಿದ್ದು ಎಲ್ಲರೂ ಬೆಂಬಲಿಸಿ ಯಶಸ್ವಿಗೊಳಿಸಬೇಕಾಗಿದೆ.

ಮಹಿಳಾ ದೌರ್ಜನ್ಯ ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆಗಳು


ಪುಟ 2 ರಿಂದ

ಜಿಲ್ಲಾಧಿಕಾರಿ ಕಛೇರಿ ಎದುರು ಸಿಪಿಐಎಂನ ಕಾರ್ಯಕರ್ತರು ಮಹಿಳೆಯರ ಮೇಲಿನ ದೌರ್ಜನ್ಯವನ್ನು ವಿರೋಧಿಸಿ ಪ್ರತಿಭಟನಾ ಧರಣಿಯನ್ನು ನಡೆಸಿದರು. ಇದೇ ಸಂದರ್ಭದಲ್ಲಿ ಪ್ರತಿಭಟನಾ ಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಪಿಎಂನ ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾದ ಧರ್ಮೇಶರವರು ಮಾತನಾಡಿದರು. ಎಡಪಕ್ಷಗಳು ಮತ್ತು ಪ್ರಗತಿಪರ ಮಹಿಳಾ ಸಂಘಟನೆಗಳ ಹೋರಾಟಗಳಿಂದ ಹಲವು ಮಹಿಳಾ ಪರ ಕಾನೂನುಗಳು ಬಂದಿದ್ದರೂ, ಅವು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಮಹಿಳೆಯರ ಬಹುಮುಖಿ ಸಮಸ್ಯೆಗಳಿಗೆ ಬಹುಮುಖೀಯ ಪರಿಹಾರಗಳ ಅಗತ್ಯವಿದೆ. ಇದಕ್ಕೆ ಸರಕಾರ ಹೆಚ್ಚು ಬಜೆಟನ್ನು ಮೀಸಲಿಟ್ಟು ಅದಕ್ಕೆ ಬೇಕಾದಂತಹ ಪರಿಕರಗಳನ್ನು ಒದಗಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಸಿಪಿಐಎಂನ ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾದ ಎಚ್.ಆರ್.ನವೀನ್‌ಕುಮಾರ್ ಮತ್ತು ಜಿ.ಪಿ.ಸತ್ಯನಾರಾಯಣ ಭಾಗವಹಿಸಿದ್ದರು

ಬೆಳಗಾವಿ: ನಿಕೃಷ್ಟ ವೇತನದ ಶೋಷಣೆ ವಿರುದ್ಧ ಸ್ಟಾಫ್‌ನರ್ಸ್‌ಗಳ ದಿಟ್ಟ ಹೋರಾಟ

'ನರ್ಸ್' ಎಂಬ ಒಂದು ಶಬ್ದವೇ ಜನರ ಮನಸ್ಸಿನಲ್ಲಿ ಒಂದು ಬಗೆಯ ಗೌರವ ಭಾವನೆ ಮೂಡಿಸುವಂಥದ್ದು. ನಾನಾ ಬಗೆಯ ಕಾಯಿಲೆಯಿಂದ ನರಳುವ ರೋಗಿಗಳಿಗೆ ಅವರ ಖಾಯಿಲೆಗಳನ್ನು ಅರಿತುಕೊಂಡು ಅವರ ನೋವುಗಳನ್ನು ತಿಳಿದುಕೊಂಡು ಚಿಕಿತ್ಸೆ ನೀಡುವ ಕೆಲಸ ಅಷ್ಟು ಸುಲಭದ್ದೇನಲ್ಲ. ನರ್ಸ್‌ಗಳು ರೋಗಿಗಳ ರೋಗ ಅರಿಯುವುದು ಮಾತ್ರವಲ್ಲ, ರೋಗಿಗಳ ಮತ್ತು ಅವರ ಸಂಬಂಧಿಕರ ಭಾವನೆ–ಆತಂಕಗಳಿಗೆ ತಕ್ಕಂತೆ ಸಹ ಅವರು ಸ್ಪಂದಿಸಿ ಕೆಲಸ ಮಾಡ ಬೇಕಾಗುತ್ತದೆ. ಇದು 'ನರ್ಸ್' ಎಂಬ ವೃತ್ತಿಗೆ ಅಗತ್ಯವಾದ ಅರ್ಪಣಾ ಮನೋಭಾವ ಮತ್ತು ಮಾನವೀಯ ಮೌಲ್ಯ ಸಹ.



ಆದರೆ ವೈದ್ಯಕೀಯ ರಂಗ ವ್ಯಾಪಾರೀಕರಣಗೊಂಡಿರುವ ನಮ್ಮ ಇಂದಿನ ಸಂದರ್ಭದಲ್ಲಿ ನರ್ಸ್‌ಗಳ ಮತ್ತು ವೈದ್ಯರ ಸೇವಾ ಮನೋಭಾವ ಹಾಗೂ ಶ್ರಮವನ್ನು 'ಖಾಸಗಿ ಆಸ್ಪತ್ರೆ', 'ನರ್ಸಿಂಗ್ ಹೋಂ' ಗಳೆನ್ನುವ 'ಆರೋಗ್ಯ ಮಾರುಕಟ್ಟೆ'ಯ ವ್ಯಾಪಾರಸ್ಥರು ತಮ್ಮ ಅಪರಿಮಿತ ಲಾಭ ದಾಹಕ್ಕೆ ಒಂದು ಸಾಧನವಾಗಿ ಬಳಸಿಕೊಳ್ಳುತ್ತಿದ್ದಾರೆ.

ಹಗಲು ರಾತ್ರಿ ಎನ್ನದೇ ರೋಗಿಗಳ ಸೇವೆ ಮಾಡುವವರು ಈ ನರ್ಸ್‌ಗಳು. ಬಹಳಷ್ಟು ಪ್ರಕರಣಗಳಲ್ಲಿ ರೋಗಿಗಳಿಗೆ ವೈದ್ಯರಿಗಿಂತಲೂ ಹೆಚ್ಚು ಹತ್ತಿರವಾಗಿರುವವರು ಈ ನರ್ಸ್‌ಗಳು. ಹಲವಾರು ಪ್ರಕರಣಗಳಲ್ಲಿ ವೈದ್ಯರು ದಿನಕ್ಕೆ ಒಂದೋ–ಎರಡೋ ಬಾರಿ ಭೇಟಿ ಕೊಟ್ಟು ಹೋಗುವವರು. ಆದರೆ ರೋಗಿಯ ನಿರಂತರ ಆರೈಕೆ ಮಾಡುವವರು ಈ ನರ್ಸ್‌ಗಳು.

ರೋಗಿಗಳ ಜೀವ ಉಳಿಸುವಲ್ಲಿ, ಅವರು ಚೇತರಿಸಿಕೊಳ್ಳುವಲ್ಲಿ ಅತ್ಯಂತ ಅಮೂಲ್ಯ ಪಾತ್ರ ವಹಿಸುವ ನರ್ಸ್‌ಗಳಿಗೂ ಒಂದು ಖಾಸಗಿ ಬದುಕಿದೆ. ಅವರೂ ಕೂಡ ಒಂದು ಗೌರವಪೂರ್ಣವಾದ ಬದುಕು ಬದುಕುವುದು ಸಾಧ್ಯವಾಗಬೇಕು.

ಆದರೆ ರಾಜ್ಯದ ಎಷ್ಟೋ ಖಾಸಗಿ ಆಸ್ಪತ್ರೆಗಳಲ್ಲಿ ಮತ್ತು ನರ್ಸಿಂಗ್ ಹೋಂಗಳಲ್ಲಿ ದುಡಿಯುತ್ತಿರುವ ನರ್ಸ್‌ಗಳ ಜೀವನ ಪರಿಸ್ಥಿತಿ ಹೊರ ಜಗತ್ತು ಅಂದುಕೊಂಡಷ್ಟು ಉತ್ತಮವಾಗಿಲ್ಲ. ಅವರ ಶುಭ್ರವಾದ ಬಿಳಿ ಉಡುಪಿನಂತೆ ಅವರ ಬದುಕು ಹೊಳೆಯುತ್ತಿಲ್ಲ. ಏಕೆಂದರೆ ಅವರ ಶ್ರಮಕ್ಕೆ ತಕ್ಕ ವೇತನ ಮತ್ತು ಸೇವಾ ಸೌಲಭ್ಯಗಳು, ಉದ್ಯೋಗ ಭದ್ರತೆ ಅವರಿಗೆ ದೊರೆಯುತಿಲ್ಲ. ಖಾಸಗಿ ಆಸ್ಪತ್ರೆಗಳ ಮಾಲೀಕರು ಅವರನ್ನು ಶೋಷಿಸುತ್ತಿದ್ದಾರೆ. ಒಂದು ಕಡೆ ರೋಗಿಗಳಿಂದ ದುಬಾರಿ ಶುಲ್ಕ ವಸೂಲಿ ಮಾಡುತ್ತಾ ಮತ್ತೊಂದೆಡೆ ತಮ್ಮದೇ ಆಸ್ಪತ್ರೆಯ ನರ್ಸ್‌ಗಳು, ಸಿಬ್ಬಂದಿಗೂ ಅನ್ಯಾಯವೆಸಗುತ್ತಾ ತಮ್ಮ ಖಾಸಗಿ ಖಜಾನೆ ತುಂಬಿಕೊಳ್ಳುತಿದ್ದಾರೆ.



ಈ ಮೇಲಿನ ಮಾತಿಗೆ ನಿಮಗೆ ಸಾಕ್ಷಿ ಬೇಕಾದರೆ ಇಗೋ ಬೆಳಗಾವಿಯಲ್ಲಿ ನಡೆಯುತ್ತಿರುವ ನರ್ಸ್‌ಗಳ ಹೋರಾಟವನ್ನು ನೋಡಿ.

ಡಾ. ಪ್ರಭಾಕರ ಕೋರೆ ಬಿಜೆಪಿ ಪಕ್ಷದಲ್ಲಿ ಉತ್ತರ ಕರ್ನಾಟಕದ ಒಬ್ಬ ಪ್ರಭಾವಿ ಮುಖಂಡರು. ಬೆಳಗಾಂನಲ್ಲಿ ಅವರ ಮಾಲೀಕತ್ವದ 'ಕೆಎಲ್‌ಇ ಎಸ್– ಡಾ. ಪ್ರಭಾಕರ ಕೋರೆಯವರ ಆಸ್ಪತ್ರೆ' ಎಂಬ ಬೃಹತ್ ಆಸ್ಪತ್ರೆ ಇದೆ. ಇಲ್ಲಿ ಸುಮಾರು 800 ಕ್ಕೂ ಹೆಚ್ಚು ನರ್ಸ್‌ಗಳು ದುಡಿಯುತ್ತಿದ್ದಾರೆ.

ಅವರು 'ದುಡಿ'ಯುತ್ತಿದ್ದಾರೆ. ಅವರ ಶ್ರಮದಿಂದ ಕೋರೆಯುವರು ಚೆನ್ನಾಗಿ 'ದುಡಿಮೆ' ಮಾಡಿಕೊಳ್ಳುತ್ತಿದ್ದಾರೆ. ನಿಕೃಷ್ಟ ವೇತನ ಪಡೆಯುತ್ತಿರುವ ಈ ನರ್ಸ್‌ಗಳು ಮಾತ್ರ ದುಬಾರಿ ಕಾಲದಲ್ಲಿ ಸರಿಯಾದ ಜೀವನ ನಿರ್ವಹಣೆ ಸಾಧ್ಯವಾಗದೇ ನರಳುತ್ತಿದ್ದಾರೆ. ನಾಲ್ಕು ವರ್ಷ ಸೇವಾ ಹಿರಿಮೆ ಹೊಂದಿದ ನರ್ಸ್‌ಗಳು ಈ ಸಂಸ್ಥೆಯಲ್ಲಿ ಗಳಿಸುತ್ತಿರುವ ಸಂಬಳ ತಿಂಗಳಿಗೆ 10,000 ರೂ. ಮಾತ್ರ. ತಮ್ಮ ವೇತನದ ಮೂಲಕ ಕುಟುಂಬವನ್ನು ಸಾಕಬೇಕಾದ ಈ ನೌಕರರ ಜೀವನ ಈ ದುಡಿಮೆಯಲ್ಲಿ ನಡೆಯುವುದು ಹೇಗೆ ?

ನೆರೆಯ ಧಾರಾವಾಡದ ಎಸ್‌ಡಿಎಂ ಆಸ್ಪತ್ರೆಯಲ್ಲಿ ಎರಡು ವರ್ಷ ಸೇವಾ ಹಿರಿತನ ಹೊಂದಿರುವ ನರ್ಸ್‌ಗಳ ವೇತನ ತಿಂಗಳಿಗೆ 14,000 ರೂ.ಗಳು. ಪ್ರಭಾಕರ ಕೋರೆಯವರ ಆಸ್ಪತ್ರೆ ನರ್ಸ್‌ಗಳ ಮೂಲ ವೇತನ ತಿಂಗಳಿಗೆ 2,980 ರೂಪಾಯಿಗಳು ಇದ್ದರೆ ಬೆಂಗಳೂರಿನ ರಾಮಯ್ಯ ಆಸ್ಪತ್ರೆಯಲ್ಲಿ ಮೂಲ ವೇತನ 8,770 ರೂ. ಇದೆ. ಎರಡು ವರ್ಷ ಕೆಲಸ ಮಾಡಿದ ನರ್ಸ್‌ಗಳಿಗೆ ಅಲ್ಲಿ ತಿಂಗಳ ವೇತನ 20,376 ರೂ ದೊರೆಯುತ್ತಿದೆ. ಬೆಂಗಳೂರು, ಧಾರಾವಾಡದ ಈ ಆಸ್ಪತ್ರೆಗಳಲ್ಲಿ ನರ್ಸ್‌ಗಳಿಗೆ ನ್ಯಾಯಯುತ ವೇತನ ದೊರೆಯುತ್ತಿದೆಯಾ ಎಂಬುದು ಬೇರೆ ಪ್ರಶ್ನೆ. ವಿವಿಧ ಆಸ್ಪತ್ರೆಗಳಿಗೆ ಹೋಲಿಸಿದರೆ ಕೋರೆಯವರ ಆಸ್ಪತ್ರೆಯಲ್ಲಿ ಎಷ್ಟೊಂದು ಅನ್ಯಾಯ ಮಾಡಲಾಗುತ್ತಿದೆ ಅಂತ ಇದರಿಂದ ಗೊತ್ತಾಗುತ್ತದೆ ಅಷ್ಟೆ.

ಹೋರಾಟದ ಹಾದಿಗೆ

ನ್ಯಾಯಕ್ಕಾಗಿ ಹೋರಾಟಕ್ಕೆ ಧುಮುಕಲೇ ಬೇಕಾದ ಪರಿಸ್ಥಿತಿಯಲ್ಲಿರುವ ಕೋರೆ ಆಸ್ಪತ್ರೆಯ ನರ್ಸ್‌ಗಳು ಈ ಅನ್ಯಾಯವನ್ನು ಸಹಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಈಗ ತಮ್ಮದೇ ಆದ ಸಂಘವನ್ನು ರಚಿಸಿಕೊಂಡು ಹೋರಾಟದ ಹಾದಿ ಹಿಡಿದಿದ್ದಾರೆ.

ಮೊದಲಿಗೆ 'ಇಂಡಿಯನ್ ನರ್ಸ್ ಅಸೋಷಿಯೇಷನ್' ಎಂಬ ಸಂಘಟನೆ ಮಾಡಿಕೊಂಡು ಚಟುವಟಿಕೆ ಆರಂಭಿಸಿದ ನೌಕರರು ಆಡಳಿತ ಮಂಡಳಿಗೆ ಹಲವು ಹಂತದಲ್ಲಿ 'ಮನವಿ' ನೀಡುವ ಪ್ರಯತ್ನ ನಡೆಸಿದರು. ಯಾವ 'ಮನವಿ'ಗೂ ಆಡಳಿತ ಮಂಡಳಿ ಬಗ್ಗುವುದಿಲ್ಲ ಎನ್ನುವುದು ನರ್ಸ್‌ಗಳ ಅನುಭವಕ್ಕೆ ಬಂತು.

ಆ ಮೇಲೆ ಅವರು ಸರಿಯಾದ ನಿರ್ಧಾರವನ್ನೇ ತೆಗೆದುಕೊಂಡರು. ಸಿಐಟಿಯು ನಾಯಕರನ್ನು ಸಂಪರ್ಕಿಸಿದ ಅವರು 'ಬೆಳಗಾವಿ ಕೆಎಲ್‌ಇ ಎಂಪ್ಲಾಯೀಸ್ ಯೂನಿಯನ್' ಎಂಬ ಸಂಘ ರಚಿಸಿಕೊಂಡು ಸಿಐಟಿಯು ಬಾವುಟದ ಅಡಿಯಲ್ಲಿ ದೃಢವಾದ ಹೋರಾಟಕ್ಕೆ ಮುಂದಾಗಿದ್ದಾರೆ.

'ವರ್ಗಾವಣೆ' ಎಂಬ ಶಿಕ್ಷೆ– ಬಗ್ಗದ ನರ್ಸ್‌ಗಳು

ಕರ್ನಾಟಕ ಲಿಂಗಾಯಿತ ಎಜುಕೇಶನ್ ಸೊಸೈಟಿ (ಕೆಎಲ್‌ಇಎಸ್) ಎಂಬುದು ರಾಜ್ಯಾದ್ಯಂತ ಸು. 400 ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಬೃಹತ್ ಸಂಸ್ಥೆ. ಅದರಲ್ಲಿ ವೃತ್ತಿಪರ ಶಿಕ್ಷಣ ಸಂಸ್ಥೆಗಳೂ ಸಾಕಷ್ಟು ಇವೆ ಎಂದ ಮೇಲೆ ಈ ಸಂಸ್ಥೆಯ ಬಲಾಬಲ ಏನೆಂದು ಅರ್ಥವಾಗಬಹುದು. ಇಂತಹ ದೊಡ್ಡ ಪ್ರಭಾವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಪ್ರಭಾಕರ ಕೋರೆಯವರ ಈ ನೌಕರ ವಿರೋಧಿ ದೌರ್ಜನ್ಯಕಾರಿ ಧೋರಣೆಯ ಮರ್ಮ ಪ್ರಗತಿಪರರಿಗಂತೂ ಚೆನ್ನಾಗಿ ಅರ್ಥವಾಗುವಂತದ್ದೆ.

ಮೊದಲಿಗೆ ಸಂಘ ರಚನೆಯಾದ ಕೂಡಲೇ ಮಾತುಕತೆಗೆ ಹೋಗಿದ್ದ ಸಂಘದ ಅಧ್ಯಕ್ಷೆ ಶ್ರೀಮತಿ ಸಾಯಿ ಪಾಟೀಲ್ ಸೇರಿದಂತೆ ಸುಮಾರು 8 ಜನ ಪ್ರಮುಖ ಪಧಾಧಿಕಾರಿಗಳನ್ನು ಬೆಂಗಳೂರು, ಅಂಕೋಲ ಮತ್ತಿತ್ತರೆ ಕಡೆ ವರ್ಗಾವಣೆ ಮಾಡಲಾಯಿತು. ಆದರೆ ನೌಕರರು ಇದರಿಂದ ವಿಚಲಿತರಾಗಲಿಲ್ಲ. ಆಡಳಿತ ಮಂಡಳಿಯ ಬೆದರಿಕೆ ತಂತ್ರಗಳಿಗೆ ತಲೆಬಾಗಲಿಲ್ಲ. ಎಲ್ಲರೂ ಒಗ್ಗಟ್ಟಿನಿಂದ ಹೋರಾಡಲು ತೀರ್ಮಾನಿಸಿದರು.

'ಸುವರ್ಣ ಸೌಧ' ನೆಪ

ಅಕ್ಟೋಬರ್ 8, 2012 ರಿಂದ ಧರಣಿ ಆರಂಭಿಸಲು ನಿರ್ಧರಿಸಲಾಗಿತ್ತು. ಆದರೆ ಕೋರೆಯವರ ಒತ್ತಡಕ್ಕೆ ಮಣಿದ ಪೋಲೀಸ್ ಅಧಿಕಾರಿಗಳು 'ಸುವರ್ಣ ಸೌಧ' ಉದ್ಘಾಟನೆಯ ನೆಪದಲ್ಲಿ ಧರಣಿ ನಡೆಸದಂತೆ ಸಾಕಷ್ಟು ಪ್ರಯತ್ನ ನಡೆಸಿದರು. ಆಡಳಿತ ಮಂಡಳಿಯೊಂದಿಗೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರಿಂದ ಹೋರಾಟವನ್ನು ಮುಂದೂಡಲಾಗಿತ್ತು.

ಆದರೆ 'ಸಂಘ ಬಿಟ್ಟು ಬನ್ನಿ' ಎನ್ನುವ ಬಿಟ್ಟಿ ಉಪದೇಶ ಬಿಟ್ಟರೆ 'ಸುವರ್ಣ ಸೌಧ'ದ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ರಾಜಕೀಯ ಪ್ರಜ್ಞೆಯೊಂದಿಗೆ ಜವಾಬ್ದಾರಿಯುತ ಚಳುವಳಿ ಕಟ್ಟಿ

ಕೆ. ಮಹಾಂತೇಶ

ಬೆಲೆ ಏರಿಕೆ, ಭ್ರಷ್ಟಾಚಾರ, ಕೋಮುವಾದ ವಿರೋಧಿಸಿ, ಕನಿಷ್ಟ ಕೂಲಿ ಮತ್ತು ಉದ್ಯೋಗ ಭದ್ರತೆಗೆ ಒತ್ತಾಯಿಸಿ ಕುಮಟಾದಲ್ಲಿ ನಡೆದ ಸಿಐಟಿಯು 7 ನೇ ಉತ್ತರ ಕನ್ನಡ ಜಿಲ್ಲಾ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯವಾಯಿತು. ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ ಸಮಾರೋಪ ಭಾಷಣ ಮಾಡುತ್ತ-ದೇಶ ಹಿಂದೆಂದೂ ಕಂಡರಿಯದ ಹಸಿವು ಮತ್ತು ಬಡತನದತ್ತ ನೂಕಲ್ಪಡುತ್ತಿದೆ. ಆಳುವ ವರ್ಗ ಸೃಷ್ಟಿಸಿದ ಸುಳ್ಳು-ತಪ್ಪು ಆರ್ಥಿಕ ನೀತಿಗಳು ಅಮೂಲ್ಯ ಸಂಪತ್ತನ್ನು ದೋಚಲು ದಾರಿಮಾಡಿಕೊಟ್ಟಿವೆ. ದೇಶವನ್ನು ಮತ್ತೊಮ್ಮೆ ವಿದೇಶಿ ಸಾಮ್ರಾಜ್ಯಶಾಹಿಗಳ ಕೈಗೆ ಒಪ್ಪಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗಿವೆ. ರಾಜ್ಯದ ಕೃಷಿಕರಿಗೆ ಹಾಗೂ ಕಾರ್ಮಿಕರಿಗೆ ಒಪ್ಪತ್ತಿನೂಟಕ್ಕೂ ತತ್ವಾರವಾಗಲಿದೆ. ಜೊತೆಗೆ ವಿಭಿನ್ನ ಸಂಸ್ಕೃತಿ, ಜಾತಿ, ಧರ್ಮ, ಭಾಷೆಗಳಿರುವ ದೇಶದ ವಿವಿಧತೆಯ ಮೇಲೆ ಧಾಳಿ ಮಾಡುವ ಮೂಲಕ ಕೆಲವು ರಾಜಕೀಯ ಶಕ್ತಿಗಳು ಆಡಳಿತ ಚುಕ್ಕಾಣಿ ಹಿಡಿಯಲು ಹಪಹಪಿಸುತ್ತಿವೆ. ದುಡಿಯುವ ವರ್ಗದ ರಾಜಕೀಯ ಪ್ರಜ್ಞೆಯೊಂದಿಗೆ ಜವಾಬ್ದಾರಿಯುತ ಚಳುವಳಿ ಕಟ್ಟುವುದು, ಆ ಮೂಲಕ ದುಡಿಯುವ ವರ್ಗದ ಮೇಲಾಗುತ್ತಿರುವ ಅಸಹನೀಯ ಧಾಳಿ ಹಿಮ್ಮೆಟ್ಟುವುದು ಪ್ರಸಕ್ತ ಸನ್ನಿವೇಶದಲ್ಲಿ ಕಾರ್ಮಿಕ ವರ್ಗದ ಮುಂದಿರುವ ಕರ್ತವ್ಯ ಎಂದರು.

ಹಿರಿಯ ರೈತ-ಕಾರ್ಮಿಕ ಮುಂದಾಳು, ಅರವತ್ತರ ದಶಕದಿಂದಲೂ ಕಾರ್ಮಿಕ ಚಳುವಳಿಯಲ್ಲಿ ತೊಡಗಿಸಿಕೊಂಡ ಟಿ.ಎಸ್. ನಾಯ್ಕ ಮಾತನಾಡುತ್ತ ಸ್ವಾತಂತ್ರ್ಯ ಪೂರ್ವದಿಂದಲೂ ರೈತ-ಕಾರ್ಮಿಕ ಚಳುವಳಿಗೆ ಉತ್ತರ ಕನ್ನಡ ಜಿಲ್ಲೆ ತನ್ನದೇ ಆದ ಕ್ರಾಂತಿಕಾರಿ ಕೊಡುಗೆ ನೀಡಿದೆ. ಇಂದು ಬೃಹದಾಕಾರವಾಗಿ ಬೆಳೆದು ಬರುತ್ತಿರುವ ಅಸಂಘಟಿತ ಕಾರ್ಮಿಕ ವಲಯಕ್ಕೆ ಸಂಘಟಿತ ವಲಯದ ಕಾರ್ಮಿಕರು ಎಲ್ಲಾ ರೀತಿಯ ಸಹಾಯ ಮಾಡಬೇಕು. ಕೆಂಬಾವುಟದ ಹೋರಾಟ ಮಾತ್ರವೇ ಮುಂದಿನ ದಾರಿ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿ-ಸಿಐಟಿಯು ಜನ್ಮ ತಳೆದದ್ದು ವರ್ಗ ಹೋರಾಟದ ಕುಲುಮೆಯಲ್ಲಿ ಎಂಬುದನ್ನು ಮರೆಯಬಾರದು. ಐಕ್ಯತೆ ಮತ್ತು ಸಂಘರ್ಷ ಕೇವಲ ಘೋಷಣೆಯಲ್ಲ. ಅನ್ಯಾಯ, ಶೋಷಣೆ ವಿರುದ್ಧ ದೇಶದಲ್ಲಿ ದಿನೇ ದಿನೇ ಅಸಮಾಧಾನ ಹೆಚ್ಚುತ್ತಿದೆ, ಚಳುವಳಿಯ ರೂಪ ಪಡೆಯುತ್ತಿದೆ. ನಾವು ಜವಾಬ್ದಾರಿಯುತ ಮುಂದಾಳುಗಳಾಗಿ ಇದನ್ನು ಕಾರ್ಮಿಕ ವರ್ಗದ ರಾಜಕೀಯ ಪ್ರಜ್ಞೆಯೊಂದಿಗೆ ವರ್ಗ ಹೋರಾಟದತ್ತ ಒಯ್ಯುವ ಸವಾಲನ್ನು ಸ್ವೀಕರಿಸಬೇಕಿದೆ. ಭವಿಷ್ಯ ನಮ್ಮದು. ನಾವೇ ನಿರ್ಮಿಸಿಕೊಳ್ಳೋಣ. ನಮ್ಮೆದುರು ವಿಶಾಲ ಜನಸಮೂಹವಿದೆ. ಬಡತನದ ಸಾಗರವೇ ಅಣಿನೆರೆದಿದೆ. ತೋಳುಗಳು ದುಡಿಮೆಗೆ ಕೈಚಾಚಿವೆ. ದುಡಿಯುವ ಮಹಿಳೆಯರ ಪಡೆಯೇ ಸನ್ನದ್ಧವಾಗುತ್ತಿದೆ. ಆದರೆ, ಇವರೆಲ್ಲರ ಶ್ರಮವನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುವ ಯಾವ ಯೋಜನೆಗಳೂ ಸರ್ಕಾರಗಳಿಗಿಲ್ಲ. ಈಗಾಗಲೇ ಬಳಸಿಕೊಳ್ಳುತ್ತಿರುವ ಶ್ರಮಕ್ಕೆ ನ್ಯಾಯಬದ್ಧ ಪ್ರತಿಫಲವಿಲ್ಲ. ಇದನ್ನು ಕಣ್ಣು-ಬಾಯಿ ಮುಚ್ಚಿ, ಕೈಕಟ್ಟಿ ಕುಳಿತು ನಿರಾಶೆಯಿಂದ ನೋಡುವ ಪ್ರವೃತ್ತಿಯು ಸಿಐಟಿಯು ಸಂಘಟನೆಯದಲ್ಲ. ದುಡಿಯುವ ಜನತೆಯ ಮತ್ತು ಕಾರ್ಮಿಕ ವರ್ಗದ ಹಿತಕಾಪಾಡಲು ಸಂಘಟಿತ ಚಳುವಳಿಯೊಂದೇ ದಾರಿ ಎಂದರು.

ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಹರೀಶ ನಾಯ್ಕ ಮಾತನಾಡಿ- ಜನಹಿತಕ್ಕೆ ಮುಂದಾಗದ ಈ ಸರ್ಕಾರಗಳಿಗೆ ಕಾರ್ಮಿಕರು ದುಡಿಯುವ ವರ್ಗದ ನೇತೃತ್ವದಲ್ಲಿ ಸಶಕ್ತ ರಾಜಕೀಯ ಪರ್ಯಾಯವನ್ನು ತೋರಿಸಲು ಸಾಧ್ಯವಾಗಬೇಕು. ಜಿಲ್ಲೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ವಸತಿಹೀನ, ಭೂರಹಿತ ಜನರು ಹಾಗೂ ಅರಣ್ಯ ಅತಿಕ್ರಮಣದಾರರು ಇನ್ನಿತರೇ ರೈತಾಪಿ ಜನತೆ ಸಂಕಷ್ಟದಲ್ಲಿದ್ದಾರೆ. ಕಾರ್ಮಿಕ ವರ್ಗ ರೈತಾಪಿ ವರ್ಗದ ಸಮಸ್ಯೆಯ ವಿರುದ್ಧ ನಡೆಯುವ ಚಳುವಳಿಯಲ್ಲಿ ಮುಂಚೂಣಿ ಯಲ್ಲಿರಬೇಕು ಎಂದರು.

ವೇದಿಕೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್, ಜಿಲ್ಲಾ ಉಪಾಧ್ಯಕ್ಷ ತಿಲಕ ಗೌಡ, ಸಿ.ಆರ್. ಶಾನಭಾಗ, ಎಸ್.ವಿ.ಸಾವಂತ್, ಉದಯ ನಾಯ್ಕ, ಮುತ್ತಾ ಪೂಜಾರಿ, ಸುಭಾಸ್ ಕೊಪ್ಪಿಕರ್, ಸವಿತಾ ತನ್ಮಡ್ಗಿ, ತಿಮ್ಮಪ್ಪ ಗೌಡ ಉಪಸ್ಥಿತರಿದ್ದರು. ಸಮ್ಮೇಳನದಲ್ಲಿ ಪೇಪರ್ ಮಿಲ್, ಹಂಚು, ಗ್ರಾಮ ಪಂಚಾಯ್ತಿ,



ಅಂಗನವಾಡಿ, ಆಶಾ, ಅಕ್ಷರದಾಸೋಹ, ಕಟ್ಟಡ, ಬಿಎಸ್.ಎನ್.ಎಲ್, ಆರೋಗ್ಯ ಇಲಾಖೆ ಮುಂತಾದೆಡೆ ದುಡಿಯುವ ಗುತ್ತಿಗೆ ಕಾರ್ಮಿಕರು, ಪೌರ ಕಾರ್ಮಿಕರು, ಔಷಧ ಮಾರಾಟ ಪ್ರತಿನಿಧಿಗಳು, ಅಂಗವಿಕಲರ ಪ್ರತಿನಿಧಿಗಳು, ಹಮಾಲಿ ಕಾರ್ಮಿಕರ ವಿಭಾಗಗಳಿಂದ ಪ್ರತಿನಿಧಿಗಳು ಹಾಜರಿದ್ದರು.

ಸಮ್ಮೇಳನ ಕೈಗೊಂಡ ಪ್ರಮುಖ ನಿರ್ಣಯಗಳು:

ಎಲ್ಲಾ ಕಾರ್ಮಿಕರಿಗೆ ಕನಿಷ್ಠ ಕೂಲಿ ಜಾರಿಯಾಗಬೇಕು, ಜಿಲ್ಲೆಯ ಎಲ್ಲಾ ಕಾರ್ಮಿಕರಿಗೆ ಈಎಸ್ಐ (ಕಾರ್ಮಿಕರ ರಾಜ್ಯ ವಿಮೆ) ಜಾರಿಯಾಗಬೇಕು, ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಗೆ ಕಡಿವಾಣ ಹಾಕಿ, ರೇಷನ್ ವ್ಯವಸ್ಥೆ ಬಲಪಡಿಸಬೇಕು, ಆಹಾರ ಭದ್ರತೆ ಸಿಗಬೇಕು, ಹಮಾಲಿ, ಕಟ್ಟಡ, ಇನ್ನಿತರೇ ಅಸಂಘಟಿತ ಕಾರ್ಮಿಕರಿಗೆ ಕಾನೂನು ಜಾರಿಯಾಗಬೇಕು, ಉದ್ಯೋಗ ಭದ್ರತೆ ಸಿಗಬೇಕು, ದಾಂಡೇಲಿ ಪೇಪರ್ ಮಿಲ್ ಕಾರ್ಖಾನೆಯಲ್ಲಿ ವಜಾ ಮಾಡಿದ 27ಜನ ಕಾರ್ಮಿಕರನ್ನು ಪುನಃ ಕೆಲಸಕ್ಕೆ ಸೇರಿಸಬೇಕು, ಆಶಾ ಕಾರ್ಯಕರ್ತೆಯರಿಗೆ ನಿರ್ಧಿಷ್ಟವಾಗಿ ಕೂಲಿ ನಿಗದಿ ಮಾಡಬೇಕು, ಗುತ್ತಿಗೆ ಪದ್ಧತಿಯ ನಿರ್ಮೂಲನೆ ಮಾಡಿ ಎಲ್ಲಾ ಕಾರ್ಮಿಕರನ್ನು ಖಾಯಂ ಮಾಡಬೇಕು. ಗ್ರಾಮ ಪಂಚಾಯ್ತಿ ನೌಕರರಿಗೆ ಕನಿಷ್ಟಕೂಲಿ ಆದೇಶ ಸಮರ್ಪಕವಾಗಿ ಜಾರಿ ಮಾಡಬೇಕು, ಅಕ್ಷರದಾಸೋಹ ನೌಕರರನ್ನು ಕೆಲಸದಿಂದ ಕೈಬಿಡುವ ಧೋರಣೆಗೆ ಹಾಗೂ ಕಿರುಕುಳ ನೀಡುವುದಕ್ಕೆ ಕಡಿವಾಣ ಹಾಕಬೇಕು, ಅಂಗನವಾಡಿ ನೌಕರರ ಮೇಲೆ ಸ್ಥಳೀಯವಾಗಿ ನಡೆಯುತ್ತಿರುವ ದೌರ್ಜನ್ಯಕ್ಕೆ ತಡೆಹಾಕಬೇಕು, ಇಲಾಖೆ ರಕ್ಷಣೆ ನೀಡಬೇಕು. ಜನವರಿಯಲ್ಲಿ ಶಿರಸಿಯಲ್ಲಿ ನಡೆಯುವ ಸಿಐಟಿಯು ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ಮುಂದಾಗುವುದು ಇತ್ಯಾದಿ ನಿರ್ಣಯಗಳನ್ನು ಸಮ್ಮೇಳನದಲ್ಲಿ ಕೈಗೊಳ್ಳಲಾಯಿತು. ದುಡಿಯುವ ವರ್ಗದ ನೇತಾರ ಕಾಮ್ರೇಡ್ ಎಂ.ಕೆ.ಪಂಧೆ ನಗರ, ಕಾಮ್ರೇಡ್ ದೀಪಾಂಕರ ಮುಖರ್ಜಿ ದ್ವಾರ, ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ದ್ವಾರ, ಕಾಮ್ರೇಡ್ ಶೇಷಗಿರಿ ಪಿಕಳೆ ಸಭಾಂಗಣ, ಕಾಮ್ರೇಡ್ ಆರ್.ಜಿ.ಸ್ಥಳೇಕರ್ ವೇದಿಕೆಯಲ್ಲಿ ಎರಡು ದಿನಗಳ ಕಾಲ ನಡೆದ ಸಮ್ಮೇಳನವು 'ಗೆಲುವು ನಮ್ಮದು' ಹಾಡು ಹಾಗೂ ಸ್ಪೂರ್ತಿದಾಯಕ ಘೋಷಣೆಯೊಂದಿಗೆ ಯಶಸ್ವಿಯಾಗಿ ಮುಕ್ತಾಯವಾಯಿತು.


ಸಮ್ಮೇಳನದಲ್ಲಿ ಆಯ್ಕೆಯಾದ ನೂತನ ಜಿಲ್ಲಾ ಸಮಿತಿ

ಸಿಐಟಿಯು ಜಿಲ್ಲಾ ಅಧ್ಯಕ್ಷರಾಗಿ ಹರೀಶ ನಾಯ್ಕ, ಪ್ರಧಾನ ಕಾರ್ಯದರ್ಶಿಯಾಗಿ ಯಮುನಾ ಗಾಂವ್ಕರ್, ಖಜಾಂಚಿಯಾಗಿ ಸುಭಾಸ್ ಕೊಪ್ಪಿಕರ್ ಪುನರಾಯ್ಕೆಯಾದರು. ಉಪಾಧ್ಯಕ್ಷರಾಗಿ ತಿಲಕ ಗೌಡ, ಸಿ.ಆರ್. ಶಾನಭಾಗ್, ಎಸ್.ವಿ.ಸಾವಂತ್, ಉದಯ ನಾಯ್ಕ, ಸವಿತಾ ತನ್ಮಡ್ಗಿ, ಎಚ್.ಬಿ.ನಾಯಕ, ಕಲ್ಪನಾ ನಾಯ್ಕ ಆಯ್ಕೆಯಾದರು. ಕಾರ್ಯದರ್ಶಿಗಳಾಗಿ ತಿಮ್ಮಪ್ಪ ಗೌಡ, ಮೋಹಿನಿ ನಮ್ಸೇಕರ್, ನಾಗಪ್ಪ ನಾಯ್ಕ, ಜಗದೀಶ ನಾಯ್ಕ, ಗಂಗಾ ನಾಯ್ಕ ಆಯ್ಕೆಯಾದರು. ಸಮಿತಿ ಸದಸ್ಯರಾಗಿ ಟಿ.ಎಸ್. ನಾಯ್ಕ, ಗಣಪತಿ ನಾಯ್ಕ, ರಾಜಾಸಾಬ್ ಕೆಸನೂರ್, ಸಲೀಂ ಸೈಯ್ಯದ್, ಝುಡ್. ದೇವರಾಜ್, ಪಿ.ಕೆ.ಪಾಟೀಲ್, ಡಿ.ಮೆಥ್ಯೂ, ಮಾಸ್ತಿ ನಾಯ್ಕ, ಮಂಜುನಾಥ ಗೌಡ, ಸುರೇಶ ನಾಯ್ಕ, ಶಾಲಿನಿ ಕಲ್ಮನೆ, ಕೆ. ಜೋಸ್ ಥಾಮಸ್, ಗೀತಾ ನಾಯ್ಕ, ಪ್ರಭಾವತಿ ಹೆಗಡೆ, ಸರಿತಾ ಪಾವ್ಲೆ, ಶಾಂತಿ ಶೇಟ್, ಧರ್ಮಾವತಿ ಗೌಡರ್, ಲೀಲಾವತಿ ಹೆಗಡೆ, ಸುಧಾ ಭಟ್, ಲಲಿತಾ ನಾಯ್ಕ, ಗೀತಾ ನಾಯ್ಕಭಟ್ಕಳ, ಭಾವನಾ ಹೊನ್ನಾವರ್, ಆರ್. ಎಂ. ಮುಲ್ಲಾ, ಠಕ್ಕಪ್ಪ ಗುರುಬಣ್ಣವರ್, ರಾಜು ಗೌಡ, ಪ್ರಶಾಂತ ಬಡಸ್ಕರ್, ಮೀನಾ ಗೌಡ, ವೆಂಕಟೇಶ ನಾಯ್ಕ, ಸದಾನಂದ ಗಾಂವ್ಕರ್ ಆಯ್ಕೆಯಾದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಿಎಜಿ-ರಿಲಯನ್ಸ್ ಸಭೆ ಮುಂದೂಡಿಕೆ, ರೈಲು ದರ ಏರಿಕೆಯ ಸೂಚನೆ

ಸಂಪುಟ ಪುನರ್‍ರಚನೆಯ ಮೊದಲ 'ಫಲ'ಗಳು



ವೇದರಾಜ ಎನ್.ಕೆ.


ಯುಪಿಎ-2 ಸರಕಾರದ ಪುನರ್‍ರಚನೆಯ ಹಿಂದಿರುವ ಪ್ರಧಾನ ಉದ್ದೇಶವೇನು ಎಂದು ಆಗಲೇ ಬಯಲಾಗುತ್ತಿದೆ. ಆರ್ಥಿಕದ ಇಂಜಿನ್ ಎಂದು ಹೇಳಲಾಗಿರುವ ರೈಲ್ವೇ ಇಲಾಖೆ ಬಹಳ ಕಾಲದ ನಂತರ ಮತ್ತೆ ಕಾಂಗ್ರೆಸ್ ಪಕ್ಷದ ಕೈಗಳಿಗೆ ಬಂದಿದೆ. ಅದೀಗ ನವ-ಉದಾರವಾದಿ ಧೋರಣೆಗಳಿಗೂ ಇಂಜಿನ್ ಆಗಲಿದೆಯಂತೆ. ಹೊಸ ರೈಲ್ವೆ ಮಂತ್ರಿಗಳು ರೈಲ್ವೇ ದರಗಳನ್ನು ಏರಿಸುವುದಕ್ಕಾಗಿಯೇ ಏರಿಸುವುದಿಲ್ಲ, ರೈಲ್ವೆ ವ್ಯವಸ್ಥೆ ಕುಸಿಯದಂತೆ ತಡೆಯಲು ಅಗತ್ಯವಾದರೆ 'ಆಮ್ ಆದ್ಮಿ'ಯ ಹಿತದೃಷ್ಟಿಯಿಂದ ಅದರ ಅಗತ್ಯದ ಬಗ್ಗೆ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ.

ಪ್ರಧಾನ ಮಂತ್ರಿಗಳು ಇದುವರೆಗೆ ಪ್ರತಿ ರೈಲ್ವೇ ಬಜೆಟನ್ನು [illegible]ವಾಗಿ ಬೆಂಬಲಿಸಿರುವುದರಿಂದ ರೈಲ್ವೆ ವ್ಯವಸ್ಥೆ, ಅದರ ಆರ್ಥಿಕ ಪರಿಸ್ಥಿತಿ ಕುಸಿಯುವ ಸಾಧ್ಯತೆ ಇರಲಿಕ್ಕಿಲ್ಲ, ಆದ್ದರಿಂದ ದರ ಏರಿಕೆಯ ಸಾಧ್ಯತೆಯೂ ಇಲ್ಲ ಎಂದು ಯಾರೂ ಭಾವಿಸಲು ಅವಕಾಶವಿಲ್ಲ. ಏಕೆಂದರೆ, ಕಳೆದ ಕೆಲವು ವರ್ಷಗಳಲ್ಲಿ ರೈಲ್ವೇಸೇವೆಗಳಿಗೆ ಭಾರೀ ಧಕ್ಕೆ ಬಂದಿದೆ, ದೂರುಗಳ ಸಂಖ್ಯೆ ಏರಿದೆ, ಅವನ್ನೆಲ್ಲ ಸರಿಪಡಿಸಬೇಕಾಗಿದೆ ಎಂದೂ ಹೊಸ ರೈಲ್ವೆ ಮಂತ್ರಿಗಳು ಹೇಳಿದ್ದಾರೆ. ಅಗ್ಗದ ಜನಪ್ರಿಯತೆಯನ್ನು ಜನತೆಯ ಹಿತಕ್ಕೆ ಧಕ್ಕೆಯಾಗುವವರೆಗೂ ಒಯ್ಯಬಾರದು ಎನ್ನುವಾಗ ಅವರು ಕಳೆದ ಒಂಭತ್ತು ವರ್ಷಗಳಿಂದ ಅವರ ಪಕ್ಷದ ನೇತೃತ್ವದ ಯುಪಿಎ ಸರಕಾರಗಳೇ ಇದ್ದದ್ದು ಎಂಬುದನ್ನು ಮರೆತಿದ್ದರೋ ಗೊತ್ತಿಲ್ಲ. ವಿಶ್ಲೇಷಕರು, 'ಕಟ್ಟುನಿಟ್ಟಾದ' ಕ್ರಮಗಳಿಗೆ ಅಂದರೆ ಜನರ ಮೇಲೆ ಇನ್ನಷ್ಟು ದಾಳಿಗಳಿಗೆ ಇದು ಪೀಠಿಕೆ ಎಂದು ಹೇಳುತ್ತಿದ್ದಾರೆ.

ಇತ್ತೀಚೆಗಷ್ಟೇ ಡೀಸೆಲ್ ಬೆಲೆಯೇರಿಕೆ, ಅಡುಗೆ ಅನಿಲ ಸಿಲಿಂಡರ್‌ಗಳ ಮೇಲೆ ಮಿತಿಯನ್ನು ಪ್ರಧಾನ ಮಂತ್ರಿಗಳು ಸಮರ್ಥಿಸಿಕೊಂಡ ರೀತಿಯನ್ನು ನೆನಪಿಸಿಕೊಂಡರಷ್ಟೇ ಸಾಕು. ಅದನ್ನೂ ಕೂಡ ಮಾಡಿರುವುದು 'ಆಮ್ ಆದ್ಮಿ'ಯ 'ಹಿತರಕ್ಷಣೆ'ಗೆಂದೇ ತಾನೇ?

ಈ ಪುನರ್‍ರಚನೆಯಲ್ಲಿ ಪೆಟ್ರೋಲಿಯಂ ಇಲಾಖೆಯಿಂದ ಜೈಪಾಲ್ ರೆಡ್ಡಿಯವರ ಎತ್ತಂಗಡಿ ಮಾಡಲಾಗಿದೆ ಎಂದು ಬಹಳಷ್ಟು ಟೀಕೆಗಳು ಬಂದಿವೆ. ನಮ್ಮ ರಾಜ್ಯದ ಕಾಂಗ್ರೆಸ್ ಮುಖಂಡರಾದ ಮೊಯಿಲಿಯವರು ಆ ಇಲಾಖೆಗೆ ಹೊಸ ಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವಾಗ ಹಳೆಯ ಮಂತ್ರಿಗಳ ಗೈರು ಹಾಜರಿ ವಿಶ್ಲೇಷಕರ ಗಮನ ಸೆಳೆದಿದೆ. ಜೈಪಾಲ ರೆಡ್ಡಿಯವರನ್ನು ಸುದ್ದಿಗಾರರು ಕೇಳಿದಾಗ ತಾನೊಬ್ಬ ಪಕ್ಷದ ಶಿಸ್ತಿನ ಸಿಪಾಯಿ ಎಂದರಷ್ಟೇ. ತಮ್ಮ ಖಾತೆ ಬದಲಾವಣೆಯ ಬಗ್ಗೆ ಪ್ರಧಾನ ಮಂತ್ರಿಗಳು ಮೊದಲೇ ಅವರಿಗೆ ತಿಳಿಸಿದ್ದರಂತೆ. ಆದರೆ ಏಕೆ ಈ ಬದಲಾವಣೆ ಎಂದು ಅವರು ಹೇಳಲೂ ಇಲ್ಲ, ಇವರು ಕೇಳಲೂ ಇಲ್ಲವಂತೆ. ಅವರ ಅಧಿಕಾರಾವಧಿಯಲ್ಲಿ ಸ್ವಚ್ಛ ಆಡಳಿತದ ಒಂದು ಉನ್ನತ ಮಾದರಿಯನ್ನು ಹಾಕಿಕೊಟ್ಟಿದ್ದಾರೆ ಎಂದು ಹೊಸ ಮಂತ್ರಿಗಳು ತಮ್ಮ ಹಳೆಯ ಸಹಯೋಗಿಯನ್ನು ಬಹಳವಾಗಿ ಹೊಗಳಿದ್ದಾರೆ. ಜತೆಗೇ 'ಹಲವು ಬಾರಿ ನಿರ್ಣಯ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳಲಾಯಿತು' ಎಂಬ ಅವರ ಟಿಪ್ಪಣಿ ಬಹುಶಃ, ಇಂತಹ ಉನ್ನತ ಮಾದರಿಯ ನಂತರವೂ ಬದಲಾವಣೆ ಏಕೆ ಮಾಡಲಾಯಿತು ಎಂಬುದಕ್ಕೆ ಅವರ ಪರೋಕ್ಷ ಸಮಜಾಯಿಷಿ ಇರಬಹುದು. ಮುಕೇಶ್ ಅಂಬಾನಿಯ ಅನಿಲ ಕಂಪನಿಯ ಬೇಡಿಕೆಯ ಬಗ್ಗೆ ಕೇಳಿದಾಗ 'ನಿರ್ಣಯಗಳನ್ನು ಚುರುಕಿನಿಂದ ತೆಗೆದುಕೊಳ್ಳಬೇಕಾಗುತ್ತದೆ ಎನ್ನುವಾಗ ಎಲ್ಲವೂ ಬರುತ್ತದೆ, ಒಂದೆರಡು ವ್ಯಕ್ತಿಗಳು, ಕಂಪನಿಗಳ ಬಗ್ಗೆಯಷ್ಟೇ ಅಲ್ಲ' ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

ಈ ಟಿಪ್ಪಣಿಯ ಮರುದಿನವೇ ದೇಶದ ಮಹಾ ಲೆಕ್ಕ ಪರಿಶೋಧನಾ ಅಧಿಕಾರಿಗಳು ಅಂದರೆ ಸಿ.ಎ.ಜಿ. ಅಧಿಕಾರಿಗಳು ಮತ್ತು ಅಂಬಾನಿಯವರ ಕಂಪನಿಯ ಅಧಿಕಾರಿಗಳ ನಡುವೆ ಈ ಕಂಪನಿಯ ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ಮೊದಲೇ ನಿಗದಿಯಾಗಿದ್ದ ಸಭೆಯನ್ನು ಈಗ ಮುಂದೂಡಲಾಗಿದೆ ಎಂಬ ಸುದ್ದಿ ಬಂದಿದೆ. ಇದು 'ನಿರ್ಣಯ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳುವ' ಕ್ರಿಯೆಯ ಭಾಗವೋ ಅಥವ 'ನಿರ್ಣಯವನ್ನು ಚುರುಕಿನಿಂದ ತೆಗೆದುಕೊಳ್ಳುವ' ಕ್ರಿಯೆಯ ಭಾಗವೋ ಎಂಬುದು ಈಗ ನಮ್ಮ-ನಮ್ಮ ಊಹೆಗೆ ಬಿಟ್ಟ ಸಂಗತಿ.



ಕೃಪೆ : ದಿ ಹಿಂದು

ಸಿಎಜಿಯ ಈ ಲೆಕ್ಕಪರಿಶೋಧನೆಗೆ ಕಾನೂನಿನ ಪ್ರಕಾರ ಅವಕಾಶ ಇಲ್ಲ ಎಂಬುದು ಅಂಬಾನಿ ಕಂಪನಿಯ ವಾದವಾಗಿತ್ತು, ಆದರೆ ಈ ಕಂಪನಿ ಜೊತೆಗೆ ಆದ ಕರಾರಿನಲ್ಲಿ ಇದಕ್ಕೆ ಅವಕಾಶ ಇದೆ, ಈ ಕಂಪನಿಯ ನಡವಳಿಕೆಗಳಿಂದಾಗಿ ದೇಶದ ಖಜಾನೆಗೆ ಭಾರೀ ನಷ್ಟವಾಗುತ್ತಿದೆ ಎಂಬುದು ಸರಕಾರದ ಪೆಟ್ರೋಲಿಯಂ ಇಲಾಖೆಯ ವಾದ. ಈ ವಿವಾದವನ್ನು ಪರಿಹರಿಸಲು ಸ್ವತಃ ಮುಕೇಶ್ ಅಂಬಾನಿ ಮತ್ತು ಹಿಂದಿನ ಪೆಟ್ರೋಲಿಯಂ ಮಂತ್ರಿಗಳ ನಡುವೆ ಆರು ಸಭೆಗಳು ನಡೆದಿದ್ದವು. ಆದರೆ ಮಂತ್ರಿಗಳು ಅಂಬಾನಿಯ ಪರವಾಗಿ 'ಚುರುಕಿನಿಂದ ನಿರ್ಣಯ' ಕೈಗೊಳ್ಳದ ಕಾರಣ ಕೊನೆಗೂ ಅಂಬಾನಿ ಒಡೆತನದ ಕಂಪನಿ ರಿಲಯನ್ಸ್ ಇಂಡಸ್ಟ್ರೀಸ್ ತನಗೆ ಕಾಂಟ್ರಾಕ್ಟ್ ಕೊಟ್ಟಿದ್ದ ಕೆಜಿ-ಡಿ6 ಅನಿಲ ನಿಕ್ಷೇಪ ಕುರಿತಂತೆ ಮಾಡಿದೆಯೆನ್ನಲಾದ ಖರ್ಚುಗಳ ಲೆಕ್ಕ ಪರಿಶೋಧನೆಗೆ ಒಪ್ಪಿಕೊಂಡು ಅಕ್ಟೋಬರ್ 31ರಂದು ಈ ಸಭೆಯನ್ನು ನಿರ್ಧರಿಸಲಾಗಿತ್ತು. ಇದನ್ನು 'ಪ್ರವೇಶ ಸಮ್ಮೇಳನ' ಎಂದು ಹೆಸರಿಸಲಾಗಿತ್ತು.

ಪೆಟ್ರೋಲಿಯಂ ಇಲಾಖೆಯಲ್ಲಿ ಹೊಸ ಮಂತ್ರಿಗಳು ಬಂದ ಕೂಡಲೇ ಇದನ್ನು ಮುಂದೂಡುವ ಪ್ರಕಟಣೆ ಬಂತು. ಲೆಕ್ಕ ಪರಿಶೋಧನೆಯ ಸ್ವರೂಪದ ಬಗೆಗಿರುವ ಭಿನ್ನಾಭಿಪ್ರಾಯಗಳಿಂದಾಗಿ ಹೀಗೆ ಮಾಡಲಾಗಿದೆ ಎಂದು ಹೇಳಲಾಗಿದೆ. ಈ ಭಿನ್ನಾಭಿಪ್ರಾಯ ಸಂಪುಟ ಪುನರ್‍ರಚನೆಯ ನಂತರ ಹುಟ್ಟಿಕೊಂಡದ್ದೇನೂ ಅಲ್ಲವಲ್ಲ!

ಇದಾದ ನಂತರ ಅಂಬಾನಿ ಮನೆತನ ಎರಡು ಯುಪಿಎ ಸರಕಾರಗಳು ಮತ್ತು ಹಿಂದಿನ ಎನ್‌ಡಿಎ ಸರಕಾರದ ಮೇಲೆ ಭಾರೀ ಪ್ರಭಾವ ಬೀರಿ ತನಗೆ ಬಹಳಷ್ಟು ಅನುಕೂಲ ಕಲ್ಪಿಸಿಕೊಂಡಿದೆ, ಈಗ ಅದಕ್ಕೆ ಅಡ್ಡಿಯಾಗಿದ್ದ ಪೆಟ್ರೋಲಿಯಂ ಮಂತ್ರಿಗಳ ಎತ್ತಂಗಡಿ ಮಾಡಿಸಿ ತನ್ನ ಪ್ರಭಾವವನ್ನು ತೋರಿಸಿ ಕೊಟ್ಟಿದೆ ಎಂಬ ಆರೋಪಕ್ಕೆ ಬಲ ಬಂದಂತಾಗಿದೆ.

ಕೆಜಿ ಬೇಸಿನ್‌ನ ಈ ನೈಸರ್ಗಿಕ ಅನಿಲ ನಿಕ್ಷೇಪದ ಕಾಂಟ್ರಾಕ್ಟಿನಲ್ಲಿ ಅಂಬಾನಿ ಕಂಪನಿಯು ಸರಕಾರದ ಮೇಲೆ ಹೇರುತ್ತಿರುವ ಒತ್ತಡಗಳು ಮತ್ತು ದೇಶದ ಖಜಾನೆಗೆ ಮೋಸ ಮಾಡಲು ಮಾಡುತ್ತಿರುವ ಪ್ರಯತ್ನಗಳು, ಅದಕ್ಕೆ ಸ್ವತಃ ಪೆಟ್ರೋಲಿಯಂ ಇಲಾಖೆಯ ವಿರೋಧವಿದ್ದರೂ, ಪ್ರಧಾನ ಮಂತ್ರಿಗಳ ಕಚೇರಿಯಿಂದಲೇ ಈ ಪ್ರಬಲ ಕಾರ್ಪೊರೇಟ್ ಗುಂಪಿಗೆ ಬೆಂಬಲ ಸಿಗುತ್ತಿರುವುದು ಹೊಸದಾಗಿ ಬೆಳಕಿಗೆ ಬಂದಿರುವ ಸತ್ಯವೇನಲ್ಲ. ಕಳೆದ ಆರು ವರ್ಷಗಳಿಂದ ಸಿಪಿಐ(ಎಂ) ಸಂಸತ್ ಸದಸ್ಯರು, ಮುಖ್ಯವಾಗಿ ತಪನ್ ಸೇನ್ ಪ್ರಧಾನಮಂತ್ರಿಗಳ ಮತ್ತು ಸಂಸತ್ತಿನ ಗಮನ ಇದರತ್ತ ಸೆಳೆಯಲು ಸತತವಾಗಿ ಪ್ರಯತ್ನಿಸಿರುವುದನ್ನು ಈ ಅಂಕಣದಲ್ಲಿ ಹಲವು ಬಾರಿ ಪ್ರಸ್ತಾಪಿಸಲಾಗಿದೆ.

ದಿಲ್ಲಿ ವಿ.ವಿ. ಶಿಕ್ಷಣದಲ್ಲಿ ನವ-ಉದಾರವಾದದ ಪ್ರಯೋಗಶಾಲೆ?

ದಿಲ್ಲಿ ವಿಶ್ವ ವಿದ್ಯಾಲಯ ಈಗ ಸರ್ವಾಧಿಕಾರಶಾಹಿಯ ತಾಣದಂತಾಗಿದೆ. ಶಿಕ್ಷಕರು ಮತ್ತು ಶಿಕ್ಷಕೇತರರು ಎಲ್ಲರೂ ಇಲ್ಲಿಯ ಉಪಕುಲಪತಿಗಳ ಸರ್ವಾಧಿಕಾರಶಾಹೀ ದಮನಕ್ಕೆ ಗುರಿಯಾಗಿದ್ದಾರೆ. ಇದರ ವಿರುದ್ಧ ಈಗ ಅಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಇದನ್ನು ತಡೆಯಲು ಉಪಕುಲಪತಿಗಳು ನಡೆಸಿದ ದಮನಚಕ್ರವನ್ನು ಅಲ್ಲಿಯ ಶಿಕ್ಷಕರ ಸಂಘ ಸದ್ಯ ಎದುರಿಸಿ

ಪುಟ 15 ಕ್ಕೆ

30 ಲಕ್ಷ ಹೆಣ್ಣು ಹಸುಗೂಸುಗಳ 'ಕಾಣೆ'

ಇದು ಈ ವರ್ಷದ 'ಅಂತರ್‍ರಾಷ್ಟ್ರೀಯ ಹೆಣ್ಣುಮಕ್ಕಳ ದಿನ'ದ ಸಂದರ್ಭದಲ್ಲಿ ಭಾರತದ 'ಸಾಧನೆ'. ಕೇಂದ್ರೀಯ ಅಂಕೆ-ಸಂಖ್ಯೆ ಸಂಘಟನೆ(ಸಿಎಸ್‌ಒ)ಯ ಒಂದು ಅಧ್ಯಯನದ ಪ್ರಕಾರ 2001-2011ರ ದಶಕದಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಆರುವರ್ಷದ ವರೆಗಿನ ಹೆಣ್ಣುಮಕ್ಕಳ ಪ್ರಮಾಣ ಗಮನಾರ್ಹವಾಗಿ ಇಳಿದಿದೆ, 7.88 ಕೋಟಿಯಿಂದ 7.58 ಕೋಟಿಗಿಳಿದಿದೆ. ನಿಜ, ಒಟ್ಟಾರೆಯಾಗಿ ಮಕ್ಕಳ ಪ್ರಮಾಣ ಇಳಿದಿದೆ, ಆದರೆ ಹೆಣ್ಣು ಮಕ್ಕಳ ಇಳಿಕೆಯ ಪ್ರಮಾಣ ಬಹಳ ಹೆಚ್ಚು. 2001ರಲ್ಲಿ ಮಹಿಳೆಯರ ಜನಸಂಖ್ಯೆ 49.65 ಕೋಟಿ, ಇದರಲ್ಲಿ ಹೆಣ್ಣು ಮಕ್ಕಳ ಪ್ರಮಾಣ 15.88ಶೇ. ಇತ್ತು. 2011ರಲ್ಲಿ ಇದು 12.9ಶೇ.ಕ್ಕೆ ಇಳಿದಿದೆ. ಆರು ವರ್ಷದ ವರೆಗಿನ ಮಕ್ಕಳಲ್ಲಿ ಲಿಂಗಾನುಪಾತ 1991ರಲ್ಲಿ 945 ಇದ್ದದ್ದು(ಅಂದರೆ ಗಂಡುಮಕ್ಕಳ ಸಂಖ್ಯೆ 1000 ಇದ್ದರೆ ಹೆಣ್ಣು ಮಕ್ಕಳ ಸಂಖ್ಯೆ 945), 2011ರಲ್ಲಿ 914ಕ್ಕೆ ಇಳಿದಿದೆ.

ಹಿಮಾಚಲ ವಿಧಾನಸಭಾ ಚುನಾವಣೆ: ಸಿಪಿಐ(ಎಂ) ಬಾವುಟ –ಪ್ರಚಾರಕ್ಕೆ ಅಡೆ ತಡೆ

ಕಾಂಗ್ರೆಸ್ ಬಿಜೆಪಿ ಪಕ್ಷಗಳು ಸರಿಸುಮಾರು ಸಮಬಲದ ಸ್ಪರ್ಧೆ ನಡೆಸುತ್ತಿವೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿರುವ ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆ ಮತ್ತೊಂದು ದೃಷ್ಟಿಯಿಂದ ಕತೂಹಲಕ್ಕೆ ಕಾರಣವಾಗಿದೆ.

ಕೆಲ ತಿಂಗಳ ಹಿಂದೆ ನಡೆದ ಪ್ರತಿಷ್ಠಿತ ಶಿಮ್ಲಾ ಮಹಾನಗರ ಪಾಲಿಕೆಯ ಮೇಯರ್–ಉಪಮೇಯರ್ ಸ್ಥಾನದ ನೇರ ಚುನಾವಣೆಯಲ್ಲಿ ಅಭೂತಪೂರ್ವ ಜಯ ಸಂಪಾದಿಸಿತ್ತು. ಕೇಂದ್ರ ಸಚಿವರೂ ಸೇರಿದಂತೆ ರಾಷ್ಟ್ರೀಯ ನಾಯಕರು ಪ್ರಚಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಜನ ಸೋಲಿಸಿ ಸಿಪಿಐ(ಎಂ)ಗೆ ನಿರ್ಣಾಯಕ ಮತ ನೀಡಿದ್ದರು. ಕಳೆದ ಸತತ ಐದು ವರ್ಷಗಳಿಂದ ಜನರ ಸಮಸ್ಯೆಯನ್ನು ಎತ್ತಿ ನಡೆಸಿದ ಹೋರಾಟ ಫಲವಾಗಿ ಜನ ಸಿಪಿಐ(ಎಂ)ನತ್ತ ಒಲವು ಬೀರಿದ್ದರು. ಹಾಗಾಗಿ ಈ ಬಾರಿಯ ಚುನಾವಣೆಯಲ್ಲೂ ಹೊಸ ಆಶಾವಾದ ವ್ಯಕ್ತವಾಗಿದೆ. ಸಿಪಿಐ(ಎಂ) ಈ ಬಾರಿ 15 ಸ್ಥಾನಗಳಿಗೆ ಸ್ಪರ್ಧಿಸಿದೆ. ವಿಸರ್ಜಿತ ವಿಧಾನಸಭೆಯಲ್ಲಿ ಸಿಪಿಐ(ಎಂ) ಯಾವ ಸದಸ್ಯರನ್ನೂ ಹೊಂದಿರಲಿಲ್ಲ.

68 ಸದಸ್ಯ ಬಲದ ರಾಜ್ಯ ವಿಧಾನಸಭೆಗೆ 2007ರಲ್ಲಿ ನಡೆದ ಚುನಾವಣೆಯಲ್ಲಿ ಸಿಪಿಐ(ಎಂ) ಏಳು ಸ್ಥಾನಗಳಿಗೆ ಸ್ಪರ್ಧೆ ನಡೆಸಿತ್ತು, ಉಳಿದ ಸ್ಥಾನಗಳಲ್ಲಿ ಜಾತ್ಯತೀತ ಪಕ್ಷಗಳಿಗೆ ಬೆಂಬಲ ನೀಡಿತ್ತು. 2003ರಲ್ಲಿ ಸ್ಪರ್ಧೆಯ ಸಂಖ್ಯೆ ಕೇವಲ ನಾಲ್ಕು ಆಗಿತ್ತು.

ಆದರೆ, ಈ ಬಾರಿ ವಿಸ್ತಾರಗೊಂಡ ಹೋರಾಟ, ಕಾರ್ಯಕರ್ತರ ಹುರುಪು ಹಾಗೂ ಹೆಚ್ಚುತ್ತಿರುವ ಜನಬೆಂಬಲದ ದೃಷ್ಟಿಯಿಂದ ಪಕ್ಷ 15 ಸ್ಥಾನಗಳಿಗೆ ಸ್ಪರ್ಧೆ ನಡೆಸಿದೆ.

ಕಳೆದ ಐದು ವರ್ಷಗಳಲ್ಲಿ ರಾಜ್ಯ ರಾಜಕೀಯದಲ್ಲೂ ಮಹತ್ತರ ಬದಲಾವಣೆಗಳಾಗಿವೆ. ಬಿಜೆಪಿಯ ಕೋಮು ರಾಜಕೀಯದಿಂದ ಬೇಸತ್ತ ಒಂದು ದೊಡ್ಡ ಗುಂಪು ಹೊರಬಂದು ಹಿಮಾಚಲ್ ಲೋಕಹಿತ್ ಪಾರ್ಟಿ ಸ್ಥಾಪಿಸಿದೆ. ಸಿಪಿಐ(ಎಂ) ಸ್ಪರ್ಧೆ ನಡೆಸದ 53 ಕ್ಷೇತ್ರಗಳಲ್ಲಿ ಸಿಪಿಐ ಮತ್ತು ಲೋಕಹಿತ್ ಪಾರ್ಟಿಗೆ ತನ್ನ ಬೆಂಬಲವನ್ನು ಘೋಷಿಸಿದೆ.

ಪಕ್ಷದ ಪ್ರಭಾವಿ ನಾಯಕ ಹಾಗೂ ರಾಜ್ಯ ಕಾರ್ಯದರ್ಶಿ ರಾಕೇಶ್ ಸಿಂಘಾ, ಶಿಮ್ಲಾ ಮಹಾನಗರ ಪಾಲಿಕೆಯ ಉಪ ಮೇಯರ್ ಟೀಕೇಂದರ್ ಪವಾರ್ ಹಾಗೂ ಪಕ್ಷದ ಹಿರಿಯ ನಾಯಕ ಕುಲ್‌ದೀಪ್ ಸಿಂಗ್ ತನ್ವಾರ್ ಸ್ಪರ್ಧಿಗಳಲ್ಲಿ ಪ್ರಮುಖರು. ಈ ಮೂವರು ಕ್ರಮವಾಗಿ ಶಿಮ್ಲಾ ಪಾಲಿಕೆ ವ್ಯಾಪ್ತಿಯ ಥಾಂಗ್, ಕಸುಂತಿ ಮತ್ತು ಶಿಮ್ಲಾ ಗ್ರಾಮೀಣ ಕ್ಷೇತ್ರದ ಅಭ್ಯರ್ಥಿಗಳಾಗಿದ್ದಾರೆ.

ಚುನಾವಣಾ ಪ್ರಣಾಳಿಕೆ

ಸಿಪಿಐ(ಎಂ) ಈ ಬಾರಿ ಪ್ರತ್ಯೇಕ ಚುನಾವಣಾ ಪ್ರಣಾಳಿಕೆಯನ್ನೂ ಬಿಡುಗಡೆ ಮಾಡಿದೆ. ಯುವಜನರು ಮತ್ತು ಕಾರ್ಮಿಕರ ಪರವಾಗಿ ಹಲವು ಘೋಷಣೆಗಳನ್ನು ಮಾಡಲಾಗಿದೆ. ನಿರುದ್ಯೋಗ ಭತ್ಯೆ 300 ರೂಪಾಯಿ ಹಾಗೂ ಕನಿಷ್ಠ ಕೂಲಿಯನ್ನು ದಿನಕ್ಕೆ 300 ರೂಪಾಯಿಗೆ ನಿಗದಿಗೊಳಿಸುವ ಸಲುವಾಗಿ ಶ್ರಮಿಸುವ ಭರವಸೆ ನೀಡಲಾಗಿದೆ.

ಎಲ್ಲ ಸರ್ಕಾರಿ ನೇಮಕಾತಿಗಳನ್ನು ಪೂರ್ಣಗೊಳಿಸಿ, ಅರೆಕಾಲಿಕ ಹಾಗೂ ಗುತ್ತಿಗೆ ಆಧಾರದಲ್ಲಿ ದುಡಿಯುವ ನೌಕರರನ್ನು ಖಾಯಂಗೊಳಿಸಲು ಶ್ರಮಿಸುವ ವಾಗ್ದಾನವನ್ನೂ ಮಾಡಲಾಗಿದೆ. ಅದೇ ರೀತಿ ಸಂಚಾರಿ ಆರೋಗ್ಯ ಸೇವೆ ಹಾಗೂ ನಿವೇಶನ ರಹಿತರಿಗೆ ಕಾಲಮಿತಿಯಲ್ಲಿ ಮನೆ ನಿರ್ಮಾಣಕ್ಕಾಗಿ ಶ್ರಮಿಸುವ ಭರವಸೆಯನ್ನು ಪ್ರಣಾಳಿಕೆಯಲ್ಲಿ ನೀಡಲಾಗಿದೆ.

ಸ್ಪರ್ಧಿಸುವ 15 ಸ್ಥಾನಗಳ ಪೈಕಿ ಹಲವು ಕ್ಷೇತ್ರಗಳಲ್ಲಿ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ.

ಚುನಾವಣಾ ಆಯೋಗದ ಪಕ್ಷಪಾತ ಧೋರಣೆ

ಇದೇ ವೇಳೆ, ಸಿಪಿಐ(ಎಂ) ಅಭ್ಯರ್ಥಿಗೆ ಹೆಚ್ಚುತ್ತಿರುವ ಜನ ಬೆಂಬಲ ಹಾಗೂ ಗೆಲ್ಲುವ ಅಪೂರ್ವ ಅವಕಾಶಗಳನ್ನು ಹೊಸಕಿ ಹಾಕಲು ಪ್ರಧಾನ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಇನ್ನಿಲ್ಲದ ಪ್ರಯತ್ನಗಳನ್ನು ನಡೆಸಿವೆ. ಇದಕ್ಕೆ ಚುನಾವಣಾ ಆಯೋಗವೂ ಪರೋಕ್ಷವಾಗಿ ಬೆಂಬಲ ನೀಡಿದೆ. ಶಿಮ್ಲಾ ನಗರದಲ್ಲಿ ಸಿಪಿಐ(ಎಂ)ನ ಚುನಾವಣಾ ಪ್ರಚಾರ ಬ್ಯಾನರ್‌ಗಳು ಹಾಗೂ ಬಂಟಿಂಗ್ಸ್‌ಗಳನ್ನು ಬಳಸಲು ಅಧಿಕೃತ ಅನುಮತಿ ಪಡೆದಿದ್ದರೂ ಅದಕ್ಕೆ ಅವಕಾಶ ನೀಡಲಾಗುತ್ತಿಲ್ಲ. ಆಯೋಗದ ಈ ಕ್ರಮವನ್ನು ಪ್ರಶ್ನಿಸಿ ಮುಖ್ಯ ಚುನಾವ... ಆಯೋಗಕ್ಕೆ ಸಿಪಿಐ(ಎಂ) ಪಕ್ಷ ಪ್ರತಿಭಟ... ಪತ್ರವನ್ನು ಬರೆದಿದೆ.

ಇನ್ನೊಂದೆಡೆ, ಕಾಂಗ್ರೆಸ್, ಬಿಜೆಪಿ ಹಾ... ತೃಣಮೂಲ ಕಾಂಗ್ರೆಸ್‌ಗೆ ನಿರಾತಂಕ... ಬ್ಯಾನರ್, ಬಂಟಿಂಗ್ಸ್‌ಗಳನ್ನು ಬಳಸಿ ಪ್ರಚಾ... ನಡೆಸಲು ಎಲ್ಲ ಅವಕಾಶಗಳನ್ನೂ ನೀಡಲಾಗಿ...

ಈ ಪಕ್ಷಗಳು ಮೊದಲೇ ಅನುಮತಿಯನ... ತೆಗೆದುಕೊಂಡಿವೆ ಎಂಬ ದಾರಿ ತಪ್ಪಿಸು... ಹೇಳಿಕೆಯನ್ನು ಪಾಲಿಕೆ ಆಯುಕ್ತರು ನೀಡಿದ್ದಾ... ಪಕ್ಷಕ್ಕೆ ಮತ ಪ್ರಚಾರ ನಡೆಸುವ ಹಕ್ಕ... ಅಧಿಕಾರಿಗಳು ವ್ಯವಸ್ಥಿತವಾಗಿ ಮೊಟ... ಗೊಳಿಸಿದ್ದಾರೆ. ಅಲ್ಲದೆ, ಬಹಿರಂಗ ಸಭೆಗ... ಹಾಗೂ ಮನೆಗಳಲ್ಲೂ ಪ್ರಚಾರ ನಡೆಸದ... ನಿರ್ಬಂಧಿಸಲಾಗಿದೆ. ಅಧಿಕಾರಿಗ... ವರ್ತನೆಯನ್ನು ಆಕ್ಷೇಪಿಸಿ ಹಿಮಾಚಲ ಪ್ರದೇಶ... ಮುಖ್ಯ ಚುನಾವಣಾ ಆಯುಕ್ತರಲ್ಲಿ ದೂ... ಸಲ್ಲಿಸಲಾಗಿದೆ.

ಬತ್ತದ ಉತ್ಸಾಹ

ಇದೆಲ್ಲದರ ಮಧ್ಯೆ ನವೆಂಬರ್ 4ರಂದ... ನಡೆಯಲಿರುವ ಚುನಾವಣೆಗೆ ಎ... ಕಾರ್ಯಕರ್ತರೂ ಉತ್ಸಾಹದಿಂ... ಶ್ರಮಿಸುತ್ತಿದ್ದಾರೆ. ಹಿಮಾಚಲ ಪ್ರದೇಶ... ವಿಧಾನಸಭೆಯಲ್ಲಿ ಕೆಂಬಾವುಟವನ್ನು ಹಾರಿಸು... ನಿಟ್ಟಿನಲ್ಲಿ ಪಕ್ಷದ ಹಿತೈಷಿಗಳು, ಕಾರ್ಯಕರ್ತರ... ಹಗಲಿರುಳು ದುಡಿಯುತ್ತಿದ್ದಾರೆ. ಒಟ್ಟಿನಲ್ಲಿ, ದೇಶದ ಎಡ–ಪ್ರಜಾಸತ್ತಾತ್ಮಕ ಚಳುವಳಿ... ಒಂದಷ್ಟು ಹೊಸ ಉತ್ಸಾಹ–ಸ್ಫೂರ್ತಿ... ನೀಡುವಂತಹ ಫಲಿತಾಂಶ ಮತ್ತು ಸಂದೇ... ಈ ಚನಾವಣೆಯಿಂದ ಸಿಗಬಹುದೇ ಎಂಬುದು ಕುತೂಹಲದ ವಿಷಯವಾಗಿದೆ.

ಸ್ಟಾಫ್ ನರ್ಸ್‌ಗಳ ದಿಟ್ಟ ಹೋರಾಟ............

ಪುಟ 11 ರಿಂದ

ಉದ್ಘಾಟನೆ ಮುಗಿದ ನಂತರ ಬೇರೆ ಏನೂ ನೌಕರರಿಗೆ ಸಿಕ್ಕಲಿಲ್ಲ.

ಪ್ರತಿಭಟನಾ ಮೆರವಣಿಗೆ–ಧರಣಿ

ಆಡಳಿತ ಮಂಡಳಿಯ ನೌಕರ ವಿರೋಧಿ ನೀತಿಯನ್ನು ಪ್ರತಿಭಟಿಸಿ ಹಾಗೂ ನೌಕರರ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಅಕ್ಟೋಬರ್ 13 ಸೌಹಾರ್ದ ಕಾರ್ಯಾಚರಣೆ ನಡೆಸಲು ಸಿಐಟಿಯು ತೀರ್ಮಾನಿಸಿತು. ಅದಕ್ಕೂ ಪೋಲೀಸರು ಹಾಗೂ ಆಡಳಿತ ಮಂಡಳಿಯಿಂದ ಅಡೆ ತಡೆ ಯತ್ನ ನಡೆಯಿತು. ಆದರೆ ಸು. 700 ಕ್ಕೂ ಹೆಚ್ಚಿನ ಸಿಐಟಿಯುಗೆ ಸೇರಿದ ಕಾರ್ಮಿಕರು ಅಂದು ಅಂಬೇಡ್ಕರ್ ಪಾರ್ಕ್‌ನಿಂದ ಕೆಎಲ್‌ಇ ಆಸ್ಪತ್ರೆಯತ್ತ ಮೆರವಣಿಗೆ ನಡೆಸಿದರು. ಆಸ್ಪತ್ರೆ ಎದುರಿನಲ್ಲೇ ನಿರಂತರ ಧರಣಿಯನ್ನೂ ಆರಂಭಿಸಿದರು. ಧರಣಿ ಸತ್ಯಾಗ್ರಹಕ್ಕೆ ಮಾಜಿ ಕೇಂದ್ರ ಸಚಿವ ಬಾಬಗೌಡ ಪಾಟೀಲ ಸೇರಿದಂತೆ ಹಲವಾರು ಸ್ಥಳೀಯ ಮುಖಂಡರು ಬಂದು ಬೆಂಬಲಿಸಿದರು. ಆಡಳಿತ ಮಂಡಳಿಯು ನೌಕರರ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು. ಆದರೆ ಆಡಳಿತ ಮಂಡಳಿಯ ಧೋರಣೆ ಮಾತ್ರ ಬದಲಾಗಲಿಲ್ಲ.

'ಮಾತುಕತೆಗೆ ಎಳೆಯುವಲ್ಲಿ' ಸಫಲ

ಸಹಾಯಕ ಕಾರ್ಮಿಕ ಆಯುಕ್ತರು ಅಕ್ಟೋಬರ್ 20 ರಂದು ನಡೆಸಿದ ಸಂಧಾನ ಮಾತುಕತೆಯಲ್ಲಿ ಆಡಳಿತ ಮಂಡಳಿಯ ಪರವಾಗಿ ಪ್ರತಿನಿಧಿಗಳು ಭಾಗವಹಿಸಿದ್ದರು. ಆದರೆ ನಿರ್ದಿಷ್ಟವಾಗಿ ಯಾವುದೇ ಭರವಸೆ ನೀಡದೇ ನುಣಿಚಿಕೊಂಡರು. ಆದರೆ ನೊಂದಣಿಯಾದ ನೌಕರರ ಸಂಘದ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಲೇಬೇಕಾದ ಅನಿವಾರ್ಯತೆಗೆ ಆಡಳಿತ ಮಂಡಳಿ ಒಳಗಾಯಿತು. ಇದು ನೌಕರರ ಸಂಘದ ಒಂದು ಹಂತದ ಜಯವೇ ಆಗಿದೆ. ಹೀಗಾಗಿ ನೌಕರರು ತಮ್ಮ ಹೋರಾಟವನ್ನು ಮುಂದುವರೆಸಿದ್ದಾರೆ. ಆರಂಭದಲ್ಲಿ ಅಳುಕಿನಿಂದಲೇ ಹೋರಾಟಕ್ಕೆ ಬರುತ್ತಿದ್ದ ಅವರು ಈಗ ಧೈರ್ಯವಾಗಿ ತಮ್ಮ ಮೇಲಾಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಆಸ್ಪತ್ರೆಯಲ್ಲಿ ಕೆಲಸ ಮಾಡುವ ವೈದ್ಯರು, ಸ್ಟಾಫ್ ನರ್ಸ್‌ಗಳಲ್ಲದ ಇತರೆ ಸಿಬ್ಬಂದಿಯ ನೈತಿಕ ಬೆಂಬಲ ಕೂಡ ಹೋರಾಟಕ್ಕಿದೆ. ಜಿಲ್ಲೆಯ ಸಿಐಟಿಯು ಮತ್ತು ಇತರೆ ಕಾರ್ಮಿಕ ಸಂಘಗಳು ಕೂಡ ಈ ಹೋರಾಟಕ್ಕೆ ಬೆಂಬಲಿಸಿ ನಿತ್ಯ ಭಾಗವಹಿಸುತ್ತಿವೆ.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್ ಹಾಗೂ ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ, ಬೆಳಗಾವಿ ಜಿಲ್ಲೆಯ ಹಿರಿಯ ಮುಖಂಡ ವಿ.ಪಿ. ಕುಲಕರ್ಣಿ, ಸಿಐಟಿಯು ಬೆಳಗಾಂ ಜಿಲ್ಲಾ ಕಾರ್ಯದರ್ಶಿ ಗಿರೀಶ್ ಶೆಟ್ಟಿ ಮತ್ತಿತರರು ಚಳುವಳಿಗೆ ನೇತೃತ್ವ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ. ಹೋರಾಟದ ಬಾವುಟ ಹಾರುತ್ತಿದೆ. ರಾಜ್ಯದ ನೂರಾರು ಖಾಸಗಿ ಆಸ್ಪತ್ರೆಗಳಲ್ಲಿ ಇದೇ ರೀತಿಯಾಗಿ ಶೋಷಣೆ ತುತ್ತಾಗಿರುವ ಸಾವಿರಾರು ನರ್ಸ್‌ಗಳು ಮತ್ತು ಸಿಬ್ಬಂದಿಗಳಿಗೆ ತಾವೂ ಸಂಘಟಿತರಾಗಿ ಹೋರಾಟಕ್ಕೆ ಮುಂದಾಗುವಂತೆ ಸ್ಫೂರ್ತಿ ನೀಡುವ ಹೋರಾಟವಾಗಿ ಬೆಳಗಾವಿಯ ಈ ನರ್ಸ್‌ಗಳು ನಡೆಸುತ್ತಿರುವ ಹೋರಾಟ ಬೆಳೆದು ಬರಬೇಕಿದೆ. ಅದಕ್ಕೆ ಪೂರಕವಾಗಿ ವಿವಿಧ ಜನ ಸಮುದಾಯಗಳ ಸೌಹಾರ್ದ ಬೆಂಬಲ ಹೋರಾಟಕ್ಕೆ ಅಗತ್ಯವಾಗಿದೆ.

ಈ ಜಗತ್ಪಾಲಕರು

ಮೂವತ್ತೂರು ಕೋಟಿ
ಒಡೆಯರುಗಳು ಕೂಡಿ
ಧರೆಗಿಳಿದು ಬಂಗಲೆಯ ಕಟ್ಟಹರು
ನೋಡಿ
ಹೀಗಾಗಿ ಬಡ ದುಡಿವ ಜನಗಳಿಗೆ ಎಲ್ಲ
ಸೂರಿಲ್ಲ ಕೂಳಿಲ್ಲ ತಳಿ ನೀರು ಇಲ್ಲ.

– ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕನ್ನಡ ಶಾಲೆಗಳನ್ನು ಮುಚ್ಚಲು ಹೊರಟಿರುವ ಬಿಜೆಪಿ ಸರ್ಕಾರದ ವಿರುದ್ಧ ಎಸ್ ಎಫ್ ಐ-ಡಿವೈಎಫ್ ಐ ಪ್ರತಿಭಟನೆ-ಬಂಧನ

ರಾಜ್ಯ ಬಿಜೆಪಿ ಸರ್ಕಾರ ರಾಜ್ಯದಲ್ಲಿರುವ ,740 ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಲು ಮುಂದಾಗಿ ರಾಜ್ಯೋತ್ಸವವನ್ನು ಆಚರಿಸುತ್ತಿದೆ. ದು ಕನ್ನಡ ಹಾಗೂ ಕರ್ನಾಟಕ ಜನತೆಗೆ ಗೆದ ದ್ರೋಹವಾಗಿದೆ. ಕರ್ನಾಟಕ ಜ್ಯೋತ್ಸವವನ್ನು ಆಚರಿಸುವ ನೈತಿಕತೆ ರಾಜ್ಯ ಜೆಪಿ ಸರ್ಕಾರಕ್ಕೆ ಇಲ್ಲ. ಆದ್ದರಿಂದ ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು ಹಾಗೂ ಚಿವರುಗಳನ್ನು ಈ ಕಾರ್ಯಕ್ರಮದಿಂದ ಹಿಷ್ಕರಿಸಬೇಕೆಂದು ಭಾರತ ವಿದ್ಯಾರ್ಥಿ ಡರೇಷನ್(ಎಸ್ಎಫ್ಐ) ಹಾಗೂ ಭಾರತ ಜಾಸತ್ತಾತ್ಮಕ ಯುವಜನ ಡರೇಷನ್(ಡಿವೈಎಫ್ಐ) ಸಂಘಟನೆಗಳ ರ್ಯಕರ್ತರು ಕಂಠೀರವ ಸ್ಟೇಡಿಯಂನಲ್ಲಿ ಾಗೂ ರಾಜ್ಯದ ವಿವಿದೆಡೆ ಪ್ರತಿಭಟನೆ ನಡೆಸಿ ೂರಾರು ಕಾರ್ಯಕರ್ತರು ಬಂಧನಕ್ಕೆ ಳಗಾದರು.

ಇತ್ತೀಚಿಗೆ ಕರ್ನಾಟಕದಲ್ಲಿ ಶಾಲಾ ಶಿಕ್ಷಣದ ಂರಚನೆಯ ಉನ್ನತೀಕರಣ ಹಾಗೂ ಪುನರ್ ಂಘಟನೆಗಾಗಿ ದೆಹಲಿಯ ಶೈಕ್ಷಣಿಕ ಯೋಜನೆ ುತ್ತು ಆಡಳಿತದ ರಾಷ್ಟ್ರೀಯ ವಿಶ್ವ ವಿದ್ಯಾಲಯ (ನ್ಯೂಫಾ)ದ ಉಪಕುಲಪತಿ ಪ್ರೋ.ಆರ್.ಗೋವಿಂದರವರ ಅಧ್ಯಕ್ಷತೆಯಲ್ಲಿ ವರದಿಯನ್ನು ಸಿದ್ಧಪಡಿಸಿಕೊಂಡಿದೆ. ಈ ವರದಿ ರಾಜ್ಯದಲ್ಲಿ ಹೊಸ ಶಿಕ್ಷಕರ ನೇಮಕಾತಿಯ ಅಗತ್ಯವಿಲ್ಲ, ಹೊಸ ಶಾಲೆಗಳ ಸ್ಥಾಪನೆಯ ಅಗತ್ಯವಿಲ್ಲ ಎಂದಿರುವುದಲ್ಲದೆ ಈಗ 30 ವಿದ್ಯಾರ್ಥಿಗಳಿಗಿಂತ ಕಡಿಮೆ ದಾಖಲಾತಿ ಹೊಂದಿರುವ ರಾಜ್ಯದ 12,740 ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚುವಂತೆ ಶಿಫಾರಸ್ಸು ಮಾಡಿದೆ.



ಈ ಶಿಫಾರಸ್ಸು ಜಾರಿಗೊಂಡಲ್ಲಿ ರಾಜ್ಯದ 12,740 ಶಾಲೆಗಳಲ್ಲಿ ಓದುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಲಿದ್ದಾರೆ ಹಾಗೂ ಸಾವಿರಾರು ಶಿಕ್ಷಕರು ತಮ್ಮ ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಈ ಶಿಫಾರಸ್ಸು ಖಾಸಗಿ ಶಾಲೆಗಳಿಗೆ ಲಾಭ ಮಾಡಿಕೊಡಲಿದೆ. ಆದ್ದರಿಂದ ಸರ್ಕಾರ ಈ ವರದಿಯ ತಿರಸ್ಕರಿಸಬೇಕೆಂದು ಎಸ್ಎಫ್ಐ ಮತ್ತು ಡಿವೈಎಫ್ಐ ಸಂಘಟನೆಗಳು ಆಗ್ರಹಿವೆ. ಅಲ್ಲದೆ ರಾಜ್ಯದ ಸಾಹಿತಿಗಳು, ಚಿಂತಕರು, ಕನ್ನಡ ಪ್ರೇಮಿಗಳು ಹಾಗೂ ಕನ್ನಡ ಪರ, ಪ್ರಗತಿಪರ ಸಂಘಟನೆಗಳು ಸರ್ಕಾರದ ಶಿಕ್ಷಣ ವಿರೋಧಿ ನೀತಿಯನ್ನು ವಿರೋಧಿಸಬೇಕೆಂದು ಮನವಿ ಮಾಡಿವೆ.

ರಾಜ್ಯದ ವಿವಿದೆಡೆ ಕಾರ್ಯಕರ್ತರು ರಾಜ್ಯ ಸರ್ಕಾರದ ಕನ್ನಡ ವಿರೋಧಿ ನೀತಿಯನ್ನು ಖಂಡಿಸಿ, ಪ್ರತಿಭಟನೆ ನಡೆಸಿದ ವೇಳೆ ಪೋಲಿಸರು ಅವರ ಮೇಲೆ ಲಾಠಿ ಚಾರ್ಜ್ ನಡೆಸಿ ಬಂಧಿಸಿ ಮೊಕದ್ದಮೆ ಹಾಕಿರುವ ಕ್ರಮವನ್ನು ಎಸ್ಎಫ್ಐ-ಡಿವೈಎಫ್ಐ ಸಂಘಟನೆಗಳು ತೀವ್ರವಾಗಿ ಖಂಡಿಸುತ್ತವೆ. ಬೆಂಗಳೂರು, ಮಂಗಳೂರು, ರಾಯಚೂರು, ಹಾಸನ, ಬೀದರ್, ಧಾರವಾಡ, ಗದಗ, ಕೊಪ್ಪಳ, ಕೋಲಾರ, ಮಂಡ್ಯ, ಹಾವೇರಿ, ಚಿಕ್ಕಬಳ್ಳಾಪುರ ಸೇರಿದಂತೆ ಹಲವೆಡೆ ಎಸ್ ಎಫ್ ಐ□ಡಿವೈಎಫ್ ಐನ ನೂರಾರು ಕಾರ್ಯಕರ್ತರನ್ನು ಪ್ರತಿಭಟನೆ ವೇಳೆ ಬಂಧಿಸಿದ್ದು, ಪ್ರಜಾಸತ್ತಾತ್ಮಕ ಚಳುವಳಿಗಳನ್ನು ಹತ್ತಿಕ್ಕುವ ಈ ಕ್ರಮ ಸರ್ಕಾರದ ಸರ್ವಾಧಿಕಾರಿ ಧೋರಣೆಯಾಗಿದೆ.

ಸರ್ಕಾರ ಕೂಡಲೇ ಶಾಲೆ ಮುಚ್ಚುವ ಕನ್ನಡ ವಿರೋಧಿ ಕ್ರಮದಿಂದ ಹಿಂದೆ ಸರಿಯಬೇಕು ಹಾಗೂ ಕಾರ್ಯಕರ್ತರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ಕೈಬಿಟ್ಟು ಬೇಷರತ್ತಾಗಿ ಬಿಡುಗಡೆ ಮಾಡಬೇಕು. ಇಲ್ಲದಿದ್ದಲ್ಲಿ ಎಸ್ಎಫ್ಐ-ಡಿವೈಎಫ್ಐ ಇತರೆ ಸಂಘಟನೆಗಳ ಜೊತೆಗೂಡಿ ಉಗ್ರ ಪ್ರತಿಭಟನೆಗೆ ಮುಂದಾಗುತ್ತವೆ. ಎರಡೂ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಸಂಪುಟ ಪುನರ್‌ರಚನೆಯ.....

ುಟ 13 ರಿಂದ

ಂತಿದೆ.

ಈ ದಮನಚಕ್ರದ ಹಿಂದೆ ಇರುವುದು ಾಸ್ತವವಾಗಿ ಯುಪಿಎ-2 ಸರಕಾರದ ಮಾನವ ಂಪನ್ಮೂಲ ಮಂತ್ರಿಗಳು ಎಂದು ದಿಲ್ಲಿ ಶ್ವವಿದ್ಯಾಲಯ ಶಿಕ್ಷಕರ ಸಂಘ(ಡಿಯುಟಿಎ) ೇಳಿದೆ. ಈ ಮಂತ್ರಿ ವಾಶಿಂಗ್ಟನ್‌ನಲ್ಲಿ ಭಾರತ-ಮೆರಿಕಾ ಉನ್ನತ ಶಿಕ್ಷಣ ಶೃಂಗ ಸಭೆಯಲ್ಲಿ ಮ್ಮ ದೇಶದಲ್ಲಿ ಅಮೆರಿಕಾದ ಸಂಸ್ಥೆಗಳಿಗೆ ನುಕೂಲಕರವಾದ ಪರಿಸ್ಥಿತಿಗಳನ್ನು ರ್ಮಿಸುವ ಭರವಸೆ ಕೊಟ್ಟು ಬಂದು ಅದಕ್ಕೆ ಲ್ಲಿ ವಿಶ್ವವಿದ್ಯಾಲಯವನ್ನು ಒಂದು ಮಾದರಿಯಾಗಿ ಬೆಳೆಸಲು ಮಾಡುತ್ತಿರುವ ್ರಯತ್ನದ ಫಲವೇ ಇದು ಎಂದು ಡಿಯುಟಿಎ ೇಳಿದೆ. ದಿಲ್ಲಿ ವಿಶ್ವವಿದ್ಯಾಲಯವನ್ನು ಕಳಚಿ ಾಕಿ, ಡಿಯುಟಿಎ ಮತ್ತು ಇತರ ಂಘಟನೆಗಳನ್ನು ಧ್ವಂಸ ಮಾಡಿದರೆ ತನ್ನೆಲ್ಲ ಮೆರಿಕಾ-ಪರ ಸುಧಾರಣೆಗಳನ್ನು ಜಾರಿಗೆ ರಬಹುದು, ನಂತರ ಅದನ್ನು ದೇಶಾದ್ಯಂತ ುನರಾವರ್ತಿಸುವ ಮಾದರಿಯಾಗಿಸಬಹುದು ಂಬುದು ಯುಪಿಎ-2 ಮಾನವ ಸಂಪನ್ಮೂಲ ುಂತ್ರಿಗಳ ಹುನ್ನಾರ. ದಿಲ್ಲಿ ವಿಶ್ವವಿದ್ಯಾಲಯದ ುಪಕುಲಪತಿಗಳು ಮತ್ತು ಅವರ ಬಾಲಂಗೋಚಿಗಳ ಮೂಲಕ ಇದಕ್ಕೊಂದು ಪ್ರಯೋಗಶಾಲೆ ಮತ್ತು 'ತರಬೇತಿ ಹೊಂದಿದ ಲ್ಯಾಬೊರೇಟರಿ ಅಸಿಸ್ಟೆಂಟುಗಳ' ಒಂದು ತಂಡ ದಕ್ಕಿದಂತಾಗಿದೆ.

ಶಿಕ್ಷಣದಲ್ಲಿ ನವ-ಉದಾರವಾದದ ಮಾದರಿ ನಿರ್ಮಿಸುತ್ತಿರುವ ಈ ವಿಶ್ವವಿದ್ಯಾಲಯದಲ್ಲಿ ಕಳೆದ ಕೆಲವು ವರ್ಷಗಳಿಂದ 4000 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಹಲವಾರು ಯುವ ಅಧ್ಯಾಪಕರು 'ಅತಿಥಿ ಅಧ್ಯಾಪಕರು'ಗಳಾಗಿ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದಾರೆ. ಖಾಯಂ ಅಗಿರುವ ಅಧ್ಯಾಪಕರು ಕೂಡ ಕಳೆದೆರಡು ವರ್ಷಗಳಿಂದ ಯಾವುದೇ ಭಡ್ತಿ ಇಲ್ಲದೆ ಇದ್ದಾರೆ. ಭಡ್ತಿ ಪ್ರಕ್ರಿಯೆ ನಡೆಯದಂತೆ ಉಪಕುಲಪತಿಗಳು ನೋಡಿಕೊಂಡಿದ್ದಾರೆ. ಡಿಯುಟಿಎ ಶಿಕ್ಷಣದಲ್ಲಿ ನವ-ಉದಾರವಾದದ ಈ ಮಾದರಿ ನಿರ್ಮಾಣದ ವಿರುದ್ಧ ಕಳೆದ ಒಂದು ವರ್ಷದಿಂದ ಹೋರಾಟ ನಡೆಸುತ್ತಿದೆ. ಆದ್ದರಿಂದಲೇ ಅದರ ಮೇಲೆ ಯುಪಿಎ-2 ಮಾನವ ಸಂಪನ್ಮೂಲ ಮಂತ್ರಿಗಳ ಮತ್ತು ಅವರ ಬಂಟರಾಗಿ ಕೆಲಸ ಮಾಡುತ್ತಿರುವವರ ಕೆಂಗಣ್ಣು, ಇದನ್ನು ಸೋಲಿಸುತ್ತೇವೆ ಎಂದು ಡಿಯುಟಿಎ ಹೇಳಿದೆ.

ಅಸಮಾನತೆ

ಶಿಕ್ಷಣ ಉದ್ಯೋಗ ನ್ಯಾಯ ಎಂದವರಿಗೆ
ಲಾಠಿ ಗೋಲಿ ಜೈಲು.....
ಅನ್ಯಾಯವೆಸಗುತಿಹ ದುಷ್ಟ
ಭ್ರಷ್ಟರಿಗೆ ಅಧಿಕಾರದ ಐಲು.......

ಸಂಕಟಪಡುತಿಹಳು ಭಾರತಮಾತೆ
ಇಂಥ ಮಕ್ಕಳಿಗೆ ಯಾಕೆ ಜನ್ಮ ಕೊಟ್ಟೆನೆಂದು
ಆದರೂ ಕನಿಕರವಿಲ್ಲ ಪಶ್ಚಾತ್ತಾಪವಿಲ್ಲ.......
ತಾಯ ಗರ್ಭವ ಬಗೆದು ಸಂಪತ್ತು ಕನ್ನ ಹೊಡೆದವರಿಗೆ
ಜನತೆಯನು ಕತ್ತಲ ಬದುಕಿಗೆ ದೂಡಿ
ಹಣ ಅಧಿಕಾರದ ಮದದಲಿ ಮರೆಯುತಿಹ ಖೂಳರಿಗೆ.

ಬಡವರಿಗಿಲ್ಲ ಸೂರು, ಒಪ್ಪತ್ತಿನೂಟ
ಭ್ರಷ್ಟರಿಗೆ ಅಧಿಕಾರ ಹಣ ಬಂಗಲೆಯಾಟ
ದುಡಿಯಲು ಸಾವಿರ ಸಾವಿರ ಕೈಗಳ ಸಾಲುಗಳು
ಕೆಲಸ ಕೊಡದೇ ತುಂಬಿದ ಬರೀ ಖಾಲಿ ಹಾಳೆಗಳು.

ಸಾಕಿನ್ನು ಬಂಧುಗಳೆ, ಉದಾಸೀನತೆ- ತಾಳ್ಮೆ
ತಿರುವಿ ಹಾಕಿರಿ ಒಮ್ಮೆ ಮತ್ತೊಮ್ಮೆ.......
ಭಗತ್‌ಸಿಂಗ್ ಸುಭಾಸಚಂದ್ರ ವಿವೇಕರ ಚರಿತೆ
ಮತ್ತೆ ಮತ್ತೆ ಮೊಳಗಲಿ..............
ಇಂಕ್ವಿಲಾಬ್ - ಜಿಂದಾಬಾದ್
ಮುಷ್ಟಿ ಬಿಗಿದು ಎದ್ದೇಳಿ............
ಈ ಅಸಮಾನತೆ ತೊಲಗಿಸಲು.

● ಬಸವರಾಜ ಪೂಜಾರ, ಹಾವೇರಿ.



ಜಿ.ಎನ್.ನಾಗರಾಜ್ 12

ಹೊಸ ಜನರ ಅಧ್ಯಯನ ಸಂಘ ಹುನಾನ್‌ನಲ್ಲಿ ಚಳುವಳಿಯ ವಿಸ್ತರಣೆ

ಬೀಜಿಂಗ್‌ನಲ್ಲಿ ಮಾವೋ ಕಲಿಕೆ

ಈಗ ಮಾವೋರವರು ಚೀನಾದ ಅತ್ಯಂತ ಪ್ರಸಿದ್ಧ ವಿಶ್ವ ವಿದ್ಯಾನಿಲಯದಲ್ಲಿ ಗ್ರಂಥಾಲಯ ಸಹಾಯಕ. ಅಲ್ಲಿ ಅವರ ಮುಖ್ಯ ಕೆಲಸ ವಾಚನಾಲಯ ವಿಭಾಗದಲ್ಲಿ ಪತ್ರಿಕೆಗಳನ್ನು ಓದಲು ಬರುತ್ತಿದ್ದವರ ಹೆಸರುಗಳನ್ನು ಬರೆದು ಕೊಳ್ಳುವುದಾಗಿತ್ತು. ಅಲ್ಲಿಗೆ ಪತ್ರಿಕೆಗಳನ್ನು ಓದಲು ಬರುತ್ತಿದ್ದ ಖ್ಯಾತ ವಿದ್ವಾಂಸರನ್ನು ನೋಡಿ. ಅವರಿಗೆ ಎಲ್ಲಿಲ್ಲದ ಸಂತೋಷವಾಯಿತು. ಅವರಲ್ಲನೇಕರ ಬರಹಗಳನ್ನು ಅವರು ಓದಿ ಮೆಚ್ಚಿಕೊಂಡಿದ್ದವರೇ. ಅವರೊಡನೆ ಚರ್ಚೆ ನಡೆಸಿ ತಮ್ಮ ಅರಿವನ್ನು ವಿಸ್ತರಿಸಿಕೊಳ್ಳಲು ಒಂದು ಅಪೂರ್ವ ಅವಕಾಶ ದೊರಕಿತೆಂದು ಮಾವೋರವರಿಗೆ ಆಶ್ಚರ್ಯವೇನಿಲ್ಲ.

ಆದರೆ ಆ 'ಮಹಾ' ವಿದ್ವಾಂಸರುಗಳಿಗೆ- ಸಾವಿರಾರು ವರ್ಷಗಳಿಂದ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಬೀಜಿಂಗ್‌ನ ಸುಸಂಸ್ಕೃತ ಭಾಷೆಯನ್ನು ಮಾತನಾಡುವವರಿಗೆ ದಕ್ಷಿಣ ಚೀನಾದ ಗ್ರಾಮ್ಯ ಭಾಷೆಯಲ್ಲಿ ಮಾತನಾಡುತ್ತಿದ್ದ ಈ ಯಕಶ್ಚಿತ್ ಸಹಾಯಕ ಕೆಲಸದ ಯುವಕನ ಜೊತೆ ಚರ್ಚಿಸಲು ಸಮಯವಿರಲಿಲ್ಲ. ಈ ಸಮಯದಲ್ಲಿ ಮಾವೋರವರಿಗೆ ಹಿಂದೆ ಅಧ್ಯಾಪಕರಾಗಿದ್ದ ಚಾಂಗ್ ಬಹಳ ಸಹಾಯ ಮಾಡಿದರು. ತಮ್ಮ ಪುಸ್ತಕಗಳನ್ನು ಎರವಲು ನೀಡಿದರು. ಇತರ ಪ್ರಾಧ್ಯಾಪಕರಿಗೆ ಇವರ ಸಾಮರ್ಥ್ಯದ ಪರಿಚಯ ಮಾಡಿಸಿದರು.

ಅವರು ವಿ.ವಿ.ಯ ತರಗತಿಗಳಲ್ಲಿ ಉಪನ್ಯಾಸ ಕೇಳುವ ಅವಕಾಶವಿರಲಿಲ್ಲ. ಅದನ್ನು ಪಡೆದುಕೊಳ್ಳಲು ವಿ.ವಿ.ಯ ತತ್ವಶಾಸ್ತ್ರ ಸಂಘ, ಪತ್ರಿಕೋದ್ಯಮ ಸಂಘಗಳಿಗೆ ಸದಸ್ಯರಾದರು. ಈ ಸಂಘಗಳ ಸದಸ್ಯರು ವಿ.ವಿ.ಯ ವಿವಿಧ ಪದವಿಗಳ ವಿದ್ಯಾರ್ಥಿಗಳಲ್ಲದಿದ್ದರೂ ಪಾಠಗಳನ್ನು ಕೇಳಬಹುದಿತ್ತು. ಹೀಗೆ ಬೇಕೆನಿಸಿದ ಉಪನ್ಯಾಸಗಳನ್ನು ಕೇಳುವುದರ ಜೊತೆಗೇ ಅನೇಕ ವಿದ್ಯಾರ್ಥಿಗಳ ಪರಿಚಯವೂ ಆಯಿತು.

ಚೀನೀ ಭಾಷೆಯಲ್ಲಿ ಮೊದಲು ರಷ್ಯನ್ ಕ್ರಾಂತಿಯ ಬಗ್ಗೆ ಬರೆದ ಲಿ ದಝಾವೋರವರು ಇದೇ ವಿ.ವಿ.ಯ ಪ್ರಾಧ್ಯಾಪಕರಾಗಿದ್ದುದಲ್ಲದೇ ಗ್ರಂಥಾಲಯದ ಮುಖ್ಯಸ್ಥರೂ ಆಗಿದ್ದರು. ಇವರು ಲೆನಿನ್‌ರವರ ಅನೇಕ ಪುಸ್ತಕಗಳನ್ನು ಅನುವಾದ ಮಾಡಿದ್ದರು. ಲಿಯವರು ಬರೆದ ಲೇಖನಗಳು, ಅನುವಾದಗಳನ್ನೆಲ್ಲಾ ಮಾವೊ ಅಧ್ಯಯನ ಮಾಡಿದರು. ಅದರಲ್ಲಿ ಲೆನಿನ್‌ರವರ 'ಪ್ರಭುತ್ವ ಮತ್ತು ಕ್ರಾಂತಿ' ಮಾವೋರವರನ್ನು ಬಹಳ ಆಕರ್ಷಿಸಿತು. ಜೊತೆಗೆ ಲಿಯವರ ಜೊತೆ ಚರ್ಚಿಸುವ ಅವಕಾಶವೂ ಅವರಿಗೆ ದೊರಕಿತು. ಲಿಯವರು ಆಗಲೇ ಬರೆದಿದ್ದರು "ಲೆನಿನ್‌ರವರು ವಸಾಹತುಶಾಹಿ ದೇಶಗಳಲ್ಲಿ ಹಾಗೂ ಅರೆ ವಸಾಹತುಶಾಹಿ ದೇಶಗಳಲ್ಲಿ ರೈತರನ್ನು ಎಚ್ಚರಿಸದೇ ಅವರ ಭಾಗವಹಿಸುವಿಕೆಯಿಲ್ಲದೇ ಕ್ರಾಂತಿ ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ್ದಾರೆ.


ಆದ್ದರಿಂದ ರೈತರ ಬಳಿ ತೆರಳಿ. ಅವರು ಅನುಭವಿಸುತ್ತಿರುವ ಶೋಷಣೆಯ ಬಗ್ಗೆ ಅರಿವು ಮೂಡಿಸಿ. ತಮ್ಮ ಭವಿಷ್ಯ ತಾವೇ ರೂಪಿಸಿಕೊಳ್ಳುವ, ತಮಗೆ ತಾವೇ ಯಜಮಾನರಾಗುವ ಚಳುವಳಿಯಲ್ಲಿ ತೊಡಗಿಸಿ" ಈ ವಿಚಾರಗಳು ಮಾವೋರವರಿಗೆ ಅತ್ಯಂತ ಪ್ರಿಯವಾದ "ಲಿ ದಝಾವೋರವರ ಕೆಳಗೆ ನಾನು ಬಹಳ ಬೇಗ ಮಾರ್ಕ್ಸ್‌ವಾದಿಯಾಗಿ ಬೆಳವಣಿಗೆ ಹೊಂದಿದೆ" ಎಂದು ಮಾ ಬರೆಯುತ್ತಾರೆ. ಇಂತಹ ಕ್ರಾಂತಿಕಾರಿ ವಿಚಾರಶೀಲನನ್ನು 1927ರಲ್ಲಿ ಪಾಳೆಯಗಾರೀ ಯುದ್ಧಕೋರನೊಬ್ಬ ಕೊಂದು ಹಾಕಿದ. ಬಹಳ ಮಟ್ಟಿಗೆ ಇ ಚೀನಾದ ಕ್ರಾತಿಯಲ್ಲಿ ಬಲಿಯಾದ ಮೊದಲ ಕಮ್ಯುನಿಸ್ಟರು.

ಮಾವೋರವರ ಮೇಲೆ ಅತ್ಯಂತ ಹ ಪ್ರಭಾವ ಬೀರಿದವರು ಚೆನ್ ಡುಷಿಯು ಇವರು ಕೂಡ ಬೀಜಿಂಗ್ ವಿ.ವಿ.ಯ ಪ್ರಾಧ್ಯಾಪಕರಾಗಿದ್ದರು. 'ನವ ಯುವಜ ಪತ್ರಿಕೆಯ ಸಂಪಾದಕರು. ಇವರು ಹಾ ಲಿ ದಝಾವೋರವರು ಪ್ರಜಾಪ್ರಭುತ್ವದ ಚಿಂತನೆಗಳಿಂದ ಆಕರ್ಷಿತರಾಗಿದ್ದವರು. ಆದರೆ ಈ ಪ್ರಜಾಪ್ರಭುತ್ವದ ದೇಶಗಳು, ಅವುಗಳ ನಾಯಕರು ಚೀನಾದ ಬಗ್ಗೆ ಅನುಸರಿಸುತ್ತಿದ್ದ ಕ್ರೂರ ನೀತಿಗಳು ಅ ಹೇಳುವ ಪ್ರಜಾಪ್ರಭುತ್ವವೆಲ್ಲ ಬೊಗಳೆ ಎಂದು ಅವರಿಗೆ ಅರ್ಥವಾಯಿತು. ಆ ಮಾರ್ಕ್ಸ್‌ವಾದದತ್ತ ಆಕರ್ಷಿತರಾದರು. ಹಿಂದಿನ ಸಂಚಿಕೆಯಲ್ಲಿ ವಿವರಿಸಿದಂತೆ 'ನವ ಯುವಜನತೆ' ಪತ್ರಿಕೆಯ ಮೂಲ ಚೀನಾದ ಒಂದು ತಲೆಮಾರನ್ನೇ ಮಾರ್ಕ್ಸ್‌ವಾದದತ್ತ ಸೆಳೆದರು; ಆ ಮೂ ಚೆನ್ ಡುಷಿಯು ಮುಂದೆ ಚೀನಾದ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಾದರು. ಮೊದಲ ಪ್ರಧಾನ ಕಾರ್ಯದರ್ಶಿಯಾದರು ಈ ಬೀಜಿಂಗ್ ಭೇಟಿಯಲ್ಲಿ ಉಂಟಾದ ಒಡನಾಟ ಬಹಳ ಕಾಲ ಮುಂದುವರೆ ಯಿತು. ಮಾರ್ಕ್ಸ್‌ವಾದದಲ್ಲಿ ಮೊದಲ ಗುರುವಾದ ಚೆನ್ ಡುಷಿಯುರವರ ಜ ಮಾವೊರವರಿಗೆ ಚೀನಾದ ಕ್ರಾಂತಿಯ ದಾರಿಯ ಬಗೆ ಮುಂದೆ ತೀವ್ರ ಸಂಘರ್ಷವುಂಟಾಯಿತು.

ಮಾವೋರವರ ಬೀಜಿಂಗ್ ಜೀ ಸಾಕಷ್ಟು ಕಷ್ಟಕರವಾಗಿಯೇ ಇತ್ತು. ಅ ಸಿಗುತ್ತಿದ್ದ 8 ಚೀನೀ ರೂ.ಗಳ ವೇತನದಲ್ಲಿ ಜೀವನ ಸಾಗಿಸುತ್ತಿದ್ದರು. ಎಂಟು ಹುನಾನ್ ರಾಜ್ಯದ ಯುವಕರು ಸೇರಿ ಒ ಕೊಠಡಿಯನ್ನು ಬಾಡಿಗೆಗೆ ಹಿಡಿದು ಮಾಡುತ್ತಿದ್ದರು. ಅದರಲ್ಲಿ ಮಲಗಿ ಮಗ್ಗಲು ಬದಲಿಸ ಬೇಕಾದರೆ ಜೊತೆಯ ಮಗ್ಗಲು ಬದಲಿಸುತ್ತಿದ್ದೇವೆಂದು ಹೇಳಿ ಬದಲಿಸಬೇಕಾಗುತ್ತಿತ್ತು. ಇಂತಹ ಸ್ಥಿತಿ ಬೀಜಿಂಗ್ ನಗರದ ವಿನ್ಯಾಸ, ಉದ್ಯಾನ ಮರಗಳು ಅವರ ಬೇಸರವನ್ನು ಕಳೆಯುತ್ತಿ ಸಂತಸವನ್ನು ಕೊಡುತ್ತಿದ್ದವು.

ಮಾವೋರವರ ಪ್ರೇಮ ಪ್ರಸಂಗ

ಮಾವೋರವರಿಗೆ ಅವರ ಸಣ್ಣ ವಯಸ್ಸಿನಲ್ಲಿಯೇ ಒಂದು ವಿವಾಹವಾಗಿತ್ತು. ಚೀನಾದ ಅಂದಿನ ಸಂಪ್ರದಾಯದಂತೆ ಅವರ ತಂದೆ ಅವರಿನ್ನೂ ಪ್ರಾಥಮಿಕ ಶಾಲೆಯಲ್ಲಿದ್ದಾಗಲೇ ಅವರಿಗೆ ಹದಿನೈದು ವರ್ಷ ವಯಸ್ಸಾಗಿದ್ದಾಗ ಅವರಿಗಿಂತ ಸುಮಾರು ಐದು ವರ್ಷ ದೊಡ್ಡವರಾಗಿದ್ದ ಹುಡುಗಿಯನ್ನು ಮದುವೆ ಮಾಡಿದ್ದರು. ಮಾವೋರವರು ಅವರ ಜೊತೆ ಒಂದು ದಿನವೂ ವಿವಾಹ ಜೀವನ ನಡೆಸಲು ನಿರಾಕರಿಸಿದರು. ಹೀಗಾಗಿ ಅವರ ಸಂಸಾರಿಕ ಜೀವನ ಆರಂಭವಾಗಲೇ ಇಲ್ಲ. ಮಾವೋರವರ ಬೀಜಿಂಗ್ ವಾಸದಲ್ಲಿಯೇ ಒಂದು ವಿಶೇಷ ಜರುಗಿತು. ಮಾವೋರವರಿಗೆ ಅವರ ಬೀಜಿಂಗ್ ವಾಸಕ್ಕೆ ಸಹಾಯ ಮಾಡಿದ ಪ್ರಾಧ್ಯಾಪಕ ಯಾಂಗ್‌ರವರ ಮನೆಗೆ ಪದೇ ಪದೇ ಭೇಟಿ ನೀಡಬೇಕಾಗುತ್ತಿತ್ತು. ಆಗ ಅವರ ಮಗಳು ಯಾಂಗ್ ಕಾಯ್ ಹುಯಿರವರನ್ನು ಸಂಧಿಸುತ್ತಿದ್ದರು. ಆಕೆ ಪತ್ರಿಕೋದ್ಯಮ ವಿದ್ಯಾರ್ಥಿಯಾಗಿದ್ದರಿಂದ ವಿ.ವಿ. ಆವರಣದಲ್ಲಿಯೂ ಭೇಟಿಯಾಗುತ್ತಿದ್ದರು. ಹೀಗೆ ಅವರ ನಡುವೆ ವಿಚಾರ ವಿನಿಮಯ ಚರ್ಚೆ ನಡೆಯುತ್ತಿತ್ತು. ಅಧ್ಯಯನ ಶೀಲೆಯೂ, ಬುದ್ಧಿವಂತೆಯೂ ಆಗಿದ್ದ ಯಾಂಗ್ ಕಾಯ್ ಹುಯಿ ದಿಟ್ಟೆಯೂ ಪ್ರಗತಿಪರ ಮನೋಭಾವದ ಯುವತಿಯೂ ಬಹಳ ಸುಂದರಿಯೂ ಕೂಡ. ಮಾವೋ ಮತ್ತು ಯಾಂಗ್ ಪರಸ್ಪರ ಆಕರ್ಷಿತರಾದರು. ಅವರ ನಡುವೆ ಪ್ರೇಮ ಪಲ್ಲವಿಸಿತು. ಅಂದಿನ ದಿನಗಳಲ್ಲಿ ಯುವಕ-ಯುವತಿಯರು ತಮಗೆ ತಾವೇ ಪ್ರೇಮಿಸುವುದು ಕೇಳದ ವಿಷಯವಾಗಿತ್ತು. ಮಾವೊ ಮತ್ತು ಯಾಂಗ್ ಪ್ರೇಮಿಸಿದರೂ ಅಂದಿನ ಚೀನಾದ ಪರಿಸ್ಥಿತಿಯಲ್ಲಿ ವಿವಾಹವನ್ನು ಮುಂದೂಡುವುದೇ ಲೇಸೆಂದು ಭಾವಿಸಿದರು. ■



JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH